# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 15 ಮಂಗಳವಾರ 2024

45

ಸಂಪುಟ: 45 | ಸಂಚಿಕೆ: 179 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ಹುಬ್ಬಳ್ಳಿ ಗಲಭೆ ಪ್ರಕರಣದ ಕೇಸ್ ವಾಪಸ್: ಸರ್ಕಾರದ ವಿರುದ್ಧ

## ರಾಜ್ಯಪಾಲರಿಗೆ ಬಿಜೆಪಿ ದೂರು

ಬೆಂಗಳೂರು, ಅ.14(ಕೆಎಂಶಿ)– ಹುಬ್ಬಳ್ಳಿ ಗಲಭೆಗೆ ಸಂಬಂಧಿಸಿದಂತೆ ದುಷ್ಕರ್ಮಿಗಳ ಮೇಲಿನ ಪ್ರಕರಣಗಳನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂಪಡೆದ ಕುರಿತು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಬಿಜೆಪಿ ದೂರು ಸಲ್ಲಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಗಲಭೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳುವುದಾಗಿ ರಾಜ್ಯಪಾಲರು ಭರವಸೆ ನೀಡಿದ್ದಾರೆ ಎಂದರು.

ರಾಜ್ಯ ಸರ್ಕಾರದ ಈ ಕ್ರಮ ಖಂಡಿಸಿ ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು, ಮತಬ್ಯಾಂಕ್ ಹಾಗೂ ಹಗರಣಗಳ ಮರೆಮಾಚಲು ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವ ಕಾರ್ಯಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದರು.

ಕುರ್ಚಿ ಅಲುಗಾಡುತ್ತಿರುವ ಸಮಯದಲ್ಲಿ ಮುಸ್ಲಿಮರು ತಮ್ಮ ಪರವಾಗಿದ್ದಾರೆ ಎಂಬುದಾಗಿ ಬಿಂಬಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ನಿರ್ಧಾರ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಬಿಜೆಪಿ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂಗಳ ವಿರೋಧಿಯಾಗಿದ್ದು ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ದೇಶದ್ರೋಹಿಗಳನ್ನು ರಕ್ಷಿಸುವ ಕೆಲಸನ್ನು ಮಾಡುತ್ತಿದೆ ಎಂದು ಆರೋಪಿಸಿದರು. ಪಕ್ಷದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಲ್ಪಸಂಖ್ಯಾತರ ಓಲೈಕೆ ಮಾಡುವ ದುಷ್ಟ ಕಾಂಗ್ರೆಸ್ ಸರ್ಕಾರ, ಹುಬ್ಬಳ್ಳಿಯಲ್ಲಿ 2022ರಲ್ಲಿ ಪೊಲೀಸ್ ಠಾಣೆ ಮೇಲೆ ಕಲ್ಲೆಸೆದು ದಾಳಿ ಮಾಡಿ, ಗಲಭೆ ಸೃಷ್ಟಿಸಿದ್ದ ದೇಶದ್ರೋಹಿಗಳ ಮೇಲಿನ ಮೊಕದ್ದಮೆಗಳನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಂದೆ ಪಡೆದಿದೆ ಎಂದರು.

ಹುಬ್ಬಳ್ಳಿ ಘಟನೆ ವಿಷಯದಲ್ಲಿ ಎನ್‌ಐಎ ತನಿಖೆ ನಡೆಯುತ್ತಿದೆ, ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿದೆ, ಯಾವುದೇ ಮಟ್ಟಕ್ಕೆ ಇಳಿಯಲು ಕಾಂಗ್ರೆಸ್ ಸರ್ಕಾರ ಹೇಸುವುದಿಲ್ಲ ಎಂಬುದಕ್ಕೆ ■ 6ನೇ ಪುಟಕ್ಕೆ



ಹುಬ್ಬಳ್ಳಿ ಗಲಭೆ ಪ್ರಕರಣದ ಆರೋಪಿಗಳ ವಿರುದ್ಧದ ಕೇಸ್‌ಗಳನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿರುವ ಬಗ್ಗೆ ಬಿಜೆಪಿ ನಿಯೋಗ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ಸಲ್ಲಿಸಿತು.

## ಕೋರ್ಟ್ ಅನುಮತಿಸಿದರಷ್ಟೇ ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್

ಹುಬ್ಬಳ್ಳಿ, ಅ.14– ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ವೇಳೆ ನಡೆದ ಹಳೇ ಹುಬ್ಬಳ್ಳಿ ಗಲಭೆಯ ವಿಷಯದಲ್ಲಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂಬ ಕಾರಣಕ್ಕೆ ಈ ಪ್ರಕರಣ ಹಿಂಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ. ಕೋರ್ಟ್ ಅನುಮತಿ ನೀಡಿದರೆ ಮಾತ್ರ ಪ್ರಕರಣ ಹಿಂಪಡೆಯಲು ಸಾಧ್ಯವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಮಾತನಾಡಿ, ಉದ್ದೇಶಪೂರ್ವಕವಾಗಿ, ಸುಳ್ಳು ಪ್ರಕರಣಗಳು, ಹೋರಾಟಗಳಿಗೆ ಸಂಬಂಧಿಸಿ ಪ್ರಕರಣಗಳನ್ನು ದಾಖಲಿಸಿದ್ದರೆ, ಅವುಗಳನ್ನು ಪರಿಶೀಲಿಸುವುದಕ್ಕಾಗಿಯೇ ಸಂಪುಟ ಉಪಸಮಿತಿ ರಚಿಸಲಾಗುತ್ತದೆ. ಇದು ಎಲ್ಲ ಸರ್ಕಾರದಲ್ಲೂ ಅಸ್ತಿತ್ವದಲ್ಲಿರುತ್ತದೆ ಎಂದರು. ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ■ 6ನೇ ಪುಟಕ್ಕೆ



ರೇಣುಕಾಸ್ವಾಮಿ ಕೊಲೆ ಪ್ರಕರಣ

## ನಟ ದರ್ಶನ್, ಪವಿತ್ರಾ ಗೌಡ ಜಾಮೀನು ಅರ್ಜಿ ವಜಾ

### ರವಿಶಂಕರ್, ದೀಪಕ್‌ಗೆ ಬೇಲ್



ಬೆಂಗಳೂರು, ಅ.14– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಅವರಿಗೆ ಜಾಮೀನು ನೀಡಲು ಬೆಂಗಳೂರು ಸೆಷನ್ಸ್ ನ್ಯಾಯಾಲಯವು ನಿರಾಕರಿಸಿದೆ. ಆದರೆ, ಎ13 ದೀಪಕ್, ಎ8 ರವಿಶಂಕರ್‌ಗೆ ಮಾತ್ರ ಜಾಮೀನು ಮಂಜೂರು ಮಾಡಲಾಗಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾಗಿರುವ ನಟ ದರ್ಶನ್, ಪವಿತ್ರಗೌಡ, ಎಂ. ಲಕ್ಷ್ಮಣ್, ಆರ್.ನಾಗರಾಜು, ರವಿಶಂಕರ್ ಮತ್ತು ದೀಪಕ್ ಕುಮಾರ್ ಅವರ ಜಾಮೀನು ಅರ್ಜಿಗಳಿಗೆ ಸಂಬಂಧಿಸಿದ ಆದೇಶವನ್ನು ಬೆಂಗಳೂರಿನ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶ ಜೈಶಂಕರ್ ಅವರು ಸೋಮವಾರ ಪ್ರಕಟಿಸಿದ್ದಾರೆ. ಮೊದಲನೇ ಆರೋಪಿ ಪವಿತ್ರಾಗೌಡ, 2 ನೇ ಆರೋಪಿ ನಟ ದರ್ಶನ್ ತೂಗುದೀಪ, 11 ನೇ ಆರೋಪಿ ಆರ್. ನಾಗರಾಜು, 12ನೇ ಆರೋಪಿ ಎಂ ಲಕ್ಷ್ಮಣ್‌ಗೆ ಜಾಮೀನು ನಿರಾಕರಣೆ ಮಾಡಿದೆ. 13ನೇ ಆರೋಪಿ ದೀಪಕ್ ಕುಮಾರ್ ಅಲಿಯಾಸ್ ದೀಪಕ್ ಹಾಗೂ 8 ನೇ ಆರೋಪಿ ರವಿಶಂಕರ್ ಅಲಿಯಾಸ್ ರವಿಗೆ ಜಾಮೀನು ಮಂಜೂರು ಮಾಡಿದೆ.

**ಒಟ್ಟು 5 ಮಂದಿಗೆ ಬೇಲ್:** ರೇಣುಕಾಸ್ವಾಮಿ ಕೊಲೆ ■ 6ನೇ ಪುಟಕ್ಕೆ

ವಾಲ್ಮೀಕಿ ನಿಗಮ ಹಗರಣ

## ಮಾಜಿ ಸಚಿವ ಬಿ.ನಾಗೇಂದ್ರಗೆ ಷರತ್ತುಬದ್ಧ ಜಾಮೀನು



ಬೆಂಗಳೂರು, ಅ.14– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದಲ್ಲಿ ಬಂಧನ ಕ್ಕೊಳಗಾಗಿದ್ದ ಮಾಜಿ ಸಚಿವ ಹಾಗೂ ಶಾಸಕ ಬಿ.ನಾಗೇಂದ್ರಗೆ ಜಾಮೀನು ಸಿಕ್ಕಿದೆ. ಜನಪ್ರತಿನಿಧಿಗಳ ನ್ಯಾಯಾಲಯ ಈ ಸಂಬಂಧ ಆದೇಶ ಹೊರಡಿಸಿದ್ದು, ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ ಹಾಗೂ 2 ಲಕ್ಷದ ಬಾಂಡ್, ಇಬ್ಬರ ಶ್ಯೂರಿಟಿ ನೀಡಲು ಸೂಚನೆ ನೀಡಿದೆ.

ವಾಲ್ಮೀಕಿ ನಿಗಮದಲ್ಲಿ ನಡೆದಿದ್ದ ಹಗರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ)ಬಿ. ನಾಗೇಂದ್ರ ಅವರನ್ನು ಬಂಧನಕ್ಕೆ ಒಳಪಡಿಸಿತ್ತು. ಪ್ರಕರಣದ ತನಿಖೆ ನಡೆಸಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಇತ್ತೀಚೆಗೆ ಚಾರ್ಜ್‌ಶೀಟ್ (ಆರೋಪ ಪಟ್ಟಿ) ಸಲ್ಲಿಸಿದ್ದರು. 187 ಕೋಟಿ ರೂ. ಹಗರಣ ಸಂಬಂಧ 4,970 ಪುಟಗಳ ಚಾರ್ಜ್‌ಶೀಟ್ ಜೊತೆಗೆ 144 ಪುಟಗಳ ದೂರು ಸಲ್ಲಿಸಿದ್ದರು. ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಚಾರ್ಜ್‌ಶೀಟ್‌ನಲ್ಲಿ ಮಾಜಿ ಸಚಿವ ನಾಗೇಂದ್ರ ಎ1 ಆರೋಪಿಯಾಗಿದ್ದರು.

**ಎಸ್‌ಐಟಿ ಕ್ಲೀನ್ ಚಿಟ್:** ಇದೇ ಪ್ರಕರಣದ ತನಿಖೆಯನ್ನು ನಡೆಸಿದ್ದ ಎಸ್‌ಐಟಿ ತನ್ನ ಚಾರ್ಜ್‌ಶೀಟ್‌ನಲ್ಲಿ ಸಚಿವ ಬಿ.ನಾಗೇಂದ್ರ ಅವರ ಹೆಸರನ್ನು ■ 6ನೇ ಪುಟಕ್ಕೆ

## ಡಿಜೆ ಹಳ್ಳಿ–ಕೆಜಿ ಹಳ್ಳಿ ಕೇಸ್ ವಾಪಸ್ ಪಡೆಯುವಂತೆ ಸರ್ಕಾರಕ್ಕೆ ಬಿ.ಕೆ. ಹರಿಪ್ರಸಾದ್ ಆಗ್ರಹ



ಬೆಂಗಳೂರು, ಅ.14– 2022ರಲ್ಲಿ ನಡೆದಿದ್ದ ಹಳೇ ಹುಬ್ಬಳ್ಳಿ ಗಲಭೆ ಪ್ರಕರಣದ ಆರೋಪಿಗಳ ಮೇಲಿನ ಕೇಸ್ ವಾಪಸ್ ಪಡೆದುಕೊಳ್ಳಲು ಸಿಎಂ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆ ತೀರ್ಮಾನ ತೆಗೆದುಕೊಂಡಿತ್ತು. ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿಪಕ್ಷಗಳು ಸೇರಿದಂತೆ ಹಲವೆಡೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೆ ಕಾಂಗ್ರೆಸ್ ಹಿರಿಯ ನಾಯಕರೂ ಆದ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಡಿಜೆ ಹಳ್ಳಿ, ಕೆಜೆ ಹಳ್ಳಿ ಗಲಭೆಯಲ್ಲಿ ಅಮಾಯಕರ ಮೇಲೆ ಆಗಿರುವ ಕೇಸ್ ವಾಪಸ್ ಪಡೆಯುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಡಿಜೆ ಹಳ್ಳಿ, ಕೆಜಿ ಹಳ್ಳಿ ಪ್ರಕರಣದಲ್ಲಿ ಅಮಾಯಕರ ಮೇಲೆ ಆಗಿರುವ ಪ್ರಕರಣಗಳನ್ನು ಸರ್ಕಾರ ವಾಪಸ್ ಪಡೆಯಬೇಕು. ನಾನೊಬ್ಬ ಬೆಂಗಳೂರು ನಗರದ ಮತದಾರನಾಗಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಎಂದು ಅವರು ಆಗ್ರಹಿಸಿದ್ದಾರೆ.

**ಏನಿದು ಡಿಜೆ ಹಳ್ಳಿ, ಕೆಜಿ ಹಳ್ಳಿ ಘಟನೆ:** ಮಹಮದ್ ಪೈಗಂಬರ್ ಬಗ್ಗೆ ಆಕ್ಷೇಪಾರ್ಹ ರೀತಿಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ■ 6ನೇ ಪುಟಕ್ಕೆ

ಗುಪ್ತಚರ ದಳದ ವರದಿ ಬೆನ್ನಲ್ಲೇ

## ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ಝಡ್ ಶ್ರೇಣಿ ಭದ್ರತೆ



ಬೆಂಗಳೂರು, ಅ.14– ರಾಜ್ಯದ ಕಾಂಗ್ರೆಸ್ ಸರ್ಕಾರದ ಮತ್ತು ಗವರ್ನರ್ ನಡುವಿನ ಸಂಘರ್ಷ ತಾರಕಕ್ಕೇರಿರುವ ನಡುವೆಯೇ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಕೇಂದ್ರ ಸರಕಾರ ಹೆಚ್ಚುವರಿ ಭದ್ರತೆ ಕಲ್ಪಿಸಿದೆ. ಗುಪ್ತಚರ ದಳದ ವರದಿ ಆಧರಿಸಿ ಗೆಹ್ಲೋಟ್ ಅವರಿಗೆ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 'ಝಡ್' ಶ್ರೇಣಿ ಭದ್ರತೆ ಕಲ್ಪಿಸಲಾಗಿದೆ. ಆದರೆ ಇದು ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಸೀಮಿತವಾಗಿದೆ.

ಇನ್ನು ಮುಂದೆ ಸಿಆರ್‌ಪಿಎಫ್ ಸಿಬ್ಬಂದಿ ರಾಜ್ಯಪಾಲರ ರಕ್ಷಣೆ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. ಕೆಲ ದಿನಗಳಿಂದ ರಾಜ್ಯಪಾಲರು ಬುಲೆಟ್ ಪ್ರೂಫ್ ಕಾರು ಬಳಸುತ್ತಿದ್ದು ಈಗ ಭದ್ರತೆ ಹೆಚ್ಚಿಸಿರುವುದು ಮಹತ್ವ ಪಡೆದುಕೊಂಡಿದೆ. ಮುಡಾ ನಿವೇಶನ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ■ 6ನೇ ಪುಟಕ್ಕೆ

## ಇಂದು ರಾಜ್ಯಕ್ಕೆ ಕೆ.ಸಿ. ವೇಣುಗೋಪಾಲ್

● ಮುಡಾ ಪ್ರಕರಣ ಚರ್ಚೆ ಸಾಧ್ಯತೆ ● ಕಾಂಗ್ರೆಸ್‌ನಲ್ಲಿ ಗರಿಗೆದರಿದ ವಿದ್ಯಮಾನ



ಬೆಂಗಳೂರು, ಅ.14(ಕೆಎಂಶಿ)– ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣದ ತನಿಖೆಗೆ ನ್ಯಾಯಾಲಯ ಆದೇಶ ನೀಡಿದ ನಂತರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ರಾಜ್ಯಕ್ಕೆ ಎರಡು ದಿನ ಪ್ರವಾಸ ಕೈಗೊಂಡಿರುವುದು ಕಾಂಗ್ರೆಸ್ ವಿದ್ಯಮಾನ ಗರಿಗೆದರುವಂತೆ ಮಾಡಿದೆ. ಸಂಸತ್‌ನ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷರೂ ಆಗಿರುವ ವೇಣುಗೋಪಾಲ್, ಸಭೆ ನಡೆಸುವ ಹಿನ್ನೆಲೆಯಲ್ಲಿ ನಾಳೆಯಿಂದ ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪಿನ ನಂತರ ಸಿದ್ದರಾಮಯ್ಯ ಪರ ಇಲ್ಲವೇ ವಿರುದ್ಧ ಎಐಸಿಸಿ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಕರ್ನಾಟಕ ಭೇಟಿ ಸಂದರ್ಭದಲ್ಲಿ ವೇಣುಗೋಪಾಲ್, ಗೌಪ್ಯವಾಗಿ ನಗರಕ್ಕೆ ಧಾವಿಸಿ, ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿ ಹಿಂತಿರುಗಿದ್ದರು.

ಪಿಎಸಿ ಸಭೆ ಹಿನ್ನೆಲೆಯಲ್ಲಿ ಬರುತ್ತಿರುವ ವೇಣುಗೋಪಾಲ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯದ ಸಚಿವರೂ, ನಾಯಕರೊಂದಿಗೆ ಚರ್ಚೆ ಮಾಡಲಿದ್ದಾರೆ. ಈ ಮಧ್ಯೆ, ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಯಾವುದೇ ಕ್ಷಣದಲ್ಲಿ ಘೋಷಣೆ ಆಗುವ ಸಾಧ್ಯತೆ ಇದೆ.

ಮಹಾರಾಷ್ಟ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಹರಸಾಹಸ ನಡೆಸುತ್ತಿರುವ ಎನ್‌ಡಿಎ ಮೈತ್ರಿಕೂಟ ಕರ್ನಾಟಕದ ಮುಖ್ಯಮಂತ್ರಿ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ಅಸ್ತ್ರವನ್ನೇ ಮುಂದಿಟ್ಟುಕೊಂಡು ಚುನಾವಣಾ ಪ್ರಚಾರಕ್ಕೆ ಬಿಜೆಪಿ ಮುಂದಾಗಿರುವುದು ಕಾಂಗ್ರೆಸ್ ವರಿಷ್ಠರಿಗೆ ತಲೆನೋವಾಗಿದೆ. ಹರಿಯಾಣ ವಿಧಾನಸಭಾ ಚುನಾವಣೆ ಸಂದರ್ಭದಲ್ಲೂ ಬಿಜೆಪಿ ಇದೇ ಅಸ್ತ್ರ ಬಳಕೆ ಮಾಡಿ ರಾಜಕೀಯ ಲಾಭ ಪಡೆಯಿತು. ಅದೇ ತಂತ್ರವನ್ನು ಮಹಾರಾಷ್ಟ್ರ ಚುನಾವಣೆಯಲ್ಲೂ ಬಳಕೆ ಮಾಡುವ ಪರಿಣಾಮದ ಬಗ್ಗೆ ವೇಣುಗೋಪಾಲ್ ನಾಳೆ ರಾಜ್ಯ ನಾಯಕರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಮಾತುಕತೆ ವೇಳೆ ವೇಣುಗೋಪಾಲ್, ರಾಜ್ಯ ನಾಯಕರಿಗೆ ಯಾವ ಸಂದೇಶ ನೀಡಬಹುದೆಂಬ ಬಗ್ಗೆ ಕುತೂಹಲ ಮೂಡಿದೆ.

ಸಿದ್ದರಾಮಯ್ಯ ಅವರು, ತಾವು ಅಧಿಕಾರದಿಂದ ಕೆಳಗಿಳಿಯುವುದಿಲ್ಲ ಎಂದು ನಿನ್ನೆ ಬೆಳಗಾವಿಯಲ್ಲಿ ಘೋಷಣೆ ಮಾಡಿದ್ದಾರೆ, ಅಷ್ಟೇ ಅಲ್ಲ, ಉಳಿದ ಅವಧಿಯಲ್ಲೂ ನಮ್ಮದೇ ಆಡಳಿತ ಎಂದಿದ್ದಾರೆ. ಮುಡಾ ಪ್ರಕರಣ ಕಾಂಗ್ರೆಸ್ ವರಿಷ್ಠರನ್ನೇ ಇಕ್ಕಟ್ಟಿಗೆ ಸಿಲುಕಿಸಿದೆ, ಒಂದೆಡೆ ಮುಖ್ಯಮಂತ್ರಿ ಪರ ನಿಂತರಾದರೂ, ರಾಷ್ಟ್ರಮಟ್ಟದಲ್ಲಿ ಆಗುತ್ತಿರುವ ಮುಜುಗರದಿಂದ ತಪ್ಪಿಸಿಕೊಳ್ಳಲು ಯಾವ ನಿರ್ಣಯ ಕೈಗೊಳ್ಳುವರೆಂಬ ಕುತೂಹಲ ಮೂಡಿಸಿದೆ.

## 2ಎ ಮೀಸಲಾತಿ: 18ರಂದು ಬೆಂಗಳೂರಿನಲ್ಲಿ ಧರಣಿ

ಬಸವಜಯ ಮೃತ್ಯುಂಜಯ ಸ್ವಾಮೀಜಿ ಘೋಷಣೆ



ಬೆಳಗಾವಿ: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ನಮ್ಮ ಸಮುದಾಯಕ್ಕೆ '2ಎ' ಮೀಸಲಾತಿ ನೀಡುವ ವಿಚಾರವಾಗಿ ಯಾವ ಪ್ರಗತಿಯಾಗಲಿಲ್ಲ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಗಾಗಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮುದಾಯದ ಎಲ್ಲ ಪದಾಧಿಕಾರಿಗಳು ಅ.18ರಂದು ಬೆಂಗಳೂರಿನಲ್ಲಿ ಧರಣಿ ನಡೆಸಲಿದ್ದೇವೆ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು. ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಮುಖ್ಯಮಂತ್ರಿ ■ 6ನೇ ಪುಟಕ್ಕೆ





## ದಸರಾ ಗಜಪಡೆ ತವರಿಗೆ

ಸಾಂಪ್ರದಾಯಿಕ ಪೂಜೆಯೊಂದಿಗೆ ಬೀಳ್ಕೊಡುಗೆ





ಅರಮನೆಯಿಂದ ಸ್ವಸ್ಥಾನದತ್ತ ಸಾಗಲು ಲಾರಿ ಏರಿದ ಕ್ಯಾಪ್ಟನ್ ಅಭಿಮನ್ಯು

ಮೈಸೂರು, ಅ.14(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಕೇಂದ್ರಬಿಂದುವಾದ ಜಂಬೂಸವಾರಿಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಗಿದ್ದ, ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಸೋಮವಾರ ಅರಮನೆ ಆವರಣದಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡು ತಂಡಗಳಲ್ಲಿ ವಿವಿಧ ಆನೆ ಶಿಬಿರಗಳಿಂದ ಮೈಸೂರು ಅರಮನೆ ಆವರಣಕ್ಕೆ ಆಗಮಿಸಿದ್ದ 14 ಆನೆಗಳಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ 11 ಆನೆಗಳು ಪಾಲ್ಗೊಂಡು ಮೂರು ಆನೆಗಳು ಅರಮನೆ ಆವರಣದಲ್ಲೇ ವಿಶ್ರಾಂತಿ ಪಡೆದಿದ್ದವು. ಜಂಬೂಸವಾರಿ ಮುಗಿದು ಎರಡು ದಿನದ ನಂತರ ಆನೆಗಳಿಗೆ ಸಾಂಪ್ರದಾಯಿಕ ಬೀಳ್ಕೊಡುಗೆ ನೀಡಿ, ಮುಂದಿನ ವರ್ಷ ಮತ್ತೆ ಬರುವಂತೆ ಮಾವುತ, ಕಾವಾಡಿಗಳಿಗೆ ಗೌರವ ಧನ ನೀಡಿ ಸತ್ಕರಿಸಲಾಯಿತು.

ಅರಮನೆ ಆವರಣದ ತ್ರಿನೇಶ್ವರ ದೇವಾಲಯದ ಪಕ್ಕದಲ್ಲಿರುವ ಮೈದಾನದಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಅವರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಕಬ್ಬು, ಬೆಲ್ಲ, ಪಂಚಫಲ ನೀಡಲಾಯಿತು. ಬಳಿಕ ಆನೆಗಳಿಗೆ ಪುಷ್ಪಾರ್ಚನೆ ಮಾಡಲಾಯಿತು. ಪೂಜೆ ನೆರವೇರಿದ ಬಳಿಕ ಆನೆಗಳಿಗೆ ದೃಷ್ಟಿ ತೆಗೆಯಲು ಬೂದುಕುಂಬಳಕಾಯಿಯನ್ನು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಅವರು ಆನೆಗಳಿಗೆ ಇಳಿ ತೆಗೆದು ಹೊಡೆಯುವ ಮೂಲಕ ಪೂಜಾ ಕಾರ್ಯಕ್ಕೆ ತೆರೆ ಎಳೆದರು. ಪೂಜೆ ಮುಗಿದ ನಂತರ ಆನೆಗಳನ್ನು ಶೆಡ್‌ಗೆ ಕರೆದೊಯ್ದು ಕೆಲ ಕಾಲ ವಿಶ್ರಾಂತಿ ನೀಡಲಾಯಿತು. ನಂತರ ಎಲ್ಲಾ ಆನೆಗಳಿಗೂ ನೀರು ಕುಡಿಸಿ, ಲಾರಿಗೆ ಹತ್ತಿಸುವ ಪ್ರಕ್ರಿಯೆ ಆರಂಭಿಸಲಾಯಿತು.

**ಹಠ ಮಾಡಲಿಲ್ಲ:** ದಸರಾ ಗಜಪಡೆಯ 14 ಆನೆಗಳಲ್ಲಿ ಲಾರಿ ಹತ್ತಲು ಈ ಬಾರಿ ಯಾವ ಆನೆಯೂ ಹಠ ಮಾಡಲಿಲ್ಲ. ಲಾರಿಗೆ ಹತ್ತಿಸಲು ಗ್ರೀನ್ ಸಿಗ್ನಲ್ ಸಿಕ್ಕುತ್ತಿದ್ದಂತೆಯೇ ■ 6ನೇ ಪುಟಕ್ಕೆ

ನಮಗೊಂದು ಕಾನೂನು, ನಿಮಗೊಂದು ಕಾನೂನು ಇದೆಯೇ?

# ಮೊದಲು ರಾಜೀನಾಮೆ ನೀಡಿ, ಕ್ಲೀನ್ ಚಿಟ್ ಸಿಕ್ಕರೆ ಮತ್ತೆ ಸಿಎಂ ಆಗಿ

## ಸಿದ್ದರಾಮಯ್ಯಗೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ತಾಕೀತು



ಮೈಸೂರು, ಅ.14(ಬಿಎಲ್‌ಯು)– ಮುಡಾ ಹಗರಣದ ಆರೋಪ ಎದುರಿಸುತ್ತಿರುವ ಸಿದ್ದರಾಮಯ್ಯ ಅವರೇ ಮೊದಲು ರಾಜೀನಾಮೆ ನೀಡಿ, ಕ್ಲೀನ್ ಚಿಟ್ ಸಿಕ್ಕಿದರೆ ಮತ್ತೆ ಮುಖ್ಯಮಂತ್ರಿಯಾಗಿ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನನ್ನ ಮೇಲೆ ಆರೋಪ ಬಂದಾಗ ನೀವು ಹೋರಾಟ ಮಾಡಿದಿರಿ, ನಾನು ಅಂದು ರಾಜೀನಾಮೆ ನೀಡಿದೆ. ಈಗ ನೀವು ರಾಜೀನಾಮೆ ನೀಡುತ್ತಿಲ್ಲ. ಹಾಗಾದರೆ ನಿಮಗೊಂದು ಕಾನೂನು ನನಗೊಂದು ಕಾನೂನು ಇದೆಯೇ ಎಂದು ಪ್ರಶ್ನಿಸಿದರು.

ರಾಜೀನಾಮೆ ನೀಡಲು ನಿರಾಕರಿಸುತ್ತಿರುವ ಸಿದ್ದರಾಮಯ್ಯ ಅವರದು ಡಬಲ್ ಸ್ಟ್ಯಾಂಡರ್ಡ್ ಆಗಿದೆ. ಆರೋಪ ಬಂದಾಗ ನನ್ನಂತೆ ನೀವೇಕೆ ರಾಜೀನಾಮೆ ನೀಡುತ್ತಿಲ್ಲ ಎಂದು ಪ್ರಶ್ನಿಸಿದ ಈಶ್ವರಪ್ಪ, ನನ್ನ ವಿರುದ್ಧ ತನಿಖೆ ನಡೆಯಿತು. ತರುವಾಯ ಕ್ಲೀನ್ ಚಿಟ್ ಕೂಡ ಸಿಕ್ಕು ಆದರೆ ಆರೋಪ ಎದುರಿಸುತ್ತಿರುವ ನೀವೇಕೆ ಇನ್ನು ರಾಜೀನಾಮೆ ನೀಡಿಲ್ಲ ಎಂದು ಮರು ಪ್ರಶ್ನಿಸಿದರು.

ಬೆಳಗಾವಿಯ ಸವದತ್ತಿ ಎಲ್ಲಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಸಿದ್ದರಾಮಯ್ಯ ಪತ್ನಿ ಪಾರ್ವತಿ ಹೆಸರಿನಲ್ಲಿ ಪೂಜೆ ಮಾಡಿಸಿ ಕುಂಕುಮ ಇಟ್ಟುಕೊಂಡರು. ಇತ್ತೀಚೆಗೆ ಮೇಲಿಂದ ಮೇಲೆ ಚಾಮುಂಡೇಶ್ವರಿಗೆ ಕೂಡ ಪೂಜೆ ಸಲ್ಲಿಸುತ್ತಿದ್ದಾರೆ. ಈಗ ದೇವರ ಮೇಲೆ ಹೆಚ್ಚು ಭಕ್ತಿ ಬಂದಿದೆ ಎಂದರು.

ಪಾರ್ವತಿ ಅವರು ಕೂಡ ಸಾಕಷ್ಟು ದೇವರ ಪೂಜೆ ಮಾಡುತ್ತಾರೆ. ನೀವು ಕೂಡ ಪ್ರಾಮಾಣಿಕವಾಗಿ ಪೂಜೆ ಮಾಡಿ ಕುಂಕುಮ ಹಾಕಿಕೊಳ್ಳುತ್ತೀರಾ. ಆದರೆ ಒಂದು ಕಡೆ ದೇವರ ಪೂಜೆ ಸಲ್ಲಿಸಿದರೆ, ಮತ್ತೊಂದು ಕಡೆ ದೇವಸ್ಥಾನ ಧ್ವಂಸ ಮಾಡಿದವರ ವಿರುದ್ಧ ದಾಖಲಾದ ಮೊಕದ್ದಮೆ ವಾಪಸು ಪಡೆಯುತ್ತೀರಾ. ಈ ರೀತಿಯ ವರ್ತನೆ ಏಕೆ ಎಂದು ಪ್ರಶ್ನೆ ಮಾಡಿದರು.


ಹುಬ್ಬಳ್ಳಿಯಲ್ಲಿ ದಂಗೆ ಮಾಡಿದವರ ವಿರುದ್ಧ ದಾಖಲಾದ ಪ್ರಕರಣ ವಾಪಸ್ ಪಡೆಯುತ್ತಿದ್ದೀರಾ. ಮತಕ್ಕಾಗಿ ಓಲೈಕೆ ಮಾಡುವುದು ಸರಿಯಲ್ಲ. ದೇಶದ್ರೋಹಿ ಮತ್ತು ಭಯೋತ್ಪಾದಕರ ಪ್ರಕರಣ ವಾಪಸ್ ಪಡೆಯುವುದು ಸರಿಯಲ್ಲ. ಇಂತಹ ಧೋರಣೆ ಅನುಸರಿಸುತ್ತಿರುವ ನಿಮ್ಮನ್ನು ಸವದತ್ತಿ ಎಲ್ಲಮ್ಮ, ಚಾಮುಂಡೇಶ್ವರಿ ಕ್ಷಮಿಸಲ್ಲ ಎಂದು ಎಚ್ಚರಿಸಿದರು.

ಮುಸಲ್ಮಾನರ ತುಷ್ಟೀಕರಣ ಇದಕ್ಕೆಲ್ಲಾ ಪ್ರಮುಖ ಕಾರಣವಾಗಿದೆ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಆರ್‌ಎಸ್‌ಎಸ್ ಬಗ್ಗೆ ಟೀಕಿಸುತ್ತಾರೆ. ಹೀಗೆ ಆರ್‌ಎಸ್‌ಎಸ್ ಬಗ್ಗೆ ಟೀಕೆ ಮಾಡುತ್ತಾ ಕಾಂಗ್ರೆಸ್ ನಿರ್ನಾಮವಾಗುತ್ತಿದೆ. ದೇಶ ರಕ್ಷಣೆ ಸೇವೆಯಲ್ಲಿ ಆರ್‌ಎಸ್‌ಎಸ್ ನವರು ಕಾರ್ಯ ನಿರ್ವಹಿಸುತ್ತಿರುವುದನ್ನು ಮೊದಲು ಅರಿಯಿರಿ ಎಂದು ಅರಿಯಿರಿ.

ಸಂಗೊಳ್ಳಿ ರಾಯಣ್ಣ ಚನ್ನಮ್ಮ ಬ್ರಿಗೇಡ್ ಮಾಡಬೇಕೆಂಬ ಕೂಗು ಕೇಳಿ ಬರುತ್ತಿದೆ. ಆದರೆ ಈ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲ. ಬಾಗಲಕೋಟೆಯಲ್ಲಿ ಸಮಾವೇಶ ನಡೆಸಲು ನಿರ್ಧರಿಸಿದ್ದೇವೆ. ಈ ಸಮಾವೇಶದಲ್ಲಿ ಮೃತ್ಯುಂಜಯ ಸ್ವಾಮಿ ಸೇರಿದಂತೆ ಹಲವರು ಭಾಗವಹಿಸುತ್ತಿದ್ದಾರೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ತಿಳಿಸಿದರು.

# ಮುಖ್ಯಮಂತ್ರಿ ಸಿದ್ದರಾಮಯ್ಯ ಬಂಧಿಸಿ ತುರ್ತು ವಿಚಾರಣೆ ಮಾಡಿ

## ಲೋಕಾಯುಕ್ತ ಎಸ್ಪಿಗೆ ದೂರುದಾರ ಸ್ನೇಹಮಯಿ ಕೃಷ್ಣ ಮತ್ತೇ ಮನವಿ



ಮೈಸೂರು, ಅ.14(ಬಿಎಲ್‌ಯು)– ಪ್ರಚೋದನಾಕಾರಿ ಹೇಳಿಕೆ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಡಾ ಹಗರಣದಲ್ಲಿ ಬಂಧಿಸಿ ತುರ್ತು ವಿಚಾರಣೆ ನಡೆಸಬೇಕು ಎಂದು ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತರನ್ನು ಆಗ್ರಹಿಸಿದ್ದಾರೆ.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಖುದ್ದು ಭೇಟಿ ನೀಡಿ ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ಸಾಕ್ಷ್ಯ ಮಾಹಿತಿ ಸಲ್ಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಲವು ಸಭೆ, ಸಮಾರಂಭಗಳಲ್ಲಿ ಪ್ರಚೋದನಾಕಾರಿ ಹೇಳಿಕೆ ನೀಡುವುದರ ಜೊತೆಗೆ, ಸರ್ಕಾರದಿಂದ ಪ್ರಚೋದನಾಕಾರಿ ಜಾಹೀರಾತುಗಳನ್ನು ಕೂಡ ನೀಡುತ್ತಿದ್ದಾರೆ. ಇದರಿಂದ ನನಗೆ ಹಾಗೂ ನನ್ನ ಕುಟುಂಬಕ್ಕೆ ಜೀವ ಭಯವಿದೆ ಎಂದು ಸ್ನೇಹಮಯಿ ಕೃಷ್ಣ ಆತಂಕ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಹೈಕೋರ್ಟ್‌ಗೆ ಸಲ್ಲಿಸಿರುವ ರಿಟ್ ಅರ್ಜಿಯ ಅಂಶಗಳನ್ನು ಉಲ್ಲೇಖಿಸಿ ತನಿಖೆ ಮಾಡುವಂತೆ ಇಂದು 25 ಪುಟಗಳ ಸಾಕ್ಷ್ಯ ಮಾಹಿತಿ ಸಲ್ಲಿಸಿದ್ದೇನೆ. ಇದರ ಆಧಾರದ ಮೇಲೆ ತನಿಖೆ ನಡೆಸುವಂತೆ ಲೋಕಾಯುಕ್ತರಿಗೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ಹೈಕೋರ್ಟ್‌ಗೆ ಸಲ್ಲಿಸಿರುವ ದಾಖಲೆಗಳಲ್ಲಿ ಸಿದ್ದರಾಮಯ್ಯ ಕೆಲವು ಮಾಹಿತಿಗಳನ್ನು ನೀಡದೆ ಮುಚ್ಚಿಟ್ಟಿದ್ದಾರೆ. ಅಷ್ಟೆ ಅಲ್ಲದೆ ದಾಖಲಾತಿಗಳಲ್ಲಿ ವೈಟ್ನರ್ ಹಾಕಿ ಸಾಕ್ಷ್ಯ ನಾಶ ಮಾಡಿದ್ದಾರೆ. ಈ ಹಿನ್ನೆಲೆ ಸಿದ್ದರಾಮಯ್ಯ ಅವರನ್ನು ಬಂಧಿಸಿ ತುರ್ತು ವಿಚಾರಣೆಗೊಳಪಡಿಸಬೇಕು ಎಂದು ಲೋಕಾಯುಕ್ತರಿಗೆ ಮನವಿ ಮಾಡಿದ್ದೇನೆ ಎಂದರು. ಸ್ನೇಹಮಯಿ ಕೃಷ್ಣ ಅವರು ಕೆಲ ದಿನಗಳ ಹಿಂದೆ ಸಿಎಂ ಸಿದ್ದರಾಮಯ್ಯ ಅವರನ್ನು ಬಂಧಿಸುವಂತೆ ಲೋಕಾಯುಕ್ತ ಎಸ್ಪಿಯವರಿಗೆ ವಾಟ್ಸಾಪ್ ಮೂಲಕ ಮನವಿ ಸಲ್ಲಿಸಿದ್ದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಪದೇ ಪದೆ ಲೋಕಾಯುಕ್ತ ಕಚೇರಿಗೆ ಬಂದು ಪ್ರಭಾವ ಬೀರುತ್ತಿದ್ದಾರೆ ಎಂಬ ಅನುಮಾನವಿದೆ. ಅಲ್ಲದೆ ಸಿದ್ದರಾಮಯ್ಯ ಕೂಡ ಪ್ರಚೋದನಾಕಾರಿ ಹೇಳಿಕೆ ನೀಡುತ್ತಿದ್ದಾರೆ. ಆದ್ದರಿಂದ ಸಿದ್ದರಾಮಯ್ಯ ಬಂಧಿಸಿ ತುರ್ತು ವಿಚಾರಣೆ ಮಾಡುವ ಅಗತ್ಯವಿದೆ ಸ್ನೇಹಮಯಿ ಕೃಷ್ಣ ಎಂದು ಹೇಳಿದರು.

ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣದ ಬಗ್ಗೆ ಲೋಕಾಯುಕ್ತರು ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ಸ್ನೇಹಮಯಿ ಕೃಷ್ಣ ಆಗಾಗ್ಗೆ ಒಂದೊಂದು ದಾಖಲೆಗಳನ್ನು ಸಲ್ಲಿಸುತ್ತಿರುವುದು ಪ್ರಕರಣ ಹಲವು ಸ್ವರೂಪ ಪಡೆಯುತ್ತಿದೆ.

**ಲೋಕಾಯುಕ್ತ ಕಚೇರಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸಿಲ್ಲವೇಕೆ...**

ಲೋಕಾಯುಕ್ತ ಕಚೇರಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸದೆ ಲೋಕಾಯುಕ್ತರು ಕರ್ತವ್ಯ ಲೋಪ ಎಸಗಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಆರೋಪಿಸಿದರು. ಲೋಕಾಯುಕ್ತ ಸೇರಿದಂತೆ ತನಿಖಾ ಸಂಸ್ಥೆಗಳ ಕಚೇರಿಯಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದು ಸುಪ್ರೀಂಕೋರ್ಟ್ ನಿರ್ದೇಶನವಿದೆ. ಆದರೆ ಮೈಸೂರು ಲೋಕಾಯುಕ್ತರು ಇದನ್ನು ಪಾಲಿಸಿಲ್ಲ ಎಂದು ಆಪಾದಿಸಿದರು. ಈ ಹಿನ್ನೆಲೆ ಸಿಸಿಟಿವಿ ಕ್ಯಾಮರಾ ಅಳವಡಿಸುವಂತೆ ಲೋಕಾಯುಕ್ತ ಅಧಿಕಾರಿಗಳಿಗೆ ಮನವಿ ಮಾಡಿದ್ದು, ಇದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

## ಸುಯೋಗ್ ಆಸ್ಪತ್ರೆಯ ಸೇವೆ ಶ್ಲಾಘನೀಯ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ವಿವಿಧ ಶಿಬಿರಗಳ ಸಮಾರೋಪ ಸಮಾರಂಭವನ್ನು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಿದರು.

ಮೈಸೂರು,ಅ.14–ಆರೋಗ್ಯ ಸಮಸ್ಯೆಗಳನ್ನು ಹೊತ್ತು ಬರುವವರನ್ನು ಆಸ್ಪತ್ರೆಗಳು ಮಾನವೀಯ ದೃಷ್ಟಿಯಿಂದ ನೋಡಬೇಕು. ನೋವಿನಿಂದ ಬರುವವರನ್ನು ನಗುವ ಹಾಗೆ ಮಾಡಿ ಕಳುಹಿಸಬೇಕು. ಆಗ ಮಾತ್ರ ಮಾನವೀಯ ಮೌಲ್ಯಗಳಿಗೆ ಬೆಲೆ ಬರುವಂತಾಗುತ್ತದೆ ಎಂದು ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್ ಹೇಳಿದರು.

ನಗರದ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯ ಆವರಣದಲ್ಲಿ ಏರ್ಪಡಿಸಿದ್ದ ಉಚಿತ ಕೀಲು ಮರುಜೋಡಣೆ ತಪಾಸಣಾ ಶಿಬಿರ ಉದ್ಘಾಟನೆ ಹಾಗೂ ಉಚಿತ ಆಂಜಿಯೊಪ್ಲಾಸ್ಟಿ, ಆಂಜಿಯೋಗ್ರಾಂ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇಂದು ಸಾಕಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಹಣಕ್ಕೆ ಪ್ರಾಧಾನ್ಯತೆ ನೀಡಲಾಗುತ್ತದೆ. ತುರ್ತು ಸಂದರ್ಭದಲ್ಲಿ ನಿಮ್ಮವರಿಗೆ ಚಿಕಿತ್ಸೆ ನೀಡಲು ಇಷ್ಟು ಹಣ ಖರ್ಚಾಗುತ್ತದೆ ಎಂದು ಮೊದಲೆ ಹೇಳಿ ಭಯ ಹುಟ್ಟಿಸುತ್ತಾರೆ. ಆದರೆ ಸುಯೋಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮೊದಲು ಹಣ ನಂತರ ಎಂದು ಬರೆಯಲಾಗಿದ್ದು ಎಲ್ಲರೂ ಮೆಚ್ಚುವ ಸಂಗತಿಯೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಇಂದಿನ ಜಂಜಾಟದ ರಾಜಕಾರಣದಲ್ಲಿ ಕೂಡ ಸರಳ ಸಜ್ಜನರಿಗೆ ರಾಜ್ಯಪಾಲರಂತಹ ಸಾಂವಿಧಾನಿಕ ಹುದ್ದೆ ಸಿಗಬಲ್ಲದು ಎಂಬುದಕ್ಕೆ ಸಿ.ಹೆಚ್‌ವಿಜಯಶಂಕರ್ ಅವರೇ ಸಾಕ್ಷಿ ಎಂದು ಹೇಳಿದರು.

ಹತ್ತು ದಿನಗಳ ಕಾಲ ನಡೆದ ಹೃದಯ ತಪಾಸಣಾ ಶಿಬಿರದಲ್ಲಿ 200ಕ್ಕೂ ಹೆಚ್ಚು ರೋಗಿಗಳಿಗೆ ತಪಾಸಣೆ ನಡೆಸಲಾಗಿದ್ದು, ಅದರಲ್ಲಿ 20 ಆಂಜಿಯೋಗ್ರಾಂ ಮತ್ತು 11 ಆಂಜಿಯೋಪ್ಲಾಸ್ಟಿಯನ್ನು ಉಚಿತವಾಗಿ ಚಿಕಿತ್ಸೆ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೂಳೆ ಮತ್ತು ಕೀಲು ಶಾಸ್ತ್ರ ತಜ್ಞ ಡಾ.ಮೋಹನ್, ಹೃದಯ ಶಾಸ್ತ್ರ ತಜ್ಞ ಡಾ.ಜಯಕುಮಾರ್, ಸುಧಾ ಯೋಗಣ್ಣ, ಡಾ.ಸುಯೋಗ್ ಯೋಗಣ್ಣ, ಡಾ.ರಾಜೇಂದ್ರಪ್ರಸಾದ್, ಡಾ.ಸೀಮಾ ಯೋಗಣ್ಣ, ಡಾ.ಯಶಿತಾರಾಜ್ ಮತ್ತಿತರರು ಭಾಗವಹಿಸಿದ್ದರು.


## ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಸಂಬಂಧ ಇಂದು ಪೂರ್ವಭಾವಿ ಸಭೆ

ಮೈಸೂರು,ಅ.14– ಅ.23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಿಸುವ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅ.15ರಂದು ಸಂಜೆ 5 ಗಂಟೆಗೆ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ತಿಳಿಸಿದ್ದಾರೆ.

ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ವಿವಾದ

## ದೂರುದಾರರ ಪರ ಹೈಕೋರ್ಟ್‌ನಲ್ಲಿ ವಾದ ಮಂಡನೆ

ಇಂದು ಸರ್ಕಾರದ ಪರ ಎಎಜಿ ವಾದ



ಮೈಸೂರು,ಅ.14(ಆರ್‌ಕೆ)–ಶ್ರೀ ಚಾಮುಂಡಿಬೆಟ್ಟದ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ರಚನೆ ವಿವಾದ ಕುರಿತ ವಿಚಾರಣೆ ಇಂದು ಹೈಕೋರ್ಟ್‌ನಲ್ಲಿ ನಡೆಯಿತು.

ದೂರುದಾರರಾದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪರವಾಗಿ ವಕೀಲ ಮಾನಸಿಕುಮಾರ್ ಅವರು ವಾದ ಮಂಡಿಸಿದರು. ನಿಯಮಾವಳಿ, ಕಾನೂನು ಕಟ್ಟಲೆಗಳನ್ನು ಮೀರಿ ಪ್ರಾಧಿಕಾರ ರಚಿಸಲಾಗಿದೆ, ಅದರಿಂದ ಅಭಿವೃದ್ಧಿ ಹೆಸರಲ್ಲಿ ರಾಜಮನೆತನದ ಒಡೆತನದ ಪಾರಂಪರಾಗತವಾಗಿ ಬಂದಿರುವ ಆಸ್ತಿಗಳ ಅಸ್ತಿತ್ವಕ್ಕೆ ಧಕ್ಕೆ ಬಂದಂತಾಗಿರುವುದರಿಂದ ಪ್ರಾಧಿಕಾರ ರಚನೆ ಸಂಬಂಧ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕೆಂದು ಮನವಿ ಮಾಡಿ, ಪೂರಕ ಮನವಿ ಮಾಡಿ, ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು.

ನಾಳೆ (ಅ.15) ಸರ್ಕಾರದ ಪರವಾಗಿ ಅಡಿಷನಲ್ ಅಡ್ವೋಕೇಟ್ ಜನರಲ್ ದೇವದಾಸ್ ಅವರು ವಾದ ಮಂಡಿಸಲಿದ್ದು, ಲಕ್ಷಾಂತರ ಭಕ್ತಾದಿಗಳು ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲು ಬರುತ್ತಿರುವುದರಿಂದ ಅವರಿಗೆ ಮೂಲ ಸೌಕರ್ಯ ಕಲ್ಪಿಸಲು ಶ್ರೀ ಕ್ಷೇತ್ರದ ಸಮಗ್ರ ಅಭಿವೃದ್ಧಿಪಡಿಸಲು ಪ್ರತ್ಯೇಕ ಪ್ರಾಧಿಕಾರ ರಚಿಸಿ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಲು ಸಾಧ್ಯವಿಲ್ಲ ಎಂದು ಸಮರ್ಥನೆ ಮಾಡಿಕೊಳ್ಳಲು ಸರ್ವ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಸ್ನೇಹಮಯಿ ಕೃಷ್ಣಗೆ ರಕ್ಷಣೆ ನೀಡಲು ಬದ್ಧ




ಎಂ.ಬಿ.ಪಾಟೀಲ್

ವಿಜಯಪುರ, ಅ.14(ಬಿಎಲ್‌ಯು)– ಮುಡಾ ಹಗರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೂರು ದಾಖಲಿಸಿರುವ ಸ್ನೇಹಮಯಿ ಕೃಷ್ಣಗೆ ರಕ್ಷಣೆ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭರವಸೆ ನೀಡಿದ್ದಾರೆ.

ವಿಜಯಪುರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ನೇಹಮಯಿ ಕೃಷ್ಣಗೆ ಯಾರು ಏನು ತೊಂದರೆ ಮಾಡುವುದಿಲ್ಲ. ಇದರಿಂದ ಅವರು ನಿರ್ಭೀತಿಯಿಂದ ಇರಬಹುದು ಎಂದು ಹೇಳಿದರು.

ಸ್ನೇಹಮಯಿ ಕೃಷ್ಣ ಆಗ್ರಹಿಸುವಂತೆ ಸಿದ್ದರಾಮಯ್ಯ ಅವರನ್ನು ಬಂಧಿಸುವ ಅಗತ್ಯವಿಲ್ಲ ಅವರನ್ನು ಏಕೆ ಬಂಧಿಸಬೇಕು ಎಂದು ಪ್ರಶ್ನಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬ ಬೆಂಗಳೂರಿನ ಬಾಗಲೂರಿನಲ್ಲಿ ಮಂಜೂರಾಗಿದ್ದ ಸಿಎ ನಿವೇಶನ ವಾಪಸ್ ನೀಡಿರುವ ವಿಚಾರ ನನಗೆ ತಿಳಿದಿಲ್ಲ. ನಾನು ಅಮೇರಿಕಾದಿಂದ ಈಗ ಬಂದಿರುವ ಹಿನ್ನೆಲೆ ಹೆಚ್ಚಿನ ಮಾಹಿತಿ ಇಲ್ಲ. ಬೆಂಗಳೂರಿಗೆ ಹೋದ ಮೇಲೆ ಈ ಬಗ್ಗೆ ಪ್ರತಿಕ್ರಿಯೆ ನೀಡುತ್ತೇನೆ ಎಂದು ತಿಳಿಸಿದರು.

## ಮಾವುತರು ಕಾವಾಡಿಗಳ ಮಕ್ಕಳಿಗೆ ಲಾಗೈಡ್ ವತಿಯಿಂದ ಕಿಟ್ ಹಾಗೂ ಸಿಹಿ ವಿತರಣೆ



**ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ಯಶಸ್ವಿಯಾಗಿ ಮುಗಿಸಿ ನಾಡಿನಿಂದ ಕಾಡಿಗೆ ಹೊರಟ ಗಜಪಡೆಯ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಹಾಗೂ ಓಎಂಜಿ ವೆಂಚರ್ಸ್ ವತಿಯಿಂದ ಮಕ್ಕಳಿಗೆ ಆಟದ ಸಾಮಾಗ್ರಿ ಹಾ ಉಳಿತಾಯ ಮಾಡಲು ಗೋಲಕ ಸೇರಿದಂತೆ ಪೆನ್ನು ಪೆನ್ಸಿಲ್ ಒಳಗೊಂಡ ಕಿಟ್ ವಿತರಿಸಲಾಯಿತು. ಅರಮನೆ ಆಮಣದಲ್ಲಿ ಲಾಗೈಡ್ ಗೌರವ ಸಂಪಾದಕರು ಹಿರಿಯ ವಕೀಲರು ಆದ ಹೆಚ್.ಎನ್.ವೆಂಕಟೇಶ್, ಉದ್ಯಮಿ ಬಿ.ವಿ ಶಿವಾನಂದ್ ಕಿಟ್ ವಿತರಿಸಿದರು. ಇದೇ ವೇಳೆ ಮಕ್ಕಳಿಗೆ ದ್ರಾಕ್ಷಿ ಗೋಡಂಬಿ ಸ್ವೀಟ್ ಹಾಗೂ ಬಿಸ್ಕೆಟ್ ಪ್ಯಾಕೇಟ್ ಹಾಗೂ ಮಹಿಳೆಯರಿಗೆ ಬಳೆ ಸಹ ನೀಡಲಾಯಿತು.**

## ಅ.17ರಂದು ಶ್ರೀ ವಾಲ್ಮೀಕಿ ಜಯಂತಿ



ಮೈಸೂರು,ಅ.14– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಮೈಸೂರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಶ್ರೀ ವಾಲ್ಮೀಕಿ ಜಯಂತಿಯನ್ನು ಅ.17 ರಂದು ಬೆಳಗ್ಗೆ 12.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಆಗಮಿಸಲಿದ್ದಾರೆ.


ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್ ಡಿ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್‌ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತಿಂದ್ರ.ಎಸ್ ಮತ್ತು ವಿವೇಕಾನಂದ.ಎಸ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಹಾಗೂ ಪ್ರಾಧ್ಯಾಪಕಿ ಎನ್.ಕೆ.ಲೋಲಾಕ್ಷಿ ಮುಖ್ಯಭಾಷಣ ಮಾಡಲಿದ್ದಾರೆ.

## ಅ.17, ಸಹಸ್ರಚಂಡಿ ಯಾಗ ಪೂರ್ಣಾಹುತಿ

ಮೈಸೂರು, ಅ.14– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಅ.17ರಂದು ಗುರುವಾರ ಹುಣ್ಣಿಮೆ ಪ್ರಯುಕ್ತ ಶರನ್ ನವರಾತ್ರಿಯಲ್ಲಿ ನಡೆದ ವಿಸ್ತಾರ ಸಹಸ್ರ ಚಂಡಿಕಾ ಯಾಗದ ಪೂರ್ಣಾಹುತಿ ನೆರವೇರಲಿದೆ.

ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ 12 ಗಂಟೆಗೆ ಪೂರ್ಣಾಹುತಿ. ಅಲ್ಲದೆ ಕರ್ಕಾಟಕ, ತುಲಾ, ಮಕರ, ಕುಂಭ, ಮೀನಾ ರಾಶಿಯವರಿಗೆ ಶನಿ ಮಹಾಶಾಂತಿ ಏರ್ಪಡಿಸಲಾಗಿದೆ. ಬಾಧಾನಿವಾರಕ ಸುದರ್ಶನ ಹೋಮ ಮತ್ತು ಆಯುಃಪ್ರದ ಮಹಾ ಮೃತ್ಯುಂಜಯ ಹೋಮ ಏರ್ಪಡಿಸಲಾಗಿದೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

15.10.2024 ಮಂಗಳವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ಎಲ್ಲಾ ದೇವರುಗಳಿಗೆ ಸ್ನಪನಪೂರ್ವಕ ಮಹಾಭಿಷೇಕ, ನಿವೇದನ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ ಹನುಮಂತೋತ್ಸವ, ದ್ವಾದಶಾರಾಧನೆ, ಪುಷ್ಪಯಾಗ, ಪಡಿಮಾಲೆ, ರಾಷ್ಟ್ರಾಶೀರ್ವಾದ, ನಿವೇದನ, ಮಹಾಮಂಗಳಾರತಿ, ಫಲಮಂತ್ರಾಕ್ಷತೆ, ನಂತರ ಮೂಕಬಲಿ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ದ್ವಾದಶಿ ಉಪರಿ ತ್ರಯೋದಶಿ ಮಹಾಭಿಷೇಕ, ಸಂಜೆ ಪುಷ್ಪಯಾಗ, ಹನುಮಂತೋತ್ಸವ, ಸಂಜೆ ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ತ್ರಯೋದಶಿ, ಶ್ರೀ ಗಾಯತ್ರಿ ಅಲಂಕಾರ, ಶ್ರೀ ಗಾಯತ್ರಿ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್.ರಾಘವೇಂದ್ರ ಅವರಿಂದ ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಜೆಎಸ್‌ಎಸ್ ಕಾಲೇಜು ಮಹಿಳಾ ವಿದ್ಯಾರ್ಥಿ ನಿಲಯದ ವೇದಿಕೆ ಉದ್ಘಾಟನೆ, ಅಂತರ ಮಹಿಳಾ ವಿದ್ಯಾರ್ಥಿ ನಿಲಯಗಳ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಉದ್ಘಾಟನೆ : ಅಕ್ಕಮಹಾದೇವಿ ಸಂಶೋಧನಾ ಪೀಠ, ಕರಾಮುವಿವಿ ನಿರ್ದೇಶಕರಾದ ಪ್ರೊ. ಕವಿತಾ ರೈ, ಉಪಸ್ಥಿತರು : ಪ್ರಾಂಶುಪಾಲ ಡಾ. ಎಂ. ಪ್ರಭು, ನಿಲಯ ಪಾಲಕರಾದ ಕು. ಕೆ.ಜಿ. ಅನಿತಾ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ :** ಪ್ರತಿಭಾನ್ವೇಷಣೆ 2024–25 ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಪ್ರೊ. ರಾಚಯ್ಯ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಚೆನ್ನಪ್ಪ ಅಂಗಡಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಪಿ. ಸುರಭಿ, ವ್ಯಾಖ್ಯಾನ–ಡಾ. ಲತಾ, ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ. ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಲ್ಲಾಡಿ ಸಹೋದರರು– ಯುಗಳ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

**ಮಧ್ಯಾಹ್ನ:** 12.05 ವನಿತಾ ವಿಹಾರ :'ನಾನು ನನ್ನ ಕಂಪನಿ' ಮೈಸೂರಿನಲ್ಲಿ ಬೋಂಡ ಬಜ್ಜಿ ಮಾರಿ ಜೀವನ ನಡೆಸುತ್ತಿರುವ ಕುಸುಮಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 12.30 ದೇವರನಾಮ – ಪ್ರತಿಭಾ, 12.45 ಕನ್ನಡದಲ್ಲಿ ಭಾಷಣ – ಶಬ್ಧ ಮೀರಿದ ಆಲಿಸುವಿಕೆ ಏಕೆ, ಹೇಗೆ ಕುರಿತು ಮಧುರಾಣಿ. ಹೆಚ್.ಎಸ್. ಅವರಿಂದ ಭಾಷಣ, 1.00 ಬಾನುಲಿ ಇಂಗ್ಲೀಷ್ ಪಾಠ– ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್, 1.20 ಭಾವಗೀತೆಗಳು–ಶಿಲ್ಪಾ ಹೆಗಡೆ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬೆಂಗಳೂರು ಸಹೋದರರು– ಯುಗಳ ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ – ಕಿರಾತಾರ್ಜುನ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಚಳಿಗಾಲದಲ್ಲಿ ರೇಷ್ಮೆ ಹುಳು ಸಾಕಾಣಿಕೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಲ್. ಸತೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಎಸ್. ರಾಮನಾಥನ್ – ಹಾಡುಗಾರಿಕೆ, 10.00 ಚೈತ್ರವನ –ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ : ಹೆಚ್.ಎಲ್. ಶ್ರೀಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಮಲೆ ಮಾದೇಶ್ವರ ಸಂಸ್ಥೆ, ವಿಜಯನಗರ :** 8ನೇ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಬಿಜೆಪಿ ನಗರ ಉಪಾಧ್ಯಕ್ಷ ಹೇಮಾನಂದೀಶ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಸ್ಥಳ: ಚಾರ್ವಿ ಮೋಟಾರ್ಸ್ 4ನೇ ಮಹಡಿ, ರಾಘವೇಂದ್ರಸ್ವಾಮಿ ದೇವಸ್ಥಾನದ ರಸ್ತೆ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಚಂದ್ರ ಮಿಷನ್ :** ಪದ್ಮಭೂಷಣ ಕಮಲೇಶ್ ಡಿ. ಪಾಟೀಲ್ ಅವರಿಂದ ಸಾಮೂಹಿಕ ಧ್ಯಾನ, ಸ್ಥಳ: ಶ್ರೀ ರಾಮಚಂದ್ರ ಮಿಷನ್, ಲಿಂಗದೇವರಕೊಪ್ಪಲು, ಸಂಜೆ 5 ರಿಂದ.

**ದೊಡ್ಡಕಾನ್ಯದಲ್ಲಿಂದು, ಮೈಸೂರು ತಾಲೂಕು**

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ಟಿ.ಹೆಚ್. ತಿಪಟೂರು, ಮುಖ್ಯ ಅತಿಥಿಗಳು : ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಪ್ರಾಂಶುಪಾಲ ಎಸ್.ಪಿ. ಪ್ರತಾಪ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಉಪಸ್ಥಿತರು : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ ದಳಪತಿ, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ಸಂಜೆ 4ಕ್ಕೆ.

### ದಸರಾ ಜಂಬೂಸವಾರಿ ಮೆರವಣಿಗೆಯ ಸ್ತಬ್ಧಚಿತ್ರಗಳಿಗೆ ಬಹುಮಾನ ಘೋಷಣೆ

# ಜಿಲ್ಲಾ ವಿಭಾಗದಲ್ಲಿ ಮಂಡ್ಯ; ಇಲಾಖೆ ವಿಭಾಗದಲ್ಲಿ ವಾರ್ತಾ ಇಲಾಖೆಗೆ ಪ್ರಥಮ



ಮಂಡ್ಯದ 'ರಂಗನತಿಟ್ಟು ಪಕ್ಷಿಧಾಮ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟು' ಸ್ತಬ್ಧಚಿತ್ರ.



ವಾರ್ತಾ ಇಲಾಖೆಯ 'ವಿಶ್ವಗುರು ಬಸವಣ್ಣ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ' ಸ್ತಬ್ಧಚಿತ್ರ.

ಮೈಸೂರು, ಅ.14(ಎಸ್‌ಬಿಡಿ)– ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ ಅತ್ಯಾಕರ್ಷಣೀಯ ಸ್ತಬ್ಧಚಿತ್ರಗಳಿಗೆ ಬಹುಮಾನ ಘೋಷಿಸಲಾಗಿದೆ.

ಶನಿವಾರ ಜರುಗಿದ ಜಂಬೂಸವಾರಿ ಮೆರವಣಿಗೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಹಾಗೂ ವಿವಿಧ ಇಲಾಖೆ ಮತ್ತು ನಿಗಮ ಮಂಡಳಿಗಳ ಸ್ತಬ್ಧಚಿತ್ರ ಸೇರಿದಂತೆ ಒಟ್ಟು 50ಕ್ಕೂ ಹೆಚ್ಚು ಸ್ತಬ್ಧಚಿತ್ರಗಳು ಸಾಗಿದ್ದವು. ಇವುಗಳಲ್ಲಿ ಜಿಲ್ಲಾವಾರು ಹಾಗೂ ಇಲಾಖೆ/ನಿಗಮ ಮಂಡಳಿ ವಿಭಾಗಗಳಲ್ಲಿ ಪ್ರಥಮ, ತೃತೀಯ, ದ್ವಿತೀಯ ಹಾಗೂ ಸಮಾಧಾನಕರ ಸೇರಿದಂತೆ ಪ್ರತಿ ವಿಭಾಗದಲ್ಲೂ ಏಳು ಸ್ತಬ್ಧಚಿತ್ರಗಳು ಬಹುಮಾನಕ್ಕೆ ಭಾಜನವಾಗಿವೆ.

**ಜಿಲ್ಲಾವಾರು ಫಲಿತಾಂಶ:** ಜಿಲ್ಲಾವಾರು ವಿಭಾಗದಲ್ಲಿ ಮಂಡ್ಯ ಜಿಲ್ಲೆಯ 'ರಂಗನತಿಟ್ಟು ಪಕ್ಷಿಧಾಮ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟು' ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ದೊರೆತಿದೆ. ಧಾರವಾಡದ 'ಇಸ್ರೋ ಗಗನಯಾನದಲ್ಲಿ ಹಣ್ಣಿನ ನೊಣಗಳು' ಸ್ತಬ್ಧಚಿತ್ರಕ್ಕೆ ದ್ವಿತೀಯ, ಚಾಮರಾಜನಗರದ 'ಸೋಲಿಗರ ಸೊಗಡು ಒಮ್ಮೆ ನೀ ಬಂದು ನೋಡು' ಸ್ತಬ್ಧಚಿತ್ರಕ್ಕೆ ತೃತೀಯ, ಉಡುಪಿಯ 'ಜಿಲ್ಲೆಯ ಸಾಂಸ್ಕೃತಿಕ ವೈಭವ ಹಾಗೂ ಕರಾವಳಿಯ ಸೊಬಗು', ಗದಗದ 'ಗ್ರಾಮಸಭೆ –ಹಳ್ಳಿಯ ವಿಧಾನಸಭೆ', ಮೈಸೂರಿನ 'ಮಾನವಕುಲದ ಸಮಾನತೆ, ಧಾರ್ಮಿಕ ಬೆಳಕಿನಿಂದ ಸಾಂವಿಧಾನಿಕ ನ್ಯಾಯದ ವರೆಗೆ', ಹಾಗೂ ಚಿಕ್ಕಮಗಳೂರಿನ 'ತೇಜಸ್ವಿ ವಿಸ್ಮಯ ಲೋಕ' ಸ್ತಬ್ಧಚಿತ್ರಗಳಿಗೆ ಸಮಾಧಾನಕರ ಬಹುಮಾನ ದಕ್ಕಿದೆ.

**ಇಲಾಖೆ; ನಿಗಮ ಮಂಡಳಿ:** ವಿವಿಧ ಇಲಾಖೆ, ನಿಗಮ ಮಂಡಳಿಗಳ ವಿಭಾಗದಲ್ಲಿ ವಾರ್ತಾ ಇಲಾಖೆಯ 'ವಿಶ್ವಗುರು ಬಸವಣ್ಣ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ' ಸ್ತಬ್ಧಚಿತ್ರ ಪ್ರಥಮ ಬಹುಮಾನ ಪಡೆದಿದೆ. ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ 'ಗ್ರಾಮೀಣ ಜನರ ಆರೋಗ್ಯದಲ್ಲಿ ಸುಸ್ಥಿರತೆ ಸಾಧಿಸುವುದು' ಸ್ತಬ್ಧಚಿತ್ರಕ್ಕೆ ದ್ವಿತೀಯ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ 'ಮೈಸೂರು ಸ್ಯಾಂಡಲ್ ಸೋಪ್ ಕಿರು ಪರಿಚಯ' ಸ್ತಬ್ಧಚಿತ್ರಕ್ಕೆ ತೃತೀಯ ಬಹುಮಾನ ಸಿಕ್ಕಿದೆ. ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ 'ವನ್ಯಜೀವಿ ಸಂರಕ್ಷಣೆ ನಮ್ಮೆಲ್ಲರ ಹೊಣೆ', ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ 'ಸ್ವಸ್ಥ ಮೆದುಳು; ಸ್ಪಷ್ಟ ಮಾತು', ಕಾರ್ಮಿಕ ಇಲಾಖೆಯ 'ಕಾರ್ಮಿಕ ಹಿತರಕ್ಷಣೆ' ಮತ್ತು ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ 'ನಿಗಮದ ಉತ್ಪನ್ನಗಳ ಮಾದರಿ' ಸ್ತಬ್ಧಚಿತ್ರಗಳಿಗೆ ಸಮಾಧಾನಕರ ಬಹುಮಾನ ದೊರೆತಿದೆ ಎಂದು ಮೈಸೂರು ದಸರಾ ಸ್ತಬ್ಧಚಿತ್ರ ಉಪಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

## ಅವೈಜ್ಞಾನಿಕ ಅಭಿವೃದ್ಧಿ ಕಾರ್ಯದಿಂದ ಪ್ರಕೃತಿ ಅಸಮತೋಲನ



ಮೈಸೂರು, ಅ.14(ಎಂಕೆ)– ನಗರೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಅಭಿವೃದ್ಧಿ ಕೆಲಸಗಳಿಂದಾಗಿ ಪ್ರಾಣಿ–ಪಕ್ಷಿಗಳ ಆವಾಸಸ್ಥಾನಗಳು ಕಡಿಮೆಯಾಗಿ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗುತ್ತಿದೆ ಎಂದು ಆರ್‌ಎಂಪಿ ಮೈಸೂರು ಸೀನಿಯರ್ ಅಸಿಸ್ಟೆಂಟ್ ಗಿರಿ ಚಂದ್ರಶೇಖರ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ 'ವಿಶ್ವ ಆವಾಸಸ್ಥಾನ ದಿನ(ವರ್ಲ್ಡ್ ಹೆಬಿಟ್ಯಾಟ್ ಡೇ)' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯ, ಪ್ರಾಣಿ–ಪಕ್ಷಿ ಹಾಗೂ ಜಲಚರಗಳು ಎಲ್ಲ ಸೌಲಭ್ಯಗಳನ್ನು ಸಮರ್ಪಕವಾಗಿ ಹೊಂದಿರುವ ವಾಸ ಮಾಡಲು ಯೋಗ್ಯವಾಗಿರುವ ಪ್ರದೇಶವೇ ಆವಾಸಸ್ಥಾನ. ಈ ಆವಾಸಸ್ಥಾನ ಪ್ರದೇಶವು ಜೀವಿಯ ಜೊತೆ ಅವಿನಾಭಾವ ಸಂಬಂಧ ಹೊಂದಿರುವುದಲ್ಲದೇ, ಸುರಕ್ಷಿತ ಎಂಬ ಭಾವನೆ ಮೂಡಿಸಿರುತ್ತದೆ. ಈ ಪ್ರಕ್ರಿಯೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಿರುತ್ತದೆ. ಆದರೆ ಇಂತಹ ಸರಪಳಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ತುಂಡರಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕುಕ್ಕರಹಳ್ಳಿ ಕೆರೆ, ಲಿಂಗಾಂಬುದಿ ಕೆರೆಯಲ್ಲಿ ಅನೇಕ ಪಕ್ಷಿ ಪ್ರಭೇದಗಳು ನೆಲೆಸಿದ್ದವು. ಆದರೆ ಈಗ ಅಭಿವೃದ್ಧಿ ಪಕ್ಷಿಗಳ ಆವಾಸಸ್ಥಾನಕ್ಕೆ ಧಕ್ಕೆ ತರಲಾಗಿದೆ. ಅರಣ್ಯ ಇಲಾಖೆ ಅಧಿಕಾರಿ–ಸಿಬ್ಬಂದಿ ಕೂಡ ಜನರಿಗೆ ತಿಳಿಸುವ ಕೆಲಸ ಮಾಡುವುದಿಲ್ಲ. ಮುಂದಾದರೂ ಸಂಬಂಧಪಟ್ಟವರು ಗಮನ ಹರಿಸಿದರೆ ಪ್ರಕೃತಿಯನ್ನು ಸಮತೋಲನದಲ್ಲಿ ಇಡಲು ಸಾಧ್ಯವಾಗುತ್ತದೆ ಎಂದರು. ಇಂಜಿನಿಯರ್ಸ್ ಸಂಸ್ಥೆ ಮೈಸೂರು ವಿಭಾಗದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ನಿಕಟಪೂರ್ವ ಅಧ್ಯಕ್ಷ ಬಿ.ಎಸ್.ಪ್ರಭಾಕರ್ ಉಪಸ್ಥಿತರಿದ್ದರು.

## ಬಾವನಿಂದ ಬಾಮೈದ ಹತ್ಯೆ

ಮೈಸೂರು, ಅ.14– ಕುಡಿದ ಮತ್ತಿನಲ್ಲಿ ವ್ಯಕ್ತಿಯೊಬ್ಬ ತನ್ನ ಬಾಮೈದನನ್ನೇ ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿರುವ ಘಟನೆ ಮೈಸೂರಿನ ಕುಂಬಾರಕೊಪ್ಪಲು ಗೇಟ್ ಬಳಿಯ ಲಾಡ್ಜ್‌ವೊಂದರಲ್ಲಿ ಭಾನುವಾರ ರಾತ್ರಿ ನಡೆದಿದೆ. ಪಿರಿಯಾಪಟ್ಟಣದ ಮನೋಜ್(26)ನನ್ನು ಆತನ ಭಾವ ವಿನೋದ್(36) ಅಮಾನುಷವಾಗಿ ಹತ್ಯೆ ಮಾಡಿದ್ದಾನೆ. ಇವರಿಬ್ಬರಿಗೂ ಹಣಕಾಸು ವಿಚಾರದಲ್ಲಿ ಆಗಾಗ್ಗೆ ಜಗಳವಾಗುತ್ತಿತ್ತು. ಭಾನುವಾರ ಜಯದೇವ ಆಸ್ಪತ್ರೆಗೆಂದು ಬಂದಿದ್ದ ಇವರಿಬ್ಬರೂ ಕುಂಬಾರಕೊಪ್ಪಲು ಗೇಟ್ ಬಳಿಯ ಮಯೂರ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು. ಅಲ್ಲಿಯೂ ಮುಂದುವರೆದ ಜಗಳ, ವಿಕೋಪಕ್ಕೆ ತಿರುಗಿದೆ. ವಿನೋದ್ ಮಚ್ಚಿನಿಂದ ತನ್ನ ಬಾಮೈದನ ಮುಖವನ್ನು ಕೊಚ್ಚಿ, ಪರಾರಿಯಾಗಿದ್ದಾನೆ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡ ಮನೋಜ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಕುಡಿದ ಮತ್ತಿನಲ್ಲಿದ್ದ ವಿನೋದ್, ಮನೋಜ್‌ಗೂ ಕಂಠಪೂರ್ತಿ ಕುಡಿಸಿ ಈ ಕೃತ್ಯವೆಸಗಿದ್ದಾನೆ ಎನ್ನಲಾಗಿದೆ. ಆದರೆ ಇದನ್ನು ಪೊಲೀಸರು ಖಚಿತಪಡಿಸಿಲ್ಲ. ಮೇಟಗಳ್ಳಿ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ವಿನೋದ್ ಪತ್ತೆಗೆ ಶೋಧ ಮುಂದುವರೆಸಲಾಗಿದೆ. ಆರೋಪಿ ಸಿಕ್ಕನಂತರವೇ ಘಟನೆ ಬಗ್ಗೆ ನಿಖರ ಮಾಹಿತಿ ತಿಳಿಯಬೇಕಿದೆ.

## ಜಂಬೂಸವಾರಿಯಲ್ಲಿ ಗಜಪಡೆ ಯಶಸ್ವಿ ಕಾರ್ಯ ನಿರ್ವಹಿಸಿದೆ

### ಸಿಎಫ್ ಡಾ. ಮಾಲತಿಪ್ರಿಯಾ ಮೆಚ್ಚುಗೆ


ಜಂಬೂಸವಾರಿಯ ಯಶಸ್ವಿಗೆ ಶ್ರಮಿಸಿದ ಅರಣ್ಯಾಧಿಕಾರಿಗಳು ಹಾಗೂ ಮುಂಚೂಣಿ ಸಿಬ್ಬಂದಿಗಳು ದಸರಾ ಮಹೋತ್ಸವ ಗಜಪಡೆಯೊಂದಿಗೆ ಜಯಮಾರ್ತಾಂಡ ದ್ವಾರದ ಬಳಿ ಫೋಟೊ ತೆಗೆಸಿಕೊಂಡರು.

ಮೈಸೂರು,ಅ.14(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿಯಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ತಂಡ ಯಶಸ್ವಿಯಾಗಿ ತಮ್ಮ ಜವಾಬ್ದಾರಿಯನ್ನು ನಿಭಾಯಿದೆ ಎಂದು ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ದಸರಾ ಗಜಪಡೆಗೆ ಬೀಳ್ಕೊಡಲು ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಬಾರಿ ಲಕ್ಷಾಂತರ ಜನರ ನಡುವೆ ಚಿನ್ನದ ಅಂಬಾರಿ ಹೊತ್ತು ಅಭಿಮನ್ಯು ಶಾಂತವಾಗಿ ಸಾಗುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರವಾಗಿದೆ. ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಗಜಪಡೆಯ ಎಲ್ಲಾ ಆನೆಗಳು ಯಶಸ್ವಿಯಾಗಿ ಪಾಲ್ಗೊಂಡಿವೆ. ಈ ಬಾರಿ ಹೊಸ ಆನೆಗಳು ತಮ್ಮ ಜವಾಬ್ದಾರಿಯನ್ನು ಯಾವುದೇ ಲೋಪವಿಲ್ಲದೆ ನಿಭಾಯಿಸಿವೆ. ದಸರಾದಲ್ಲಿ ಗಜಪಡೆ ಯಶಸ್ವಿಯಾಗಿ ಪಾಲ್ಗೊಳ್ಳಲು ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳು ಸಹಕಾರ ನೀಡಿದೆ. ಅಲ್ಲದೆ, ಜನರು ಉತ್ತಮ ರೀತಿಯಲ್ಲಿ ಬೆಂಬಲ ನೀಡಿದ್ದು, ಎಲ್ಲರಿಗೂ ಇಲಾಖೆ ವತಿಯಿಂದ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ದಸರಾ ಮಹೋತ್ಸವದಲ್ಲಿ ಈ ಬಾರಿ ಅರ್ಜುನ ಆನೆ ಇಲ್ಲದಿದ್ದರೂ, ಕಳೆದ ವರ್ಷದ ಅರ್ಜುನ ನಿಭಾಯಿಸಿದ್ದ ನಿಶಾನೆ ಆನೆಯ ಸ್ಥಾನವನ್ನು ಈ ಬಾರಿ ಧನಂಜಯ ಆನೆ ನಿಭಾಯಿಸಿದೆ. ಅಭಿಮನ್ಯು ಆನೆಗೆ ಪರ್ಯಾಯವಾಗಿ ಇತರೆ ಆನೆಗಳನ್ನು ತಯಾರುಪಡಿಸುವ ನಿಟ್ಟಿನಲ್ಲಿ ಈ ಬಾರಿ ಮಹೇಂದ್ರ, ಧನಂಜಯ ಸೇರಿದಂತೆ ಇನ್ನಿತರ ಆನೆಗಳನ್ನು ಅಂಬಾರಿ ಆನೆಯಾಗಿ ಸಜ್ಜುಗೊಳಿಸಲು ತರಬೇತಿಯನ್ನು ನೀಡಲಾಗಿದೆ. ಅಭಿಮನ್ಯು ನಿವೃತ್ತಿಯ ನಂತರ ಯಾವ ಆನೆಗೆ ಅಂಬಾರಿ ಹೊರುವ ಜವಾಬ್ದಾರಿ ನೀಡಬೇಕು ಎನ್ನುವುದನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.


ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಮಾತನಾಡಿ, ಈ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲೆಂದು 2 ತಂಡದಲ್ಲಿ 14 ಆನೆಗಳನ್ನು ಕರೆತರಲಾಗಿತ್ತು. ಅವುಗಳಲ್ಲಿ 11 ಆನೆ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಇಂದು ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಆನೆಗಳ ಸ್ವಸ್ಥಾನಗಳಿಗೆ ಕಳುಹಿಸಿಕೊಡಲಾಗುತ್ತಿದೆ. ಎಲ್ಲಾ ಆನೆಗಳು ಅವುಗಳ ಕ್ಯಾಂಪ್‌ಗಳಿಗೆ ಬೆಂಗಾವಲು ವಾಹನದ ಭದ್ರತೆಯಲ್ಲಿ ತೆರಳುತ್ತಿವೆ ಎಂದರು.

## ತಿಂಗಳಾಂತ್ಯಕ್ಕೆ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪ್ರದರ್ಶನ

ಮೈಸೂರು, ಅ.14(ಎಂಕೆ)– ಆತ್ಮಸಾಕ್ಷಿ ನ್ಯಾಯಾಲಯದ ಕಟಕಟೆಯಲ್ಲಿ ಭಾರತೀಯ ಇತಿಹಾಸದ ಮೇರು ವ್ಯಕ್ತಿತ್ವಗಳನ್ನು ವಿಚಾರಗೊಳಪಡಿಸಿ, ಸತ್ಯ ಯಾವತ್ತಾದರೂ ಒಂದು ದಿನ ಸ್ಫೋಟಿಸಲೇಬೇಕೆಂಬ ಸಂದೇಶವನ್ನೊಳಗೊಂಡ 'ಸತ್ಯವನ್ನೇ ಹೇಳುತ್ತೇನೆ' ಎಂಬ ವಿಶಿಷ್ಟ ರಂಗ ಪ್ರಯೋಗಕ್ಕೆ ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಮುಂದಾಗಿದ್ದಾರೆ...!

'ಟಿಪ್ಪು ನಿಜಕನಸುಗಳು', 'ಕರಿನೀರ ವೀರ' ನಾಟಕದ ಯಶಸ್ಸಿನ ನಂತರ 'ಸತ್ಯವನ್ನೇ ಹೇಳುತ್ತೇನೆ' ಎಂಬ ಶೀರ್ಷಿಕೆಯಡಿ ಇತಿಹಾಸದ ಸತ್ಯಶೋಧನೆಗೆ ಹೊರಟಿರುವ ಅವರು, ಇದೇ ತಿಂಗಳಾಂತ್ಯಕ್ಕೆ ರಂಗಾಸಕ್ತರ ಮುಂದೆ ತಮ್ಮ ಹೊಸ ಪ್ರಯೋಗವನ್ನು ಪ್ರಸ್ತುತಪಡಿಸಲಿದ್ದಾರೆ. ನಾಟಕದ ರಚನೆ ಮತ್ತು ನಿರ್ದೇಶನ ಅಡ್ಡಂಡ ಕಾರ್ಯಪ್ಪ ಅವರದ್ದೇ ಆಗಿದ್ದು, ರಂಗಕರ್ಮಿ ಅನಿತಾ ಕಾರ್ಯಪ್ಪ ವಸ್ತ್ರವಿನ್ಯಾಸ, ರವಿ ಮೂರೂರ್ ಸಂಗೀತ ಹಾಗೂ ಸುಬ್ರಹ್ಮಣ್ಯ ಮೈಸೂರು ಧ್ವನಿ ವಿನ್ಯಾಸ ನೀಡಿದ್ದಾರೆ.

ಭಾರತೀಯ ಇತಿಹಾಸದ ಮೇರು ವ್ಯಕ್ತಿತ್ವಗಳಾದ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್ ಹಾಗೂ ಸಾವರ್ಕರ್ ಅವರು ಆತ್ಮಸಾಕ್ಷಿ ನ್ಯಾಯಾಲಯದ ಕಟಕಟೆಯಲ್ಲಿ ನಿಂತರೆ, ದೇಶದ ಬೆನ್ನೆಲುಬಾದ ರೈತ ನ್ಯಾಯಾಧೀಶರಾಗಿ, ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆ ನ್ಯಾಯವಾದಿಯಾಗಿ ನಾಟಕದ ಪರದೆ ಹಂಚಿಕೊಳ್ಳಲಿದ್ದಾರೆ.



'ಸತ್ಯವನ್ನೇ ಹೇಳುತ್ತೇನೆ' ಇಡೀ ನಾಟಕ ಆತ್ಮಸಾಕ್ಷಿಯ ನ್ಯಾಯಾಲಯದಲ್ಲಿ ನಡೆಯುವ ವಿಚಾರಣೆಯಿಂದ ಕೂಡಿರಲಿದ್ದು, ಭಾರತೀಯ ಇತಿಹಾಸದ ಮೇರು ವ್ಯಕ್ತಿತ್ವಗಳೇ ಕಟಕಟೆಯಲ್ಲಿ ನಿಂತು ಇತಿಹಾಸದಲ್ಲಿನ ಸತ್ಯಾಂಶವನ್ನು ತಿಳಿಸುವಂತಹ ರೀತಿಯಲ್ಲಿ ನಾಟಕವನ್ನು ರೂಪಿಸಲಾಗಿದೆ. ವಿಚಾರಣೆ ನಡುವೆ, ಇತಿಹಾಸದ ಮೇರು ವ್ಯಕ್ತಿತ್ವಗಳ ನಡುವೆ ನಡೆಯುವ ಸಂಭಾಷಣೆ ಮತ್ತು ಅಭಿನಯ ನಾಟಕದ ದೊಡ್ಡ ಶಕ್ತಿಯಾಗಿದೆ.

**43 ಚಾರಿತ್ರಿಕ ಕೃತಿಗಳ ಅಧ್ಯಯನ:** 'ಟಿಪ್ಪು ನಿಜಕನಸುಗಳು', 'ಕರಿನೀರ ವೀರ' ನಾಟಕದ ಯಶಸ್ಸಿನ ನಂತರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ರಂಗಪ್ರಯೋಗದ ಪೂರ್ವ ತಯಾರಿ ಯಶಸ್ವಿಯಾಗಿ ನಡೆಯುತ್ತಿದ್ದು, ಕಡೆ ಹಂತಕ್ಕೆ ಬಂದಿದೆ. ಈ ನಾಟಕ ನಿರ್ಮಾಣಕ್ಕಾಗಿ ಭಾರತೀಯ ಇತಿಹಾಸ ಹಾಗೂ ಮೇರು ವ್ಯಕ್ತಿತ್ವಗಳ ಆತ್ಮಚರಿತ್ರೆ ಸೇರಿದಂತೆ 43 ಚಾರಿತ್ರಿಕ ಕೃತಿಗಳನ್ನು ಅಧ್ಯಯನ ಮಾಡಿದ್ದೇನೆ ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಜಾತ್ಯತೀತ, ಪ್ರಗತಿಪರ ಎಂಬ ಹೆಸರಿನಲ್ಲಿ ನಡೆದಿರುವ ಮೋಸ, ಯಾವುದೋ ಒಂದು ಜನಾಂಗದ ತುಷ್ಟೀಕರಣಕ್ಕೆ ದೇಶಕ್ಕಾದ ಹಾನಿ, ವೋಟ್ ಬ್ಯಾಂಕ್ ದುರುಪಯೋಗ, ಅಧಿಕಾರದ ಮೋಹ, ಸುಳ್ಳು ಚರಿತ್ರೆಗಳನ್ನು ಪಠ್ಯ–ಪುಸ್ತಕದಲ್ಲಿ ತುಂಬಿ ಯುವ ಸಮುದಾಯವನ್ನು ಹೇಗೆ ದುರ್ಬಲಗೊಳಿಸಲಾಯಿತೆಂಬ ವಿಚಾರಗಳನ್ನು ನಾಟಕದ ಮೂಲಕ ತೋರಿಸುವ ವಿಶಿಷ್ಟ ರಂಗಪ್ರಯೋಗ ಇದಾಗಿದೆ ಎಂದು ಮಾಹಿತಿ ನೀಡಿದರು.

> ನೆಹರು ಅವರ ಡಿಸ್ಕವರಿ ಆಫ್ ಇಂಡಿಯಾ ಸೇರಿದಂತೆ ಪರ–ವಿರುದ್ಧ ಇರುವ 43 ಪ್ರಮುಖ ಕೃತಿಗಳನ್ನು ಅಧ್ಯಯನ ಮಾಡಿ 'ಸತ್ಯವನ್ನೇ ಹೇಳುತ್ತೇನೆ' ರಂಗ ಪ್ರಯೋಗಕ್ಕೆ ಮುಂದಾಗಿದ್ದೇನೆ. 'ಟಿಪ್ಪು ನಿಜಕನಸುಗಳು', 'ಕರಿನೀರ ವೀರ' ನಾಟಕಗಳ ನಂತರ ಈ ನಾಟಕವೂ ರಂಗಾಸಕ್ತರು ಮನಸ್ಸಿಗೆ ಮುಟ್ಟಲಿದೆ ಎಂಬ ವಿಶ್ವಾಸವಿದೆ. ಇದೇ ತಿಂಗಳಾಂತ್ಯಕ್ಕೆ ಮೊದಲ ಪ್ರದರ್ಶನ ನಡೆಯಲಿದೆ.
> – **ಅಡ್ಡಂಡ ಕಾರ್ಯಪ್ಪ,** ಮಾಜಿ ನಿರ್ದೇಶಕ, ರಂಗಾಯಣ ಮೈಸೂರು

**3 ಗಂಟೆಯ ನಾಟಕ:** 'ಸತ್ಯವನ್ನೇ ಹೇಳುತ್ತೇನೆ' ನಾಟಕ ಮೂರು ಗಂಟೆಗಳ ಕಾಲ ಇರಲಿದ್ದು, ಆತ್ಮಸಾಕ್ಷಿ ನ್ಯಾಯಾಲಯದ ಕಟಕಟೆಯ ಸುತ್ತ ಪಾತ್ರಗಳು ಬರಲಿವೆ. ಭಾರತೀಯ ಇತಿಹಾಸದ ಮೇರು ವ್ಯಕ್ತಿತ್ವಗಳಾದ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್ ಹಾಗೂ ಸಾವರ್ಕರ್ ಅವರು, ಇತಿಹಾಸದಲ್ಲಿ ಹುದುಗಿರುವ ಸತ್ಯಾಂಶವನ್ನು ತಾವೇ ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಹೇಳುವ ರೀತಿಯಲ್ಲಿ ನಾಟಕ ರೂಪಿಸಲಾಗಿದೆ. ರಂಗಭೂಮಿ ಇತಿಹಾಸದಲ್ಲೇ ಇದೊಂದು ವಿಭಿನ್ನ ಪ್ರಯೋಗ ಎಂದರು.

# ದಸರಾ ಸಂದರ್ಭದಲ್ಲಿ ಮೈಸೂರು ಅರಮನೆಗೆ 1,35,456 ಮಂದಿ ಭೇಟಿ

● ಅರಮನೆ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ಯುತ್ ದೀಪಾಲಂಕಾರ ವೀಕ್ಷಣೆ ಸೇರಿದರೆ ಈ ಸಂಖ್ಯೆ ಇನ್ನೂ ದುಪ್ಪಟ್ಟು ● ಅ.13, 14ರಂದು ಒಟ್ಟು 50,374 ಮಂದಿ ವೀಕ್ಷಣೆ


ಸೋಮವಾರ ಸಂಜೆ ದೇವರಾಜ ಅರಸು ರಸ್ತೆಯಲ್ಲಿ ದೀಪಾಲಂಕಾರ ನೋಡಲು ವಾಹನ ದಟ್ಟಣೆ ಇದ್ದಿತು.


ಸೋಮವಾರ ಸಂಜೆ ಮೈಸೂರು ಅರಮನೆ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡ ಅಪಾರ ಸಂಖ್ಯೆಯ ಜನ.

> ಇನ್ನೂ ಮೂರ್‍ನಾಲ್ಕು ದಿನಗಳ ಕಾಲ ಅರಮನೆಗೆ ವೀಕ್ಷಕರ ಸಂಖ್ಯೆ ಹೆಚ್ಚಿರಲಿದೆ. ಪ್ರತಿದಿನ 15ರಿಂದ 20 ಸಾವಿರಕ್ಕೂ ಹೆಚ್ಚು ಜನ ಅರಮನೆಗೆ ಭೇಟಿ ನೀಡಲಿದ್ದಾರೆ. ತದನಂತರ ತುಸು ಇಳಿಕೆಯಾಗಿ ಡಿಸೆಂಬರ್ ಕೊನೆ ವಾರದಲ್ಲಿ ಮತ್ತೆ ಹೆಚ್ಚಳವಾಗಲಿದೆ. ಈ ಬಾರಿಯ ಜಂಬೂ ಸವಾರಿ ದಿನದಂದು ಅರಮನೆ ಆವರಣದಲ್ಲಿ 50 ಸಾವಿರ ಮಂದಿ ವಿಜಯದಶಮಿ ಮೆರವಣಿಗೆ ವೀಕ್ಷಿಸಿದ್ದಾರೆ.
> –**ಟಿ.ಎಸ್.ಸುಬ್ರಹ್ಮಣ್ಯ,** ಉಪನಿರ್ದೇಶಕರು, ಅರಮನೆ ಮಂಡಳಿ, ಮೈಸೂರು.

### ಅರಮನೆ, ನಗರದ ದೀಪಾಲಂಕಾರ ವೀಕ್ಷಣೆಗೆ ಕಿಕ್ಕಿರಿದಿದ್ದ ಜನ

ಸೋಮವಾರ (ಅ.14) ಸಂಜೆ ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆಗೆ ಭಾರಿ ಪ್ರಮಾಣದಲ್ಲಿ ಜನದಟ್ಟಣೆ ಇದ್ದಿತು. ಕಳೆದ 10 ದಿನಗಳಿಂದ ಮೈಸೂರು ಪ್ರವಾಸಿಗರಿಂದ ತುಂಬಿದ್ದು, ದಸರಾ ವಿದ್ಯುತ್ ದೀಪಾಲಂಕಾರ ಮುಂದುವರೆದಿರುವ ಹಿನ್ನೆಲೆಯಲ್ಲಿ ನಗರದ ವೃತ್ತ ಹಾಗೂ ರಸ್ತೆಗಳು ವಿದ್ಯುತ್ ದೀಪಗಳ ಶೃಂಗಾರದಲ್ಲಿ ಕಂಗೊಳಿಸುತ್ತಿವೆ. ಬೈಕ್ ಮತ್ತು ಕಾರುಗಳಲ್ಲಿ ಮಾತ್ರವಲ್ಲದೆ, ಕಾಲ್ನಡಿಗೆಯಲ್ಲಿಯೂ ರಸ್ತೆಗಿಳಿದ ಜನ ವಿದ್ಯುತ್ ದೀಪಾಲಂಕಾರದಲ್ಲಿ ಶೋಭಿಸುತ್ತಿರುವ ನಗರವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ. ಇದು ಸೋಮವಾರವೂ ಕಂಡು ಬಂದಿತು. ಸೋಮವಾರ ದೇವರಾಜ ಅರಸು ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜನ ದೀಪಾಲಂಕಾರ ವೀಕ್ಷಿಸುತ್ತಿರುವುದು ಕಂಡಿತು.

ಮೈಸೂರು,ಅ.14(ಪಿಎಂ)– ಈ ಬಾರಿಯ ದಸರಾ ಮಹೋತ್ಸವ ಸಂದರ್ಭದಲ್ಲಿ 1,35,456 (ಅ.1ರಿಂದ 10ರವರೆಗೆ) ಮಂದಿ ಮೈಸೂರು ಅರಮನೆ ಅಂದ ಕಣ್ತುಂಬಿಕೊಂಡಿದ್ದಾರೆ. ಅಲ್ಲದೆ, ಇದೇ ಅವಧಿಯಲ್ಲಿ ಪ್ರತಿದಿನ ಸಂಜೆ ಭಾರಿ ಸಂಖ್ಯೆಯ ಜನ ಇಂಕ್ಯಾಂಡೇಸ್ಸೆಂಟ್ ಬಲ್ಬ್‌ಗಳಿಂದ ವಿದ್ಯುತ್ ದೀಪಾಲಂಕಾರದೊಂದಿಗೆ ಹೊಂಬಣ್ಣದಲ್ಲಿ ಕಂಗೊಳಿಸುವ ಅರಮನೆ ಕಂಡು ಮನಸೋತಿದ್ದಾರೆ.

ದೇಶ–ವಿದೇಶದ ಪ್ರವಾಸಿಗರು, ಸ್ಥಳೀಯರು ಹಾಗೂ ನೆರೆ ಜಿಲ್ಲೆಯವರು ಸೇರಿದಂತೆ ದಸರಾ ಸಂದರ್ಭದಲ್ಲಿ ಲಕ್ಷಕ್ಕೂ ಅಧಿಕ ಮಂದಿ ಮೈಸೂರು ಅರಮನೆಯನ್ನು ವೀಕ್ಷಣೆ ಮಾಡಿದ್ದಾರೆ. ಇದು ಟಿಕೆಟ್ ಖರೀದಿಸಿ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಅರಮನೆ ವೀಕ್ಷಣೆ ಮಾಡಿದವರ ಸಂಖ್ಯೆಯಾದರೆ, ಇದರ ಹೊರತಾಗಿ ದಸರಾ ಮಹೋತ್ಸವ ಪ್ರಯುಕ್ತ ಪ್ರತಿದಿನ ಅರಮನೆ ವೇದಿಕೆಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅರಮನೆ ದೀಪಾಲಂಕಾರ ವೀಕ್ಷಣೆಗೂ ಭಾರಿ ಸಂಖ್ಯೆಯಲ್ಲಿ ಜನ ಭೇಟಿ ನೀಡಿದ್ದಾರೆ.

ಕಳೆದ ವರ್ಷ ದಸರಾ ವೇಳೆಯಲ್ಲಿ (2023ರ ಅ.14ರಿಂದ 23ರವರೆಗೆ 10 ದಿನಗಳು) 1,32,234 ಮಂದಿ ಅರಮನೆ ವೀಕ್ಷಣೆ ಮಾಡಿದ್ದರು (ಸಾಂಸ್ಕೃತಿಕ ಕಾರ್ಯಕ್ರಮ, ದೀಪಾಲಂಕಾರ ವೀಕ್ಷಕರ ಹೊರತುಪಡಿಸಿ). ಈ ಬಾರಿ ಅ.1ರಿಂದ 10ರವರೆಗೆ 1,35,456 ಮಂದಿ ಅರಮನೆ ಕಣ್ತುಂಬಿಕೊಂಡಿದ್ದಾರೆ.

2024ರ ಅ.1ರಂದು 10,126 ಮಂದಿ ಅರಮನೆ ವೀಕ್ಷಣೆ ಮಾಡಿದ್ದು, ಅದೇ ರೀತಿ ಅ.2ರಂದು (ಮಧ್ಯಾಹ್ನ 2.30ರ ನಂತರ) 13,260, ಅ.3ರಂದು 7,129, ಅ.4ರಂದು 12,247, ಅ.5ರಂದು 18,307, ಅ.6ರಂದು 21,578, ಅ.7ರಂದು 13,931, ಅ.8ರಂದು 12,067, ಅ.9ರಂದು 13,568 ಹಾಗೂ ಅ.10ರಂದು 13,243 ಮಂದಿ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಅರಮನೆಗೆ ಭೇಟಿ ನೀಡಿದ್ದಾರೆ. ಅಂತೆಯೇ ಅ.13ರಂದು 27,436 ಮಂದಿ ಭೇಟಿ ನೀಡಿದ್ದು, ಅ.14ರ ಸೋಮವಾರ 22,938 ಮಂದಿ ಅರಮನೆ ವೀಕ್ಷಿಸಿದ್ದಾರೆ. ಕೋವಿಡ್ ಆತಂಕವಿದ್ದ 2020 ಹಾಗೂ 2021ರ ದಸರಾ ಸಂದರ್ಭದಲ್ಲಿ ಅರಮನೆಗೆ ಭೇಟಿ ನೀಡಿದವರ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, 2022ರಿಂದ ಅರಮನೆಗೆ ವೀಕ್ಷಕರ ಸಂಖ್ಯೆ ಮತ್ತೆ ಹೆಚ್ಚಳಗೊಂಡಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಜಗದ್ವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆ ಶನಿವಾರ ವಿಜೃಂಭಣೆಯಿಂದ ನೆರವೇರಿದೆ. ದಸರಾ ವೇಳೆ ಅರಮನೆ ಎದುರು ಪ್ರತಿದಿನ ಸಂಜೆ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಹಸ್ರಾರು ಸಂಖ್ಯೆಯಲ್ಲಿ ಜನ ಆಗಮಿಸುತ್ತಿದ್ದರು. ಇವರಿಗೆಲ್ಲಾ ಪ್ರವೇಶ ಉಚಿತವಿತ್ತು. ಇದರ ಹೊರತಾಗಿ ಅ.1ರಿಂದ 14ರವರೆಗೆ ಟಿಕೆಟ್ ಖರೀದಿಸಿ 1,81,736 ಮಂದಿ (ವಿಐಪಿಗಳನ್ನು ಬಿಟ್ಟು) ಅರಮನೆ ವೀಕ್ಷಣೆ ಮಾಡಿದ್ದಾರೆ. ಈ ಅವಧಿಯಲ್ಲಿ ಅ.2ರಂದು ಅರ್ಧ ದಿನ, ಅ.11 ಮತ್ತು 12ರಂದು ಅರಮನೆ ವೀಕ್ಷಣೆಗೆ ಸಂಪೂರ್ಣ ರಜೆ ಇತ್ತು ಎಂದು ತಿಳಿಸಿದರು.

## ನಕ್ಕರೆ ಅದೇ ಸ್ವರ್ಗ

ಗುರು : ಸ್ವರ್ಗಕ್ಕೆ ಹೋಗೋ ಇಚ್ಛೆ ಇರೋರು ಕೈಯೆತ್ತಿ, (ಗುಂಡನ ಅತ್ತೆ ಮತ್ತು ಹೆಂಡತಿ ಕೈ ಎತ್ತಿದ್ರು, ಆದರೆ ಗುಂಡ ಕೈ ಎತ್ತಲಿಲ್ಲ.)
ಗುರು : ನೀನು ಸ್ವರ್ಗಕ್ಕೆ ಹೋಗುವುದಿಲ್ಲವೇ?
ಗುಂಡ : ಇಲ್ಲ.. ಗುರುಗಳೇ.. ಇವರಿಬ್ಬರು ಹೋದರೆ ನನಗಿಲ್ಲೇ ಸ್ವರ್ಗ

**ಮೈಸೂರು ಮಿತ್ರ**

ಮಂಗಳವಾರ, 15 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ.........**

ಕಾಣದ ದಾರಿಯಲ್ಲಿ ನಿನ್ನವರನ್ನು ಹುಡುಕಬೇಡ,
ನಿನ್ನ ದಾರಿಯಲ್ಲಿ ನಿನಗಾಗಿ ಬಂದವರನ್ನು ಕಳೆದುಕೊಳ್ಳಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಟ್ಟೆಗೆ ಹಿಟ್ಟು ಇಲ್ಲದಿದ್ರೂ ಜುಟ್ಟಿಗೆ ಮಲ್ಲಿಗೆ ಹೂವು

## ನಿಮ್ಮ ಪತ್ರಗಳು

### ಯುವ ದಸರಾ ಕಾರ್ಯಕ್ರಮ ನೇರಪ್ರಸಾರ ತಡೆ ಹಿಡಿದವರು ಯಾರು?

ಮಾನ್ಯರೆ,

ಮೈಸೂರು ದಸರಾದ ಮುಖ್ಯ ಕಾರ್ಯಕ್ರಮಗಳಲ್ಲಿ ಯುವ ದಸರಾ ಕೂಡ ಒಂದು. ಪ್ರತಿ ವರ್ಷವೂ ಈ ಕಾರ್ಯಕ್ರಮದ ನೇರಪ್ರಸಾರವನ್ನು ಮೈಸೂರು ನಗರದ ಕೆಲವು ಸ್ಥಳೀಯ ವಾಹಿನಿಗಳು ಮಾಡುತ್ತಿದ್ದವು. ಇದರಿಂದಾಗಿ ನೂಕು ನುಗ್ಗಲು, ಟ್ರಾಫಿಕ್ ಸಮಸ್ಯೆಯಿಂದಾಗಿ ಕಾರ್ಯಕ್ರಮಕ್ಕೆ ಹೋಗಲಾಗದ ಲಕ್ಷಾಂತರ ಮಂದಿ ಮನೆಯಲ್ಲೇ ಕುಳಿತು ಸದರಿ ಕಾರ್ಯಕ್ರಮವನ್ನು ವೀಕ್ಷಿಸಲು ಸಾಧ್ಯವಾಗುತ್ತಿತ್ತು. ಪ್ರತಿವರ್ಷದಂತೆ ಈ ವರ್ಷ ಕೂಡ ಅದಕ್ಕಾಗಿ ಮನೆಯಲ್ಲಿ ನಾನೂ ಕೂಡ ಕಾಯುತ್ತಾ ಕುಳಿತಿದ್ದೆ. ಮೊದಲ ದಿನದ ಕಾರ್ಯಕ್ರಮ 3.10.24. ರಂದು ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಗುತ್ತಿತ್ತು. ಶ್ರೇಯ ಘೋಷಾಲ್‌ರ ಕಾರ್ಯಕ್ರಮ ರಾತ್ರಿ 9 ಗಂಟೆಗೆ ಆರಂಭವಾಯಿತು. ಆದರೆ ಎರಡು ನಿಮಿಷ ಪ್ರಸಾರವಾದ ಕೂಡಲೇ ಅದನ್ನು ತಡೆ ಹಿಡಿಯಲಾಯಿತು. ಸ್ವಲ್ಪ ಸಮಯದ ನಂತರ ಪ್ರಸಾರ ಮಾಡುತ್ತಿದ್ದ ಸ್ಥಳೀಯ ವಾಹಿನಿಯಲ್ಲಿ ಪ್ರಸಾರ ಮಾಡಲು ಸಂಬಂಧಪಟ್ಟವರಿಗೆ ಹಣ ಪಾವತಿಸಿ ಅನುಮತಿ ಪಡೆಯಬೇಕು ಎಂದು ಪ್ರಸಾರವನ್ನು ನಿಲ್ಲಿಸಲಾಗಿದೆ ಎಂದು ತಿಳಿಸಿದರು.

ಗಾಯಕರ ಕೋರಿಕೆ ಮೇರೆಗೆ ನೇರ ಪ್ರಸಾರ ಮಾಡಿರಲಿಲ್ಲ ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದರು ಎಂದು ವರದಿ ತಿಳಿಸಿದೆ. ಆದರೆ ಇದು ಜನರನ್ನು ದಿಕ್ಕು ತಪ್ಪಿಸುವ ಹೇಳಿಕೆಯಾಗಿದೆ. ಇಲ್ಲಿ ಈ ಅಧಿಕಾರಿಗಳು ಸೇರಿದಂತೆ ಯುವ ದಸರಾ ಸಮಿತಿಯವರು ಹಕ್ಕುಗಳನ್ನು ಯಾರಿಗೋ ಮಾರಿಕೊಂಡು ಅವ್ಯವಹಾರ ನಡೆದಿರುವ ಅನುಮಾನ ಜನರನ್ನು ಕಾಡುತ್ತಿದೆ. ಈ ಗಾಯಕರು ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದವರಾದರೇನು? ಇವರಿಗೆ ಸರ್ಕಾರದ ಜನರ ತೆರಿಗೆಯ ಹಣವನ್ನು ಅವರು ಕೇಳಿದಷ್ಟು ನೀಡಲಾಗಿದೆ. ಹಾಗಿದ್ದ ಮೇಲೆ ಅದನ್ನು ಲೈವ್ ಪ್ರಸಾರ ಮಾಡಬೇಡಿ ಎಂದು ಹೇಳುವ ಹಕ್ಕು ಅವರಿಗಿಲ್ಲ. ಇನ್ನು ಮೇಲೆ ಕರ್ನಾಟಕದ ಕಲಾವಿದರಿಂದಲೇ ಕಾರ್ಯಕ್ರಮ ನಡೆಸಲಿ. ಜನರ ತೆರಿಗೆಯ ಸುಮಾರು 14 ಕೋಟಿ ಹಣವನ್ನು ಈ ಯುವ ದಸರಾ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಗಿದೆ ಎಂದು ವರದಿಯಾಗಿದೆ. ಈ ಬಗ್ಗೆ ಸೂಕ್ತ ತನಿಖೆ ಮಾಡಲಿ. ಮುಂದಿನ ವರ್ಷವಾದರೂ ಇಂತಹ ಅವ್ಯವಸ್ಥೆಗಳಾಗದೆ, ನೇರ ಪ್ರಸಾರ ಜನರಿಗೆ ದೊರೆಯುವಂತಾಗಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ಭಾರತ ಮಾತಾ ಉದ್ಯಾನವನದ ಗೇಟ್ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರದ 'ಎಂ' ಬ್ಲಾಕ್‌ನಲ್ಲಿರುವ ಭಾರತಮಾತಾ ಉದ್ಯಾನವನವು ಪ್ರತಿನಿತ್ಯ ಹಲವಾರು ಮಂದಿ ವಯೋವೃದ್ಧರು, ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕರು ವಾಯುವಿಹಾರ ಹಾಗೂ ವಿವಿಧ ಆಟೋಟಗಳಲ್ಲಿ ತೊಡಗಿ ತಮ್ಮ ದೈನಂದಿನ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲು ಸಹಕಾರಿಯಾಗಿದೆ. ಆದರೆ, ಈ ಉದ್ಯಾನವನಕ್ಕೆ ಪ್ರವೇಶಿಸಲು ಮನೆಗಳಿಗೆ ಅಳವಡಿಸುವಂತಹ ಗೇಟ್ ಹಾಕಲಾಗಿರುವುದರಿಂದ, ಹಸು–ಕರುಗಳು, ಬೀದಿ ನಾಯಿಗಳು ಸುಲಭವಾಗಿ ಒಳ ಪ್ರವೇಶಿಸುತ್ತಿವೆ. ಹೀಗಾಗಿ, ಇಲ್ಲಿಗೆ ಬರುವವರಿಗೆ ಹಸು–ಕರುಗಳು ತಿವಿದ, ನಾಯಿಗಳು ಕಚ್ಚಿದ ಘಟನೆಗಳೂ ಸಂಭವಿಸಿವೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ಬೇರೆ ಕಡೆಗಳಲ್ಲಿ ಉದ್ಯಾನವನಗಳಿಗೆ ಅಳವಡಿಸಲಾಗಿರುವ ವೃತ್ತಾಕಾರದ ರೀತಿಯ ಗೇಟ್ ಅಳವಡಿಸಿ, ಪ್ರಾಣಿಗಳ ಅತಿಕ್ರಮ ಪ್ರವೇಶ ತಡೆದು, ಆಗಬಹುದಾದ ಅನಾಹುತಗಳನ್ನು ತಪ್ಪಿಸಬೇಕಿದೆ. ಜೊತೆಗೆ, ಹಾಳಾಗಿರುವ ಅಲ್ಲಿನ ಉಯ್ಯಾಲೆ, ಕಸದಬುಟ್ಟಿ ಹಾಗೂ ಕಾಂಕ್ರಿಟ್ ಟೈಲ್ಸ್‌ಗಳನ್ನು ದುರಸ್ತಿಗೊಳಿಸಬೇಕಿದೆ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

### ಎಸ್‌ವಿಇಐ ಶಾಲೆ ಮುಂದಿನ ರಸ್ತೆ ದುರಸ್ತಿಪಡಿಸಿ

ಮಾನ್ಯರೆ,

ಮೈಸೂರಿನ ಎಸ್‌ವಿಇಐ ಶಾಲೆಯ ಮುಂದಿರುವ ನಾಲ್ಕು ರಸ್ತೆಗಳು ಸೇರುವ ಜಂಕ್ಷನ್ ಸಂಪೂರ್ಣವಾಗಿ ಹೊಂಡಮಯವಾಗಿದೆ. ಮಳೆ ಬಂದರೆ ನೀರು ನಿಂತು ಓಡಾಡಲು ಕಷ್ಟವಾಗುತ್ತೆ. ನಾಲ್ಕು ಕಡೆಯ ರಸ್ತೆಗಳು ಗುಂಡಿ ಬಿದ್ದಿವೆ. ದಿನ ಸಾವಿರಾರು ಮಕ್ಕಳು, ವಾಹನಗಳು ಓಡಾಡುತ್ತವೆ. ನೂರಾರು ಮಕ್ಕಳು ಸೈಕಲಿನಲ್ಲಿ ಓಡಾಡುತ್ತಾರೆ. ಎಲ್ಲರೂ ಹೊಂಡಗಳನ್ನು ತಪ್ಪಿಸುವ ಭರದಲ್ಲಿ ಹೇಗೆಂದರೆ ಹಾಗೆ ಓಡಾಡುತ್ತಾರೆ. ಇದರಿಂದ ಅಲ್ಲಿ ಓಡಾಡಲು ಭಯವಾಗುತ್ತದೆ. ಸಂಬಂಧಪಟ್ಟವರು ಯಾರೂ ಆ ಕಡೆ ಗಮನಹರಿಸುತ್ತಿಲ್ಲ. ಏನಾದರೂ ಅನಾಹುತ ಸಂಭವಿಸುವ ಮೊದಲು ಸಂಬಂಧಪಟ್ಟವರು ಇತ್ತ ಗಮನಹರಿಸಿ ರಸ್ತೆ ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ಕೆ.ಎಸ್. ಗಾಯತ್ರಿ, ಮೈಸೂರು.

### ಪ್ರತಿಷ್ಠಿತ ವಿಜಯನಗರದಲ್ಲಿ ಕಂಡ ಕಂಡಲ್ಲಿ ಕಸದ ರಾಶಿ

ಮಾನ್ಯರೆ,

ಮೈಸೂರು ವಿಜಯನಗರ 4ನೇ ಹಂತ ಒಂದು ಪ್ರತಿಷ್ಠಿತ ಬಡಾವಣೆ. ಆದರೆ ಸ್ವಚ್ಛತೆ ದೃಷ್ಟಿಯಿಂದ ಅತ್ಯಂತ ಆತಂಕ ಪರಿಸ್ಥಿತಿ ನೆಲೆಗೊಳ್ಳುತ್ತಿದೆ. ಕಂಡ ಕಂಡಲ್ಲಿ ಕಸದ ರಾಶಿ ಕಂಡು ಬರುತ್ತಿದೆ. ಈ ಹಾವಳಿ ಎಷ್ಟರ ಮಟ್ಟಿಗೆ ಇದೆ ಎಂದರೆ ವಾಯು ವಿಹಾರಕ್ಕೆ ಹೋಗುವವರು ಮೂಗು ಮುಚ್ಚಿಕೊಂಡು ಹಾದು ಹೋಗಬೇಕಿದೆ.

ಹಾಗೆಯೇ ಕೊಳೆತು ನಾರುತ್ತಿರುವ ಈ ಕಸದಿಂದಾಗಿ ಡೆಂಗ್ಯೂ, ಚಿಕೂನ್‌ಗುನ್ಯಾ ಇನ್ನಿತರೆ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಪ್ರತಿ ನಿತ್ಯವೂ ಈ ಕಸದ ರಾಶಿ ಬಳಿ ಹಿಂಡು ಹಿಂಡು ನಾಯಿಗಳು ಆವರಿಸಿದ್ದು, ಯಾರ ಮೇಲೆ ದಾಳಿ ನಡೆಸುತ್ತವೆಯೋ ಎಂಬ ಭಯದಲ್ಲೇ ಜನ ಸಂಚರಿಸಬೇಕಾಗಿ ಬಂದಿದೆ.

ಹಿರಿಯ ನಾಯಕರಂತೂ ಇಂತಹ ಕಸದ ರಾಶಿಯಿಂದಾಗಿ ರೋಸಿ ಹೋಗಿದ್ದಾರೆ. ಕೊಳೆತ ಈ ಕಸದಿಂದಾಗಿ ವಾಯುಮಾಲಿನ್ಯ ಭೀತಿಯೂ ಕಾಡಲಾರಂಭಿಸಿದೆ.

ಸಂಬಂಧಪಟ್ಟ ಅಧಿಕಾರಿಗಳು ಈ ರೀತಿ ಬೇಕು ಬೇಕಾದ ಕಡೆ ಕಸ ಸುರಿಯುವ ಹೀನ ಪ್ರವೃತ್ತಿಗೆ ಬ್ರೇಕ್ ಹಾಕಬೇಕಿದೆ. ಹಾಗೂ ಈಗಾಗಲೇ ಕೊಳೆಯುತ್ತಾ ಬಿದ್ದಿರುವ ಕಸವನ್ನು ತೆರವುಗೊಳಿಸಬೇಕಿದೆ.

–ಸವಿತಾ, ವಿಜಯನಗರ, 4ನೇ ಹಂತದ ನಿವಾಸಿ, ಮೈಸೂರು



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

**ದಿಕ್ಕುದೆಸೆ**

# ಶ್ರೀಲಂಕಾ ನೂತನ ಅಧ್ಯಕ್ಷ ಅನುರಕುಮಾರ ದಿಸ್ಸನಾಯಕೆ

ಬಾಂಗ್ಲಾದೇಶದಲ್ಲಿ ಭಾರತ ಸ್ನೇಹಿ ಶೇಕ್ ಹಸೀನಾರ ಸರಕಾರ ಪತನಗೊಂಡ ನಂತರ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಎಡ ಪಂಥೀಯ ತೀವ್ರವಾದಿ ಮಾರ್ಕ್ಸಿಸ್ಟ್–ಲೆನಿನಿಸ್ಟ್ ಪಕ್ಷದ ಅನುರಕುಮಾರ ದಿಸ್ಸನಾಯಕೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಏಷ್ಯಾ ಉಪಖಂಡದಲ್ಲಿ ಭಾರತದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ ಎಂಬುದು ರಾಜಕೀಯ ಪರಿಣತರ ಅಭಿಪ್ರಾಯವಾಗಿದೆ.

**ಯಾರು ಈ ಅನುರಕುಮಾರ ದಿಸ್ಸನಾಯಕೆ**

ಎಕೆಡಿ ಎಂದು ಶ್ರೀಲಂಕಾದಲ್ಲಿ ಜನಪ್ರಿಯರಾಗಿರುವ 55 ವರ್ಷ ವಯಸ್ಸಿನ ದಿಸ್ಸನಾಯಕೆ ಅವರು ತೀವ್ರವಾದಿ ಎಡಪಂಥೀಯ ಮಾರ್ಕ್ಸಿಸ್ಟ್–ಲೆನಿನಿಸ್ಟ್ ಪಕ್ಷವಾದ [ML] ಜನತಾ ವಿಮುಕ್ತಿ ಪೆರುಮನದ [ಜೆವಿಪಿ] ಮುಖ್ಯಸ್ಥರಾಗಿದ್ದಾರೆ. 1968ರಲ್ಲಿ ಅನುರಾಧಪುರ ಜಿಲ್ಲೆಯ ತಂಬುಟೆಗಮ ಎಂಬಲ್ಲಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದರು. ಮಾರ್ಕ್ಸ್–ಲೆನಿನ್ ಸಿದ್ಧಾಂತಗಳ ಮೇಲೆ ಅಪಾರ ವಿಶ್ವಾಸವುಳ್ಳ ವಿದ್ಯಾರ್ಥಿ ನಾಯಕರೆಂದು ಖ್ಯಾತಿ ಗಳಿಸಿದರು. ಎಕೆಡಿಯವರು ನಿಷ್ಕಳಂಕ ಚಾರಿತ್ರ್ಯ, ಬಡ ಕಾರ್ಮಿಕ ಪರಿವಾರದ ಹಿನ್ನೆಲೆ, ವಿನಯಶೀಲ ನಾಯಕನೆಂಬ ವರ್ಚಸ್ಸಿನಿಂದ ದೇಶದ ಅತ್ಯುನ್ನತ ಸ್ಥಾನಕ್ಕೆ ಚುನಾಯಿತರಾಗಿದ್ದಾರೆ. ತೊಂಭತ್ತರ ದಶಕದಲ್ಲಿ ಜೆ.ವಿ.ಪಿಯು ಶ್ರೀಲಂಕಾದಲ್ಲಿ ಭಾರತ ವಿರೋಧಿ ಭಾವನೆಗಳನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾಗಿತ್ತು. 1987ರಲ್ಲಿ ದೇಶದಲ್ಲಿ ಸರಕಾರ ವಿರೋಧಿ ದಂಗೆಗಳಾದಾಗ ಎಕೆಡಿಯವರು ಜೆವಿಪಿ ಸೇರಿದ್ದರು. ಎಕೆಡಿಯವರನ್ನು ಚೀನಾ ದೇಶಕ್ಕೆ ಆಪ್ತನೆಂದು ಗುರುತಿಸಲಾಗುತ್ತದೆ.

ಎಕೆಡಿ ನಾಯಕತ್ವದ ಜೆವಿಪಿಯನ್ನು ಶ್ರೀಲಂಕಾದಲ್ಲಿ ಕಮ್ಯೂನಿಸ್ಟ್ ಕ್ರಾಂತಿಯನ್ನು ಬಲಪಡಿಸಲು 1965ರಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ ಜೆವಿಪಿ ಒಂದು ಸಣ್ಣ ಸಂಘಟನೆಯಾಗಿದ್ದರೂ ದೇಶದ ರಾಜಕೀಯದ ಮೇಲೆ ಪ್ರಭಾವ ಬೀರಬಲ್ಲ ಸುಸಂಘಟಿತ ಪಕ್ಷವಾಯಿತು. ದೇಶದಲ್ಲಿ ಸಮಾಜವಾದಿ ರಾಜ್ಯವನ್ನು ಸ್ಥಾಪಿಸಲು ಈ ಸಂಘಟನೆಯು 1971 ಮತ್ತು 1987–1989ರಲ್ಲಿ ಎರಡು ಬಾರಿ ಸರಕಾರದ ವಿರುದ್ಧ ಸಶಸ್ತ್ರ ಹಿಂಸಾತ್ಮಕ ದಂಗೆಗಳನ್ನು ನಡೆಸಿತು. 1971ರಲ್ಲಿ ಬಂಡಾರನಾಯಕೆ ಸರಕಾರದ ವಿರುದ್ಧ ಜೆವಿಪಿಯು ಸಶಸ್ತ್ರ ದಂಗೆಯ ಮೂಲಕ ಜಗತ್ತಿನ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಈ ವಿಫಲ ದಂಗೆಯು ಸುಮಾರು ಐದು ಸಾವಿರ ಜನರನ್ನು ಬಲಿ ತೆಗೆದುಕೊಂಡಿತ್ತು.

1987–1989ರಲ್ಲಿ ಭಾರತ–ಶ್ರೀಲಂಕಾ ಒಪ್ಪಂದದ ಮೂಲಕ ದೇಶದಲ್ಲಿ ಭಾರತದ ಹಸ್ತಕ್ಷೇಪ ಹಾಗೂ ದ್ವೀಪವನ್ನು ವಿಭಜಿಸುವ ಯೋಜನೆ ವಿರುದ್ಧ ಜೆವಿಪಿ ಮತ್ತೆ ಹಿಂಸಾತ್ಮಕ ದಂಗೆ ಆರಂಭಿಸಿತು. ಶ್ರೀಲಂಕಾದ ಬಹು ದೊಡ್ಡ ಪ್ರಮಾಣದ ನಾಗರಿಕರಲ್ಲಿ ವ್ಯಾಪಕವಾಗಿದ್ದ ರಾಷ್ಟ್ರೀಯ ಭಾವನೆ ಮತ್ತು ಭಾರತೀಯ ಶಾಂತಿಪಾಲನಾ ಪಡೆಗಳ ಆಗಮನವನ್ನು ವಿರೋಧಿಸುತ್ತಿದ್ದ ಜನರ ಭಾವನೆಗಳನ್ನು ಜೆವಿಪಿ ಬಳಸಿಕೊಂಡಿತು. ಜೆವಿಪಿಯು ಆ ದಿನಗಳಲ್ಲಿ ಸರಕಾರಿ ಪರ ಎನ್ನುವ ಸಾವಿರಾರು ಜನರ ಹತ್ಯೆ ಮಾಡಿತು. ಮೂರು ವರ್ಷಗಳ ಕಾಲ ಜೆವಿಪಿ ನಡೆಸಿದ ಹಿಂಸಾತ್ಮಕ ದಂಗೆ, ಬಂದ್‌ಗಳಿಂದ ದೇಶ ದುರ್ಬಲಗೊಂಡಿತ್ತು. 1990ರ ಆರಂಭದಲ್ಲಿ ಸರಕಾರಿ ಪಡೆಗಳು ಜೆವಿಪಿ ಬಂಡುಕೋರರ ವಿರುದ್ಧ ಮೇಲುಗೈ ಸಾಧಿಸಿತು. ಹೆಚ್ಚಿನ ಜೆವಿಪಿ ಪಾಲಿಟ್ ಬ್ಯೂರೊ ಪದಾಧಿಕಾರಿಗಳನ್ನು ಕೊಲ್ಲಲಾಯಿತು ಅಥವಾ ಬಂಧಿಸಲಾಯಿತು. ಸರಕಾರ ಈ ದಂಗೆಯನ್ನು ಕೊನೆಗೂ ಉಕ್ಕಿನ ಹಸ್ತದಿಂದ ಕ್ರೂರ ರೀತಿಯಲ್ಲಿ ದಮನಿಸಿತು. ಅಧಿಕೃತ–ಅನಧಿಕೃತ ವರದಿಗಳ ಪ್ರಕಾರ ಈ ದಂಗೆಯಲ್ಲಿ ಅರ್ವತ್ತು ಸಾವಿರ ಜನರು ಹತ್ಯೆಗೀಡಾದರೆಂದು ಅಂದಾಜಿಸಲಾಗಿದೆ. ಶ್ರೀಲಂಕಾದಲ್ಲಿ ಸಮಾಜವಾದಿ ರಾಜ್ಯ ಸ್ಥಾಪನೆಗೆ ನಡೆಸಿದ ಎರಡೂ ಹಿಂಸಾತ್ಮಕ ದಂಗೆಗಳು ವಿಫಲವಾದವು. ಆನಂತರ ಜೆವಿಪಿ ದೇಶದ ಪ್ರಜಾಸತ್ತಾತ್ಮಕ ರಾಜಕೀಯ ಮುಖ್ಯವಾಹಿನಿಗೆ ಪ್ರವೇಶಿಸಲು ನಿರ್ಧರಿಸಿತು.

ಅದಕ್ಕಾಗಿ ಮಾರ್ಕ್ಸ್‌ವಾದಿ ನೀತಿಯ ಕೆಲವು ಮೂಲ ಸಿದ್ಧಾಂತಗಳನ್ನು ತ್ಯಜಿಸಿತು. ಪ್ರಮುಖವಾಗಿ ಖಾಸಗಿ ಆಸ್ತಿಯನ್ನು ರಾಷ್ಟ್ರೀಕರಣಗೊಳಿಸುವ ನೀತಿಯನ್ನು ಕೈಬಿಟ್ಟಿತು. ಆನಂತರ 1999ರ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ ಜೆವಿಪಿ ಅಭ್ಯರ್ಥಿ ನಂದನ ಗುಣತಿಲ್ಲಕೆ ಕೇವಲ ಶೇ.4.08 ರಷ್ಟು ಮತ ಪಡೆದಿದ್ದರು. ಆದರೆ 2004ರಲ್ಲಿ ಶ್ರೀಲಂಕಾ ಸಂಸತ್ತಿಗೆ ಜೆವಿಪಿಯು ಯುನೈಟೆಡ್ ಪೀಪಲ್ಸ್ ಫ್ರೀಡಂ ಮೈತ್ರಿಕೂಟದ ಪಕ್ಷವಾಗಿ ಸ್ಪರ್ಧಿಸಿ ಅದ್ಭುತ ಯಶಸ್ಸು ಗಳಿಸಿತು. ಈ ಚುನಾವಣೆಯಲ್ಲಿ ಯುಪಿಎಫ್ ಮೈತ್ರಿಕೂಟವು ಸಂಸತ್ತಿನ 225 ಸ್ಥಾನಗಳಲ್ಲಿ ಶೇ.45.6 ಮತಗಳಿಕೆಯೊಂದಿಗೆ 105 ಸ್ಥಾನಗಳನ್ನು ಗಳಿಸಿತು. ಈ ಮೈತ್ರಿಕೂಟದಲ್ಲಿ ಜೆವಿಪಿಯು ಎರಡನೇ ಅತಿ ದೊಡ್ಡ ಪಕ್ಷವಾಗಿ 39 ಸಂಸದರು ಹಾಗೂ ಮೂರು ಕ್ಯಾಬಿನೆಟ್ ಖಾತೆಗಳೊಂದಿಗೆ ಸರಕಾರದ ಭಾಗವಾಯಿತು. 2010ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜೆವಿಪಿಯು ಪ್ರಜಾಸತ್ತಾತ್ಮಕ ರಾಷ್ಟ್ರೀಯ ಮೈತ್ರಿಕೂಟಕ್ಕೆ ಸೇರಿ ಮಾಜಿ ಸೇನಾ ಮುಖ್ಯಸ್ಥ ಶರತ್ ಫ್ಲೆನ್ಸೆಕಾ ಬಣದೊಂದಿಗೆ ಸ್ಪರ್ಧಿಸಿತು. ಮೈತ್ರಿಕೂಟ ಕೇವಲ ಏಳು ಸ್ಥಾನಗಳನ್ನು ಗಳಿಸಿತು. ಹಿಂದಿನ ಸಂಸತ್ತಿನಲ್ಲಿ 39 ಸ್ಥಾನ ಹೊಂದಿದ್ದ ಜೆವಿಪಿಯ ಬಲ ಕೇವಲ ನಾಲ್ಕು ಸ್ಥಾನಕ್ಕೆ ಕುಸಿಯಿತು. 2015ರ ಸಂಸತ್ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ ಜೆವಿಪಿಯು 5.44 ಲಕ್ಷ ಮತ ಗಳಿಕೆಯೊಂದಿಗೆ ಆರು ಸ್ಥಾನಗಳಲ್ಲಿ ವಿಜಯಿಯಾಯಿತು.



**ಜೆವಿಪಿಯ ನಾಯಕತ್ವ ಪಡೆದ ಎಕೆಡಿ**

2014ರಲ್ಲಿ ಎಕೆಡಿಯವರು ಜೆವಿಪಿಯ ನೇತೃತ್ವ ಪಡೆದರು. ತಮ್ಮ ಚಾಣಾಕ್ಷತನ ಮತ್ತು ತಂತ್ರಗಾರಿಕೆಯಿಂದ ಪ್ರಥಮ ಹಂತದಲ್ಲಿ ಜೆವಿಪಿಗೆ ಇದ್ದ ಉಗ್ರವಾದಿ ಹಿಂಸಾತ್ಮಕ ಪಕ್ಷವೆಂಬ ಹಣೆಪಟ್ಟಿ, ಕಳಂಕವನ್ನು 9 ವರ್ಷ ಸತತ ಪರಿಶ್ರಮದ ನಂತರ ತೊಡೆದು ಹಾಕುವಲ್ಲಿ ಯಶಸ್ವಿಯಾದರು. ಆ ನಂತರ ಎಕೆಡಿ ಅವರು ಪಕ್ಷದ ವ್ಯಾಪ್ತಿ ವಿಸ್ತರಿಸಲು ಪ್ರಗತಿಪರರು, ವಿದ್ಯಾರ್ಥಿ ನಾಯಕರು, ಮಹಿಳಾ, ಮಾನವ ಹಕ್ಕು ಹೋರಾಟಗಾರರು, ಶಿಕ್ಷಕರನ್ನು ಒಳಗೊಂಡ ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಎಂಬ ಒಕ್ಕೂಟವನ್ನು ರಚಿಸುವಲ್ಲಿ ಯಶಸ್ವಿಯಾದರು. 2019ರ ಚುನಾವಣೆಯಲ್ಲಿ ಎಕೆಡಿಯವರು ಎನ್‌ಪಿಪಿಯ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕೇವಲ 4.18 ಲಕ್ಷ (ಶೇ.3.16) ಮತಗಳನ್ನು ಪಡೆದು ಪರಾಭವಗೊಂಡರು. 2020ರ ಸಂಸತ್ ಚುನಾವಣೆಯಲ್ಲೂ ಎನ್‌ಪಿಪಿಯು ಕೇವಲ 4.46 ಲಕ್ಷ (ಶೇ.3.48) ಮತಗಳನ್ನು ಪಡೆದು ಹೀನಾಯ ಸೋಲನುಭವಿಸಿತು.

2019ರಲ್ಲಿ ಗೊಟಬಾಯ ರಾಜಪಕ್ಷೆಯವರು ಶ್ರೀಲಂಕಾದ ಅಧ್ಯಕ್ಷರಾದ ಕೆಲವೇ ತಿಂಗಳಲ್ಲಿ ರಾಜಪಕ್ಷೆ ಕುಟುಂಬದವರು ಸರಕಾರದಲ್ಲಿ ಶಾಮೀಲಾದರು. ಮಹಿಂದಾ ರಾಜಪಕ್ಷೆ ಪ್ರಧಾನಿಯಾದರೆ, ಇನ್ನೋರ್ವ ಸಹೋದರ ತುಳಸಿ ರಾಜಪಕ್ಷೆ ಹಣಕಾಸು ಸಚಿವಾಲಯ ಸೇರಿದರು. ಈ ರೀತಿ ರಾಜಪಕ್ಷೆ ಪರಿವಾರ ಶ್ರೀಲಂಕಾ ಸರಕಾರದ ಮೇಲೆ ಬಿಗಿ ಹಿಡಿತ ಸಾಧಿಸಿತು. ವಿರೋಧಿಗಳನ್ನು ಕ್ರೂರವಾಗಿ ದಮನಿಸಿದರು. ರಾಜಪಕ್ಷೆ ಪರಿವಾರದ ಆಡಳಿತದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಿತಿ ಮೀರಿತು. ವಿನಾಶಕಾರಿ ರಾಜಕೀಯ, ಆರ್ಥಿಕ ನೀತಿಗಳು, ದುಂದುವೆಚ್ಚ ಉಚಿತ ಕೊಡುಗೆಗಳಿಂದಾಗಿ ಶ್ರೀಲಂಕಾ ಆರ್ಥಿಕತೆ ವಿನಾಶದತ್ತ ಸಾಗಿತು.

ಶ್ರೀಲಂಕಾ ಜನರು ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ದಂಗೆ ಎದ್ದರು. ಈ ಸಂದರ್ಭದಲ್ಲಿ ಎಕೆಡಿ ನಾಯಕತ್ವದಲ್ಲಿ ಎನ್‌ಪಿಪಿ ಒಕ್ಕೂಟವು ಸರಕಾರದ ನೀತಿಗಳನ್ನು ವಿರೋಧಿಸಿ 2022ರಲ್ಲಿ ಶ್ರೀಲಂಕಾ ಸಂಸತ್ ಮುಂಭಾಗದಲ್ಲಿ ನಿರಂತರ ಸತ್ಯಾಗ್ರಹ ಆರಂಭಿಸಿತು. ಆರ್ಥಿಕ ಬಿಕ್ಕಟ್ಟಿನಿಂದ ಎಕೆಡಿ ನೇತೃತ್ವದಲ್ಲಿ ಆರಂಭವಾದ ಸರಕಾರ ವಿರೋಧಿ ಅರಗಾಲಯ (ಬದಲಾವಣೆ) ಚಳವಳಿಯಿಂದ ಶ್ರೀಲಂಕಾದಲ್ಲಿ ಜೆವಿಪಿಯ ಜನಪ್ರಿಯತೆ ತೀವ್ರ ವೇಗದಲ್ಲಿ ವೃದ್ಧಿಸಿತು. ಎಕೆಡಿಯವರು ತಾವು ಅರಗಾಲಯ (ಬದಲಾವಣೆ) ಅಭ್ಯರ್ಥಿ ಎಂದು ಬಿಂಬಿಸಿ ದೇಶಾದ್ಯಂತ ಪ್ರತಿಭಟನೆಗಳನ್ನು ಸಂಘಟಿಸಿ ಆಗಿನ ಅಧ್ಯಕ್ಷರಾದ ಗೊಟಬಾಯ ರಾಜಪಕ್ಷೆ ಸರಕಾರವನ್ನು ಪತನಗೊಳಿಸುವಲ್ಲಿ ಯಶಸ್ವಿಯಾದರು. ಆಗಿನಿಂದ ಎಕೆಡಿಯವರು ಭ್ರಷ್ಟಾಚಾರ ವಿರೋಧಿ ನಾಯಕನೆಂದು ಗುರುತಿಸಲ್ಪಟ್ಟಿದ್ದಾರೆ.

> “ ಶ್ರೀಲಂಕಾದ ಹಳ್ಳ ಹಿಡಿದಿರುವ ಆರ್ಥಿಕತೆಯನ್ನು ಹಳಿಗೆ ತರಬೇಕಾಗಿದೆ. ಎನ್‌ಪಿಪಿಯ ಬಹುತೇಕ ಸ್ಥಾಪಿತ ಹಿತಾಸಕ್ತಿಗಳ ಹಿಡಿತದಿಂದ ಮುಕ್ತವಾಗಿರುವುದು ಹಾಗೂ ನಾಯಕ ಎಕೆಡಿಯವರ ನಿಷ್ಕಳಂಕ ವ್ಯಕ್ತಿತ್ವದಿಂದ ಇವರು ಶ್ರೀಲಂಕಾವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವರೆಂಬ ವಿಶ್ವಾಸದಿಂದ ಶ್ರೀಲಂಕಾ ಜನತೆ ಆಯ್ಕೆ ಮಾಡಿದ್ದಾರೆ. ಮಾರ್ಕ್ಸ್‌ವಾದದ ಅನುಯಾಯಿಯಾಗಿರುವ ಎಕೆಡಿ ದೇಶದಲ್ಲಿರುವ ಕಡು ಬಡತನವನ್ನು ನಿವಾರಿಸಲು ಆದ್ಯತೆ ನೀಡುವರೆಂಬ ವಿಶ್ವಾಸ ಜನತೆಗಿದೆ.

**ಶ್ರೀಲಂಕಾದ ಅಧ್ಯಕ್ಷರಾದ ಎಕೆಡಿ**

ಕಳೆದ ತಿಂಗಳು ಶ್ರೀಲಂಕಾದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಕೆಡಿಯವರು ಎನ್‌ಪಿಪಿ ಬ್ಯಾನರ್ ಅಡಿಯಲ್ಲಿ ತಾವು 'ಅರಗಾಲಯ' ಅಭ್ಯರ್ಥಿ ಎಂದು ಎರಡನೇ ಬಾರಿ ಸ್ಪರ್ಧಿಸಿದರು. ಈ ಚುನಾವಣೆಯಲ್ಲಿ ಮುಖ್ಯವಾಗಿ ಹಾಲಿ ಅಧ್ಯಕ್ಷ ರನಿಲ್ ವಿಕ್ರಮ್ ಸಿಂಘೆ, ಪ್ರಸ್ತುತ ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಮತ್ತು ಎಕೆಡಿ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತು.

ಚುನಾವಣಾ ಪ್ರಚಾರದಲ್ಲಿ ಎಕೆಡಿಯವರು ದೇಶದಲ್ಲಿನ ಭ್ರಷ್ಟಾಚಾರ ತೊಡೆದು ಹಾಕುವ, ದ್ವೀಪದ ಜನರಿಗೆ ಆರ್ಥಿಕ ಸ್ಥಿರತೆ, ಪರಿಹಾರ ನೀಡುವುದಾಗಿ ತಿಳಿಸಿದರು. ಇದಕ್ಕೆ ಪೂರಕವಾಗಿ ಐಎಂಎಫ್‌ನ ಬೇಲ್‌ಔಟ್ ನಿಯಮಗಳ ಬಗ್ಗೆ ಮರು ಸಂಧಾನ ಮಾಡುವ ಹಾಗೂ ಶ್ರೀಲಂಕಾದ ಪ್ರಬಲ ಕಾರ್ಯನಿರ್ವಾಹಕ ಅಧ್ಯಕ್ಷ ಪದ ರದ್ದುಗೊಳಿಸುವ ಇವೇ ಮೊದಲಾದ ಭರವಸೆಗಳನ್ನು ನೀಡಿದರು. ಈ ರೀತಿ ಎಕೆಡಿಯವರು ಮತದಾರರ ಒಲವು ಗಳಿಸಿದರು. ಚುನಾವಣೆಯಲ್ಲಿ ಮೊದಲ ಸುತ್ತಿನ ಎಣಿಕೆಯಲ್ಲಿ ಒಟ್ಟು ಚಲಾವಣೆಯಾದ 1.36 ಕೋಟಿ ಮತಗಳಲ್ಲಿ (ಶೇ.79.46), ಎಕೆಡಿಯವರಿಗೆ 56.35 ಲಕ್ಷ (ಶೇ.42.31), ಪ್ರೇಮದಾಸರಿಗೆ 43.63 ಲಕ್ಷ (ಶೇ. 32.76), ವಿಕ್ರಮ ಸಿಂಘೆಯವರು 22.99 ಲಕ್ಷ (ಶೇ.17.27) ಮತಗಳನ್ನು ಪಡೆದರು. ಶ್ರೀಲಂಕಾದಲ್ಲಿನ ಚುನಾವಣಾ ನಿಯಮದಂತೆ ಅಧ್ಯಕ್ಷರಾಗಿ ಆಯ್ಕೆಯಾಗಲು ಚಲಾವಣೆಯಾದ ಮತಗಳಲ್ಲಿ ಶೇ.50ರಷ್ಟು ಮತಗಳನ್ನು ಪಡೆಯಬೇಕು. ಶ್ರೀಲಂಕಾದಲ್ಲಿ ಪ್ರಥಮ ಬಾರಿಗೆ ಎರಡನೇ ಆದ್ಯತೆ ಮತಗಳನ್ನು ಎಣಿಸಬೇಕಾಯಿತು. ಇದರಲ್ಲಿ ಎಕೆಡಿಯವರು ಶೇ. 55.89ರಷ್ಟು ಮತಗಳನ್ನು ಗಳಿಸಿ ಎರಡನೇ ಯತ್ನದಲ್ಲಿ ಶ್ರೀಲಂಕಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

**ಎಕೆಡಿ ಮುಂದಿರುವ ಸವಾಲುಗಳು**

ಶ್ರೀಲಂಕಾದ ಹಳ್ಳ ಹಿಡಿದಿರುವ ಆರ್ಥಿಕತೆಯನ್ನು ಹಳಿಗೆ ತರಬೇಕಾಗಿದೆ. ಎನ್‌ಪಿಪಿಯ ಬಹುತೇಕ ಸ್ಥಾಪಿತ ಹಿತಾಸಕ್ತಿಗಳ ಹಿಡಿತದಿಂದ ಮುಕ್ತವಾಗಿರುವುದು ಹಾಗೂ ನಾಯಕ ಎಕೆಡಿಯವರ ನಿಷ್ಕಳಂಕ ವ್ಯಕ್ತಿತ್ವದಿಂದ ಇವರು ಶ್ರೀಲಂಕಾವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವರೆಂಬ ವಿಶ್ವಾಸದಿಂದ ಶ್ರೀಲಂಕಾ ಜನತೆ ಆಯ್ಕೆ ಮಾಡಿದ್ದಾರೆ. ಮಾರ್ಕ್ಸ್‌ವಾದದ ಅನುಯಾಯಿಯಾಗಿರುವ ಎಕೆಡಿ ದೇಶದಲ್ಲಿರುವ ಕಡು ಬಡತನವನ್ನು ನಿವಾರಿಸಲು ಆದ್ಯತೆ ನೀಡುವರೆಂಬ ವಿಶ್ವಾಸ ಜನತೆಗಿದೆ. ಆದರೆ ಬಡತನ ನಿರ್ಮೂಲನಾ ಯೋಜನೆಗಳು ಮಧ್ಯಮ, ಮೇಲ್ ಮಧ್ಯಮ ಹಾಗೂ ಶ್ರೀಮಂತ ವರ್ಗಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿದಲ್ಲಿ ಮತ್ತೆ ಶ್ರೀಲಂಕಾದಲ್ಲಿ ಅಶಾಂತಿ ಉಂಟಾಗುವ ಸಾಧ್ಯತೆಗಳಿವೆ. ಆದ್ದರಿಂದ ಎಕೆಡಿ ಅವರು ಯಾವ ರೀತಿಯ ಯೋಜನೆಗಳನ್ನು ರೂಪಿಸುವರೆಂಬುದು ಕುತೂಹಲಕರ ವಿಚಾರವಾಗಿದೆ. ಮಾರ್ಕ್ಸ್‌ವಾದಿಯಾಗಿರುವ ಎಕೆಡಿ ಅವರನ್ನು ಚೀನಾ ಆಪ್ತರೆಂದು ಗುರುತಿಸಲಾಗಿದೆ.

ಎಕೆಡಿಯವರು ಚೀನಾಕ್ಕೆ ಆಪ್ತರಾದರೂ ಶ್ರೀಲಂಕಾದ ಆರ್ಥಿಕತೆ, ಸುರಕ್ಷೆ ಸಾರ್ವಭೌಮತ್ವನ್ನು ರಕ್ಷಿಸಬೇಕಾಗಿದೆ. ಚೀನಾವು ಶ್ರೀಲಂಕಾದಲ್ಲಿ ಭಾರಿ ಪ್ರಮಾಣದಲ್ಲಿ ಹೂಡಿಕೆಗಳನ್ನು ಮಾಡಿದೆ. ಜತೆಗೆ ಸಾಲ ನೀಡಿ ತನ್ನ ಸಾಲದ ಬಲೆಗೆ ಸಿಲುಕಿಸಿದೆ ಸಾಲ ಪಾವತಿಸಲು ತನ್ನ ಪ್ರಮುಖ ಆಯಕಟ್ಟಿನ ಹಂಬನ್ ಆರ್ಥಿಕತೆ, ಸಾರ್ವಭೌಮತ್ವದ ಮೇಲೆ ಚೀನಾ ಪ್ರಬಲ ಹಿಡಿತ ಸಾಧಿಸಿದೆ. ಎಕೆಡಿಯವರ ಚೀನಾ ಪ್ರೀತಿಯನ್ನು ಚೀನಾ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಹೆಚ್ಚು ಇದೆ. ಇಂತಹ ಪ್ರಸಂಗಗಳಲ್ಲಿ ಎಕೆಡಿಯವರು ದೇಶದ ಹಿತಾಸಕ್ತಿಯನ್ನು ಚೀನಾಕ್ಕೆ ಬಲಿಕೊಟ್ಟಲ್ಲಿ ಶ್ರೀಲಂಕಾ ಜನತೆ ರಾಜಪಕ್ಷೆ ಪರಿವಾರಕ್ಕೆ ಮಾಡಿದಂತೆ ಎಕೆಡಿಯವರನ್ನು ಅಧಿಕಾರದಿಂದ ಕಿತ್ತೆಸೆಯಬಹುದು.

**ಎಕೆಡಿ ಭಾರತಕ್ಕೆ ಸಮಸ್ಯೆಯಾಗಬಹುದೇ?**

ಭಾರತವು ಎಕೆಡಿ ಆಯ್ಕೆ ಬಯಸಿರಲಿಲ್ಲ. ಶ್ರೀಲಂಕಾದ ಈ ಬಾರಿಯ ಚುನಾವಣೆಯಲ್ಲಿ ಪರೋಕ್ಷವಾಗಿ ಪ್ರಭಾವ ಬೀರಿ ಭಾರತ ಪರ ಒಲವಿರುವ ಸಜಿತ್ ಪ್ರೇಮದಾಸ ಅಥವಾ ವಿಕ್ರಮ ಸಿಂಘೆ ಗೆಲುವಿಗೆ ಯತ್ನಿಸಿತ್ತು ಎಂಬ ಸುದ್ದಿ ಇತ್ತು. ಎಕೆಡಿ ಗೆಲುವು ದಿಲ್ಲಿಗೆ ಸವಾಲು ಎನ್ನುತ್ತಾರೆ ರಾಜಕೀಯ ಪರಿಣತರು. ಎಕೆಡಿ ಅಧ್ಯಕ್ಷರಾಗಿರುವುದರಿಂದ ದ್ವೀಪದಲ್ಲಿ ಭಾರತ ವಿರೋಧಿ ಬೆಳವಣಿಗೆಗಳಾಗುವ ಸಾಧ್ಯತೆಗಳಿವೆ. 1987ರಲ್ಲಿ ಎಲ್‌ಟಿಟಿಇಯನ್ನು ನಿಶಸ್ತ್ರಗೊಳಿಸಲು ಶ್ರೀಲಂಕಾಕ್ಕೆ ತೆರಳಿದ ಭಾರತೀಯ ಶಾಂತಿಪಾಲನಾ ಪಡೆ ವಿರುದ್ಧ ಜೆವಿಪಿ ಬಂಡಾಯ ಹೂಡಿದ ಸಂದರ್ಭದಲ್ಲಿ ಎಕೆಡಿ ಜನಪ್ರಿಯರಾದರು. ಶ್ರೀಲಂಕಾ ಜನಸಂಖ್ಯೆಯಲ್ಲಿ ಶೇ.11ರಷ್ಟು ಇರುವ ತಮಿಳರೊಂದಿಗೆ ರಾಜಕೀಯ ಅಧಿಕಾರ ಹಂಚಿಕೊಳ್ಳಲು ಅವಕಾಶ ನೀಡುವ ಭಾರತ ನಿರ್ದೇಶಿತ ಶ್ರೀಲಂಕಾ ಸಂಸತ್‌ನಲ್ಲಿ 13ನೇ ತಿದ್ದುಪಡಿ ಜಾರಿಗೆ ತರಲು ಭಾರತ ನಿರಂತರವಾಗಿ ಒತ್ತಡ ಹೇರಿತ್ತು. ಎಕೆಡಿ ಅವರು ಲಂಕನ್‌ರು ವಿರೋಧಿಸುವ ಈ ತಿದ್ದುಪಡಿಯನ್ನು ರದ್ದುಗೊಳಿಸಬಹುದೆಂದು ತಮಿಳರು ಆತಂಕಗೊಂಡಿದ್ದಾರೆ. ಹಂಬನ್ ತೋಟ ಬಂದರಿಗೆ ಹೆಚ್ಚು ಸಂಖ್ಯೆಯಲ್ಲಿ ಚೀನಿ ಯುದ್ಧ ನೌಕೆಗಳು, ಗುಪ್ತಚರ ನೌಕೆಗಳು ಆಗಮಿಸಿದಲ್ಲಿ ಭಾರತ–ಶ್ರೀಲಂಕಾ ಸಂಬಂಧ ಹದಗೆಡುವ ಸಾಧ್ಯತೆ ಅಧಿಕವಾಗಿದೆ.

ಭಾರತವು ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಶ್ರೀಲಂಕಾಕ್ಕೆ 4 ಶತಕೋಟಿ ಡಾಲರ್ ನೆರವು ನೀಡಿತ್ತು. ಬಾಕಿ ಉಳಿದ ಅನೇಕ ಯೋಜನೆಗಳಿಗೆ ಭಾರತವು ಚಾಲನೆ ನೀಡಿತ್ತು. ಎಕೆಡಿ ಅಧ್ಯಕ್ಷರಾಗಿರುವುದರಿಂದ ಈ ಯೋಜನೆಗಳನ್ನು ರದ್ದುಪಡಿಸಬಹುದೆಂಬ ಆತಂಕ ಭಾರತಕ್ಕಿದೆ.

ಭಾರತವು ಈ ರೀತಿಯ ರಾಜಕೀಯ ಬದಲಾವಣೆಗಳು ಶ್ರೀಲಂಕಾದಲ್ಲಿ ಆಗಬಹುದೆಂದು ಗ್ರಹಿಸಿತ್ತು. ದೇಶದ ಚಾಣಾಕ್ಷ ವಿದೇಶ ಸಚಿವ ಎಸ್.ಜಯಶಂಕರ್ ಮತ್ತು ಭದ್ರತಾ ಸಲಹೆಗಾರ ಅಜಿತ್ ದೋವಲ್‌ರು ಫೆಬ್ರವರಿಯಲ್ಲೇ ದಿಸ್ಸನಾಯಕೆಯವರನ್ನು ಭಾರತಕ್ಕೆ ಆಹ್ವಾನಿಸಿ ಮಾತುಕತೆ ನಡೆಸಿದ್ದರು. ಆದ್ದರಿಂದ ಜೆವಿಪಿಯು ಚೀನಾ ಪರವಿದ್ದರೂ ಎಕೆಡಿ ಅಧ್ಯಕ್ಷರಾಗಿ ಶ್ರೀಲಂಕಾ ಹಿತಾಸಕ್ತಿಯನ್ನು ರಕ್ಷಿಸಲು ಹೊಸದಿಲ್ಲಿಯೊಂದಿಗೆ ಸಂಬಂಧ ಉತ್ತಮಪಡಿಸುವ ಉತ್ಸಾಹ ತೋರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಎಕೆಡಿಯವರು ಭಾರತ ವಿರೋಧಿ ಹೇಳಿಕೆಗಳನ್ನು ಕೊಡುವುದನ್ನು ಸ್ಥಗಿತಗೊಳಿಸಿದ್ದಾರೆ. ಭಾರತವನ್ನು ವಿರೋಧಿಸಿದಲ್ಲಿ ಮಾಲ್ಡೀವ್ಸ್‌ನ ಅಧ್ಯಕ್ಷ ಮಹ್ಮದ್ ಮುಯ್ಜಿ ಪರಿಸ್ಥಿತಿ ತನಗೂ ಬರಬಹುದು ಎಂದು ಎಕೆಡಿಯವರು ಅರಿತಿದ್ದಾರೆ ಎನ್ನಬಹುದು.

# ಆಧುನಿಕ ಶಿಕ್ಷಣದ ತಾಯಿ ಸಾವಿತ್ರಿಬಾಯಿ ಫುಲೆ: ಶಾಸಕ ಜಿಟಿಡಿ ಅಭಿಮತ


ಮೈಸೂರು, ಅ.14– ಸಾಕಷ್ಟು ಜನರಿಗೆ ಇನ್ನೂ ಕೂಡ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಅವರ ಪರಿಚಯವೇ ಇಲ್ಲ. ಅವರನ್ನು ಶಿಕ್ಷಕರು ಜಗತ್ತಿಗೆ ಪರಿಚಯಿಸಬೇಕಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕಿಯರ ಫೆಡರೇಷನ್, ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ರಾಜ್ಯ ಘಟಕ ಶ್ರೀರಾಂಪುರದ ಟಿ.ಎಸ್.ಕನ್ವೆನ್ಷನ್ ಹಾಲ್‌ನಲ್ಲಿ ಸೋಮವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಶೈಕ್ಷಣಿಕ ಕಾರ್ಯಾಗಾರ, ಸಾವಿತ್ರಿಬಾಯಿ ಫುಲೆ ವಿಚಾರ ಸಂಕಿರಣ ಮತ್ತು ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿತ್ರಿಬಾಯಿ ಫುಲೆ ಅವರು ದೇಶದ ಮೊದಲ ಮಹಿಳಾ ಶಿಕ್ಷಕಿ, ಸಮಾಜ ಸುಧಾರಕಿ, ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಎಂದೇ ಗುರುತಿಸಲಾಗುತ್ತದೆ. ಭಾರತದಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದೆಂದರೆ ಅದೊಂದು ದೊಡ್ಡ ಅಪಚಾರ, ಅಪವಿತ್ರ ಎಂದು ಭಾವಿಸುತ್ತಿದ್ದ ಕಾಲಘಟ್ಟದಲ್ಲಿ ಹೆಣ್ಣುಮಕ್ಕಳೂ ಶಿಕ್ಷಣ ಪಡೆಯಬೇಕೆಂದು ಹೋರಾಡಿದ ದಿಟ್ಟಮಹಿಳೆ ಸಾವಿತ್ರಿಬಾಯಿ ಫುಲೆ ಆಗಿದ್ದರು. ಅವರ ಮಾರ್ಗದರ್ಶನ ಇಂದು ಎಲ್ಲರಿಗೂ ಅಗತ್ಯವಾಗಿದೆ ಎಂದು ಹೇಳಿದರು.

ಸಾವಿತ್ರಿಬಾಯಿ ಫುಲೆ ಅವರು ಶಾಲೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಕೆಲವು ಜನರು ದಾರಿಯಲ್ಲಿ ಅವರನ್ನು ತಡೆದು ಸೆಗಣಿ, ಕೆಸರು ಎರಚಿ ಅವಮಾನಿಸುತ್ತಿದ್ದರು. ಆದರೂ ಫುಲೆ ಎದೆಗುಂದಲಿಲ್ಲ, ಧೈರ್ಯ ಕಳೆದುಕೊಳ್ಳಲಿಲ್ಲ. ತಮ್ಮ ಬ್ಯಾಗಿನಲ್ಲಿ ಎರಡು ಸೀರೆಗಳನ್ನು ಇಟ್ಟುಕೊಂಡು ಅವರು ಶಾಲೆಗೆ ಹೋಗಿ ಸೆಗಣಿ ತಗುಲಿದ್ದ ಸೀರೆಯನ್ನು ಬದಲಾಯಿಸಿ ಬೇರೆ ಸೀರೆಯನ್ನು ತೊಟ್ಟು ಪಾಠ ಮಾಡುತ್ತಿದ್ದರು. ಇಂತಹ ಧೈರ್ಯ ಎಲ್ಲ ಹೆಣ್ಣು ಮಕ್ಕಳಲ್ಲೂ ಇರಬೇಕು. ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಅದರ ನಷ್ಟ ಆ ಕುಟುಂಬಕ್ಕೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಆಗುತ್ತದೆ ಎಂದು ಭಾವಿಸಿದ್ದ ಸಾವಿತ್ರಿಬಾಯಿ ಫುಲೆ ಅವರು ಅದಕ್ಕಾಗಿ ಅವಿರತವಾಗಿ ಹೋರಾಡಿದರು. ಹಾಗಾಗಿಯೇ ಅವರನ್ನು 'ಆಧುನಿಕ ಶಿಕ್ಷಣದ ತಾಯಿ' ಯೆಂದು ಕರೆಯಲಾಗುತ್ತದೆ.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜವರೇಗೌಡ ಮಾತನಾಡಿ, ಸಾವಿತ್ರಿಬಾಯಿ ಫುಲೆ ಅವರು ಇಡುತ್ತಿದ್ದ ಪ್ರತಿ ಹೆಜ್ಜೆಯ ಹಿಂದೆ ಅವರ ಪತಿ ಜ್ಯೋತಿ ಬಾ ಫುಲೆ ಅವರ ಸಹಕಾರವಿರುತ್ತಿತ್ತು. ಅವರಿಬ್ಬರ ದಾಂಪತ್ಯ ಜೀವನವೇ ಒಂದು ಆದರ್ಶ ಬದುಕು. ಶಿಕ್ಷಣದಿಂದ ವಂಚಿತರಾದ ಸಮುದಾಯಕ್ಕಾಗಿ ಶಾಲೆಯನ್ನು ತೆರೆಯುವ ಪಣತೊಟ್ಟು 1848ರಲ್ಲಿ ಮೊದಲ ಬಾರಿಗೆ ಪುಣೆಯಲ್ಲಿ ಅಸ್ಪೃಶ್ಯರು, ಹಿಂದುಳಿದವರು ಹಾಗೂ ಮಹಿಳೆಯರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ತೆರೆದರು. ಆಗ ಕೆಳವರ್ಗದವರ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಯಾರೂ ಮುಂದೆ ಬಾರದಿದ್ದಾಗ ಜ್ಯೋತಿಬಾ ಫುಲೆ ಅವರು ತಮ್ಮ ಮಡದಿ ಸಾವಿತ್ರಿಬಾಯಿ ಫುಲೆ ಅವರನ್ನೇ ಶಿಕ್ಷಕಿಯನ್ನಾಗಿ ನೇಮಿಸಿದರು ಎಂದರು. ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕಿಯರ ಸಂಘದ ಅಧ್ಯಕ್ಷೆ ಡಾ.ಲತಾ ಎಸ್.ಮುಳ್ಳೂರ್, ಮೈಸೂರು ಜಿಲ್ಲಾ ಅಧ್ಯಕ್ಷೆ ಸಿ.ಕೆ.ಸರಸ್ವತಿ, ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಅಧ್ಯಕ್ಷ ಜೆ.ಗೋವಿಂದರಾಜು, ಡಿವೈಪಿಸಿ ಶೋಭಾ, ಡಯಟ್ ಉಪನ್ಯಾಸಕರಾದ ಜಯಂತಿ, ಆಶಾ, ಗಾಯಿತ್ರಿ ಮತ್ತಿತರರು ಇದ್ದರು.



ಮೈಸೂರಿನ ಶ್ರೀರಾಂಪುರದ ಟಿ.ಎಸ್.ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರ, ಸಾವಿತ್ರಿಬಾಯಿ ಫುಲೆ ವಿಚಾರ ಸಂಕಿರಣ, ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

**ಜಿಟಿಡಿ ಜತೆ ಸೆಲ್ಫಿಗೆ ಮುಗಿಬಿದ್ದ ಶಿಕ್ಷಕಿಯರು**

ಕಾರ್ಯಕ್ರಮದಲ್ಲಿ ಭಾಷಣ ಮಾಡಿ ಹೊರಟ ಶಾಸಕ ಜಿ.ಟಿ.ದೇವೇಗೌಡರ ಜತೆ ಸೆಲ್ಫಿ ತೆಗೆದುಕೊಳ್ಳಲು ಶಿಕ್ಷಕಿಯರು ಮುಗಿಬಿದ್ದರು. ಸಭಾಂಗಣದ ಹೊರಗೆ ಹೋಗುತ್ತಿದ್ದ ಜಿಟಿಡಿ ಅವರನ್ನು ಹಲವಾರು ಶಿಕ್ಷಕಿಯರು ತಡೆದು ಫೋಟೋ ತೆಗೆದುಕೊಂಡರು. ಈ ವೇಳೆ ಆಯೋಜಕರು ಶಿಕ್ಷಕಿಯರು ಸಭಾಂಗಣದ ಒಳಗೆ ಬಂದು ಕುಳಿತುಕೊಳ್ಳಲು ಹಲವಾರು ಬಾರಿ ಮನವಿ ಮಾಡಿದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

## ಮೈಸೂರಲ್ಲಿ ಅಪಘಾತ ನೆಪವೊಡ್ಡಿ ಹಣ ಸುಲಿಗೆಗೆ ಯತ್ನ

### ಪೊಲೀಸ್ ಠಾಣೆಗೆ ವಿಷಯ ತಿಳಿಸುತ್ತಿದ್ದಂತೆ ಸ್ಥಳದಿಂದ ಕಾಲ್ಕಿತ್ತ ಆಗಂತುಕ

ಮೈಸೂರು, ಅ.14(ಆರ್‌ಕೆ)– ಅಪಘಾತದ ನೆಪದಲ್ಲಿ ವರ್ತಕರೊಬ್ಬರಿಗೆ ಧಮ್ಕಿ ಹಾಕಿ ಹಣ ಸುಲಿಗೆ ಮಾಡಲು ವಿಫಲ ಯತ್ನ ನಡೆಸಿದ ಘಟನೆ ಮೈಸೂರಿನ ಹೃದಯ ಭಾಗದಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಯಾದವಗಿರಿ ನಿವಾಸಿ ಕೆ.ಸಿ.ವಿಜಯಕುಮಾರ್ ಎಂಬುವರಿಂದ 30,000 ರೂ. ಹಣ ನೀಡುವಂತೆ ಒತ್ತಾಯಿಸಿದ ಯುವಕನೋರ್ವ ಪೊಲೀಸ್ ಠಾಣೆಗೆ ವಿಷಯ ತಿಳಿಸುತ್ತಿದ್ದಂತೆಯೇ ನಂಬರ್ ಪ್ಲೇಟ್ ಇಲ್ಲದ ಸ್ಕೂಟರ್‌ನಲ್ಲಿ ಸ್ಥಳದಿಂದ ಪರಾರಿಯಾಗಿದ್ದಾನೆ.

ಗೃಹೋಪಯೋಗಿ ವಸ್ತುಗಳ ವ್ಯಾಪಾರಿಯಾದ ವಿಜಯಕುಮಾರ್, ಯಾದವಗಿರಿಯಿಂದ ತಮ್ಮ ಟಯೋಟಾ ಹೈರೈಡರ್ ಕಾರಿನಲ್ಲಿ ಕೆಆರ್‌ಎಸ್ ರಸ್ತೆ ಮೂಲಕ ಜೆಎಲ್‌ಬಿ ರಸ್ತೆ ಕಡೆಗೆ ಬರುತ್ತಿದ್ದರು. ಭಾನುವಾರ ಬೆಳಗ್ಗೆ ಸುಮಾರು 11.15 ಗಂಟೆ ವೇಳೆಗೆ ವಾಣಿವಿಲಾಸ ವಾಟರ್ ವರ್ಕ್ಸ್ ಸಮೀಪ ರೈಲ್ವೆ ಕ್ರೀಡಾಂಗಣದ ಗೇಟ್ ಎದುರು ಕಾರಿನ ಹಿಂಭಾಗಕ್ಕೆ ಯಾರೋ ಹೊಡೆದ ಶಬ್ದ ಕೇಳಿಸಿತು.

ತಕ್ಷಣ ಹಿಂದೆ ತಿರುಗಿ ನೋಡಿದ ವಿಜಯಕುಮಾರ್, ಯಾರೂ ಕಾಣದ ಕಾರಣ, ಮುಂದೆ ಸಾಗಿ ರೆಡ್ ಸಿಗ್ನಲ್ ಬಂದ ಕಾರಣ ಮಾಂಡವಿ ಮೋಟಾರ್ಸ್ ಸಮೀಪ ದಾಸಪ್ಪ ಸರ್ಕಲ್‌ನಲ್ಲಿ ಗ್ರೀನ್ ಸಿಗ್ನಲ್‌ಗಾಗಿ ಕಾಯುತ್ತಾ ನಿಂತಿದ್ದಾಗ ಅಲ್ಲಿಗೆ ಸ್ಕೂಟರ್‌ನಲ್ಲಿ ಬಂದ ಯುವಕ, ನೀವು ನಮ್ಮ ಸ್ಕೂಟರ್‌ಗೆ ಡಿಕ್ಕಿ ಹೊಡೆದು ನಿಲ್ಲಿಸದೇ ಬಂದಿದ್ದೀರಿ. ನನ್ನ ತಮ್ಮನ ಕಾಲಿಗೆ ತೀವ್ರ ಗಾಯವಾಗಿ ಬಿದ್ದಿದ್ದಾನೆ ಎಂದು ಆತಂಕ ಮೂಡಿಸಿದ.

ಅಷ್ಟರಲ್ಲಿ ಸಿಗ್ನಲ್ ಬಂದ ಕಾರಣ ವಿಜಯಕುಮಾರ್, ಮುಂದೆ ಬರುವುದಾಗಿ ತಿಳಿಸಿ ಕಾರು ಚಾಲನೆ ಮಾಡಿಕೊಂಡು ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಗೇಟ್ ಬಳಿ ಹೋಗಿ ನಿಂತರು. ಹಿಂದೆಯೇ ಬಂದ ಯುವಕ, ನನ್ನ ತಮ್ಮನಿಗೆ ಗಾಯವಾಗಿ ರಕ್ತ ಸೋರುತ್ತಿದೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಬೇಕು ಎಂದು ತಿಳಿಸಿದ.



ಕಾರಿನೊಂದಿಗೆ ಕೆ.ಸಿ.ವಿಜಯಕುಮಾರ್

ಆತನ ಮಾತು ನಿಜವೆಂದು ನಂಬಿದ ವಿಜಯಕುಮಾರ್, ಸರಿ ನಡೀರಿ ಆಸ್ಪತ್ರೆಗೆ ಕರೆದೊಯ್ಯೋಣ ಎಂದು ಹೊರಡಲು ಮುಂದಾದರು. ಅದಕ್ಕೆ ಒಪ್ಪದ ಆತ, ನೀವು ಅಲ್ಲಿಗೆ ಬರೋದು ಬೇಡ, ಸ್ಥಳದಲ್ಲಿ ಜನರು ಸೇರಿದ್ದಾರೆ, ಗಲಾಟೆಯಾಗುತ್ತದೆ. ನಾವೇ ಆಸ್ಪತ್ರೆಗೆ ಕರೆದೊಯ್ದು ಸೇರಿಸುತ್ತೇನೆ ಎಂದ.

ಆಯ್ತಪ್ಪಾ, ನಾನೇನು ಮಾಡಬೇಕು ಎಂದ ವಿಜಯಕುಮಾರ್‌ಗೆ, ದುಡ್ಡು ಕೊಡಿ ಸಾಕು, ನಾನೇ ಚಿಕಿತ್ಸೆ ಕೊಡಿಸುತ್ತೇವೆ ಎಂದ ಯುವಕ, ಆಸ್ಪತ್ರೆಯಲ್ಲಿ ಬಂದು ತಿಂಗಳಿರಬೇಕು, ದಿನಕ್ಕೆ 1,000 ದಂತೆ 30,000 ರೂ. ಹಣ ಬೇಕಾಗುತ್ತದೆ ಎಂದ. ನನ್ನ ಬಳಿ ಅಷ್ಟು ಹಣ ಇಲ್ಲ ಎಂದಾಗ ಗೂಗಲ್ ಪೇ ಮಾಡಿ. ನಾನೇ ಡ್ರಾ ಮಾಡಿಕೊಳ್ಳುತ್ತೇನೆ ಎಂದ ಆತನ ಸ್ಕೂಟರ್ ಕಡೆ ನೋಡಿದಾಗ, ಅದಕ್ಕೆ ನಂಬರ್ ಪ್ಲೇಟ್ ಇಲ್ಲದಿದ್ದುದು ಕಂಡಿತು.

ನಂತರ, ನನ್ನ ಬಳಿ ಹಣ ಇಲ್ಲ, ಗೂಗಲ್ ಪೇ ವ್ಯವಸ್ಥೆಯನ್ನು ನಾನು ಮಾಡಿಕೊಂಡಿಲ್ಲ. ಇಲ್ಲೇ ಸಮೀಪದ ಶೃಂಗಾರ ಹೋಟೆಲ್ ಬಳಿಗೆ ಬಂದರೆ, ನಮ್ಮ ಸ್ನೇಹಿತರಿಂದ ಪಡೆದುಕೊಡುತ್ತೇನೆ ಎಂದು ವಿಜಯಕುಮಾರ್ ಕರೆದರಾದರೂ, ನಾನು ಎಲ್ಲಿಗೂ ಬರಲ್ಲ. ಬೇರೆ ಯಾರಿಂದಲಾದರೂ ಗೂಗಲ್ ಪೇ ಮಾಡಿಸಿ ಎಂದು ಆತನ ಒತ್ತಾಯಿಸಿದ.

ನಂಬರ್ ಪ್ಲೇಟ್ ಇಲ್ಲದ ಸ್ಕೂಟರ್‌ನಲ್ಲಿ ಬಂದಿರುವುದು ಅರಿವಾಗಿ ಕಡೆಗೆ, ದೇವರಾಜ ಪೊಲೀಸ್ ಠಾಣೆಗೆ ಬನ್ನಿ ಅಲ್ಲೇ ಚರ್ಚಿಸೋಣ ಅಥವಾ ಇಲ್ಲಿಗೇ ಪೊಲೀಸರನ್ನು ಕರೆಸುತ್ತೇನೆ ಇರಿ ಎಂದು ಮೊಬೈಲ್ ಫೋನ್ ಮಾಡಲೆತ್ನಿಸಿದಾಗ ಅಷ್ಟರಲ್ಲಿ ಜನರೂ ಸುತ್ತುವರಿಯುತ್ತಿದ್ದುದನ್ನು ಗಮನಿಸಿದ ಆಗಂತುಕ ಮೆಲ್ಲನೆ ಸ್ಕೂಟರ್ ತೆಗೆದುಕೊಂಡು ಪರಾರಿಯಾಗಿದ್ದಾನೆ.

ನಂತರ ವಿಜಯಕುಮಾರ್ ತಮ್ಮ ಸ್ನೇಹಿತರಿಗೆ ಈ ವಿಷಯ ತಿಳಿಸಿ ಅವರ ಸಲಹೆಯಂತೆ ಸಂಜೆ ದೇವರಾಜ ಠಾಣೆಗೆ ತೆರಳಿ ಮಾಹಿತಿ ನೀಡಿದರು.

ಹೇಳಿಕೆ ಪಡೆದು ಸ್ಥಳ ಮಹಜರು ನಡೆಸಿರುವ ಪೊಲೀಸರು, ಆ ಮಾರ್ಗದ ಸಿಸಿ ಕ್ಯಾಮರಾಗಳ ಫುಟೇಜ್‌ಗಳನ್ನು ಪಡೆದು ನಕಲಿ 'ಅಪಘಾತದ ಹೆಸರಲ್ಲಿ ಹಣ ಸುಲಿಗೆ ಮಾಡುವ ಗ್ಯಾಂಗ್ ಪತ್ತೆಗೆ ತೀವ್ರ ಶೋಧ ನಡೆಸುತ್ತಿದ್ದಾರೆ.

## ಮಹಾರಾಷ್ಟ್ರ ವಿಧಾನಸಭಾ ಚುನಾವಣೆ
## ಮುಂಬೈ ಪ್ರವೇಶಿಸುವ ಲಘು ವಾಹನಗಳಿಗೆ ಟೋಲ್ ಶುಲ್ಕ ಫ್ರೀ!
### ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಘೋಷಣೆ





**ಮುಂಬೈ:** ಮಹಾರಾಷ್ಟ್ರ ರಾಜ್ಯ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದು, ಈ ನಡುವಲ್ಲೇ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆಯವರು ಜನರಿಗೆ ಬಂಪರ್ ಉಡುಗೊರೆಯೊಂದನ್ನು ಘೋಷಣೆ ಮಾಡಿದ್ದಾರೆ. ಇನ್ನು ಮುಂದೆ ಮುಂಬೈ ಪ್ರವೇಶಿಸುವ ಲಘು ವಾಹನಗಳು ಯಾವುದೇ ಟೋಲ್ ಶುಲ್ಕ ಕಟ್ಟಬೇಕಿಲ್ಲ ಎಂದು ಘೋಷಣೆ ಮಾಡಿದ್ದಾರೆ.

ಇಂದು ನಡೆದ ಕೊನೆಯ ಸಚಿವ ಸಂಪುಟದಲ್ಲಿ ಸಿಎಂ ಏಕನಾಥ್ ಶಿಂಧೆ ಅವರು ಇಂತಹದ್ದೊಂದು ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ದಹಿಸಾರ್, ಮುಳುನಾಡ್, ವಾಶಿ, ಐರೋಲಿ ಮತ್ತು ತಿನ್ಹತ್ ನಾಕಾ ಈ ಐದು ಟೋಲ್‌ಗಳಲ್ಲಿ ಇನ್ನು ಮುಂದೆ ಯಾವುದೇ ಟೋಲ್ ಶುಲ್ಕವನ್ನು ಕಟ್ಟಬೇಕಾಗಿಲ್ಲ. ಇಂದು ಮಧ್ಯರಾತ್ರಿಯಿಂದಲೇ ಈ ಆದೇಶ ಜಾರಿಗೆ ಬರಲಿದೆ ಎಂದು ಹೇಳಿದ್ದಾರೆ.

ಇದಲ್ಲದೆ, ಮಹಾರಾಷ್ಟ್ರ ರಾಜ್ಯ ಕೌಶಲ್ಯ ವಿಶ್ವವಿದ್ಯಾಲಯಕ್ಕೆ ದಿವಂಗತ ರತನ್ ಟಾಟಾ ಹೆಸರಿಡುವ ಪ್ರಸ್ತಾವನೆಗೂ ಮಹಾರಾಷ್ಟ್ರ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಥಾಣೆ, ರಾಯಗಡ್ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿ ಪ್ರಧಾನವಾಗಿ ನೆಲೆಗೊಂಡಿರುವ ಮೀನುಗಾರಿಕೆ, ಉಪ್ಪು ತಯಾರಿಕೆ ಮತ್ತು ಭತ್ತದ ಕೃಷಿಯಲ್ಲಿ ತೊಡಗಿರುವ ಕೃಷಿ ಸಮುದಾಯಕ್ಕಾಗಿ ನಿಗಮವನ್ನು ಸ್ಥಾಪಿಸಲು ಕ್ಯಾಬಿನೆಟ್ ಅನುಮೋದಿಸಿದೆ.

ಸಮಾಜ ಕಾರ್ಯ ಕಾಲೇಜುಗಳ ಶಿಕ್ಷಕರಿಗೆ ವೃತ್ತಿ ಪ್ರಗತಿ ಯೋಜನೆ, ದಮನಗಂಗಾ ಏಕಮುಖ ಗೋದಾವರಿ ನದಿ ಜೋಡಣೆ ಯೋಜನೆ, ಅಷ್ಟಿ ಏತ ನೀರಾವರಿ ಯೋಜನೆಗೆ ಪರಿಷ್ಕೃತ ಅನುಮೋದನೆ, ವೈಜಾಪುರದ ಶನಿದೇವಗಾಂವ್ ಬ್ಯಾರೇಜ್‌ಗೆ ಆಡಳಿತಾತ್ಮಕ ಅನುಮೋದನೆ, ರಾಜ್ಯ ಕೃಷಿ ನಿಗಮದ ಭೂಮಿಯನ್ನು ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸುವುದು, ಥಾಣೆ ಮಹಾನಗರ ಪಾಲಿಕೆಯ ಆಡಳಿತಾತ್ಮಕ ಕಟ್ಟಡಕ್ಕಾಗಿ ಪಂಚಪಖಾಡಿ ಪ್ರದೇಶದಲ್ಲಿ ಭೂಮಿ ಮತ್ತು ಕಿಡ್ಕಾಲಿಯಲ್ಲಿ ಹೈಬ್ರಿಡ್ ಸ್ಕಿಲ್ ಯೂನಿವರ್ಸಿಟಿಗೆ ಉಚಿತವಾಗಿ ಭೂಮಿ ಮಂಜೂರು ಮಾಡಲು ಸಂಪುಟ ಅನುಮೋದನೆ ನೀಡಿದೆ.

ಮಹಾರಾಷ್ಟ್ರದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಯನ್ನು ಕ್ಯಾಬಿನೆಟ್ ಸಭೆಯಲ್ಲಿ ಅನುಮೋದಿಸಲಾಗಿದೆ. ಪುಣೆ ಮೆಟ್ರೋ ರೈಲು ಎರಡನೇ ಹಂತದ ರೈಲು ಮಾರ್ಗದ ಕಾಮಗಾರಿಗಳು, ಲಾತೂರ್ ಜಿಲ್ಲೆಯ ಕಿಲ್ಲಾರಿಯ ರೈತರ ಸಹಕಾರಿ ಅಂಶದ ಬಡ್ಡಿಯೊಂದಿಗೆ ಸಾಲ ಮನ್ನಾ ಮತ್ತು ತೊಂದರೆಗೀಡಾದ ಸಹಕಾರಿ ಜೀವನಾಧಾರ ನೀರಾವರಿ ಯೋಜನೆಗಳ ಬಾಕಿಯನ್ನು ಮನ್ನಾ ಮಾಡಲು ಸಂಪುಟ ಅನುಮೋದನೆ ನೀಡಿದೆ.

## ಅತ್ಯಾಚಾರ ಆರೋಪ: ಶಾಸಕ ಮುನಿರತ್ನ ಬಿಟ್ಟು ಉಳಿದವರ ಪೈಕಿ ಮೂವರಿಗೆ ಜಾಮೀನು ಮಂಜೂರು

**ಬೆಂಗಳೂರು:** ಲೈಂಗಿಕ ಕಿರುಕುಳ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಎ1 ಆರೋಪಿ ಮುನಿರತ್ನ ಹೊರತುಪಡಿಸಿ ಉಳಿದವರ ಮೂವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.



ಇಂದು ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರು, ಆರೋಪಿಗಳಾದ ಲೋಹಿತ್, ಕಿರಣ್ ಮತ್ತು ಮಂಜುನಾಥ್‌ಗೆ ಜಾಮೀನು ಮಂಜೂರು ಮಾಡಿದರು. Information Technology Act 2000, ಐಪಿಸಿ ಸೆಕ್ಷನ್ 354ಎ, 354ಸಿ, 376, 506, 504, 120(ಬಿ), 149, 384, 406, 308 ಅಡಿಯಲ್ಲಿ ಕೇಸ್ ದಾಖಲಾಗಿದೆ. ಮುನಿರತ್ನ ನಾಯ್ಡು (ಎ1), ವಿಜಯ್‌ಕುಮಾರ್ (ಎ2), ಸುಧಾಕರ (ಎ3), ಕಿರಣ್‌ಕುಮಾರ್ (ಎ4), ಲೋಹಿತ್ ಗೌಡ ಎ5), ಮಂಜುನಾಥ (ಎ6), ಲೋಕಿ (ಎ7) ಎಂಬವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಕಗ್ಗಲೀಪುರದ ರೆಸಾರ್ಟ್‌ನಲ್ಲಿ ಅತ್ಯಾಚಾರ ನಡೆದಿರುವುದಾಗಿ ಸಂತ್ರಸ್ತ ಮಹಿಳೆ ದೂರು ನೀಡಿದ್ದರು.

## ಪರಪ್ಪನ ಅಗ್ರಹಾರ ಜೈಲಿನಿಂದಲೇ ಸಾಕ್ಷಿದಾರರಿಗೆ ರೌಡಿಶೀಟರ್‌ನಿಂದ ಬೆದರಿಕೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಜೈಲಿನಲ್ಲಿ ರೌಡಿಗಳ ಮೊಬೈಲ್‌ಗಳು ಮತ್ತೆ ಆಕ್ಟೀವ್ ಆಗಿವೆ. ಜೈಲಿನಲ್ಲಿದ್ದುಕೊಂಡೇ ರೌಡಿಶೀಟರ್‌ವೊಬ್ಬ ಸಾಕ್ಷಿದಾರನಿಗೆ ಬೆದರಿಕೆ ಹಾಕಿರುವುದು ಬೆಳಕಿಗೆ ಬಂದಿದೆ.

ಇನ್‌ಸ್ಟಾಗ್ರಾಂ ಮೂಲಕ ಸಾಕ್ಷಿದಾರನೊಬ್ಬನಿಗೆ ಬೆದರಿಕೆ ಹಾಕಲಾಗಿದ್ದು, ಈ ಸಂಬಂಧ ಸಿಸಿಬಿಯಲ್ಲಿ ಪ್ರಕರಣ ದಾಖಲಾಗಿದೆ. ಸೆಪ್ಟೆಂಬರ್ 23ರಂದು ಸಲಗ ಸೋಮು ಎಂಬ ಇನ್‌ಸ್ಟಾಗ್ರಾಂ ಖಾತೆಯಿಂದ ನನಗೆ ಮೂರು ವಾಯ್ಸ್ ಸಂದೇಶ ಬಂದಿದ್ದು, ಅದರಲ್ಲಿ ತಮಿಳು ಮತ್ತು ಕನ್ನಡ ಮಿಶ್ರಿತ ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಜೋಸೆಫ್ ಬಾಬು ಅಲಿಯಾಸ್ ಬಬ್ಲಿ ಕೊಲೆ ಪ್ರಕರಣದಲ್ಲಿ ಯಾರೊಬ್ಬರೂ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಬಾರದು ಎಂದು ಬೆದರಿಸಿದ್ದಾರೆ ಎಂದು ಅರ್ಮುಗಂ ದೂರಿನಲ್ಲಿ ತಿಳಿಸಿದ್ದಾರೆ.

ಈ ವಿಷಯವನ್ನು ಬಬ್ಲಿ ಪತ್ನಿ, ಸುನಿಲ್ ಅಲಿಯಾಸ್ ಸುಂಡಿಲಿ, ಜಾರ್ಜ್ ಹಾಗೂ ನಾದನಿಗೂ ತಲುಪಿಸಬೇಕು. ನಮ್ಮ ಬಾಸ್ ಶಿವ ಹೇಳಿದಂತೆ ಕೇಳದಿದ್ದರೆ ಎಲ್ಲರನ್ನೂ ಹೊಡೆದು ಹಾಕುತ್ತೇವೆ. ರೌಡಿ ಮಿಲಿಟರಿ ಸತೀಶನನ್ನು ಹೊಡೆದು ಹಾಕಿದ್ದೇವೆ. ಅದೇ ರೀತಿ ಜೈಲಿನಿಂದಲೇ ಎಲ್ಲರನ್ನು ಹೊಡೆದು ಹಾಕುತ್ತೇವೆ. ಆಟೋ ಓಡಿಸುವ ನಿನ್ನನ್ನೂ ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ವಿವರಿಸಿದ್ದಾರೆ. ದೂರು ಹಿನ್ನೆಲೆಯಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.14– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ 2024–25ನೇ ಸಾಲಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪೋಷಕರ ಆದಾಯ ರೂ.2.50 ಮಿತಿಯಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ www.sw.kar.nic.in.ssp.Karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ: 0821–2344661 ಸಂಪರ್ಕಿಸಬಹುದು.

## ಅ.18, ಮೈಸೂರು ಕೊಡವ ಸಮಾಜದಲ್ಲಿ ಕಾವೇರಿ ಸಂಕ್ರಮಣ ಉತ್ಸವ

ಮೈಸೂರು,ಅ.14(ಪಿಎಂ)– ಕೊಡವ ಸಮಾಜ ಮೈಸೂರು ವತಿಯಿಂದ ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಸಮಾಜದ ಆವರಣದಲ್ಲಿ ಅ.18ರಂದು ಕಾವೇರಿ ಸಂಕ್ರಮಣ ಉತ್ಸವ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10ಕ್ಕೆ ಕಣಿ ಪೂಜೆ ನಡೆಯಲಿದ್ದು, ಉತ್ಸವದಲ್ಲಿ ಉಪಸ್ಥಿತರಿರುವ ಎಲ್ಲಾ ಭಕ್ತರಿಗೂ ತೀರ್ಥ ವಿತರಿಸಲಾಗುವುದು. ಕಾವೇರಿ ಮಾತೆಯ ಎಲ್ಲಾ ಭಕ್ತರು ಕಣಿ ಪೂಜೆ ಮತ್ತು ಉತ್ಸವದಲ್ಲಿ ಪಾಲ್ಗೊಂಡು ಪವಿತ್ರ ತೀರ್ಥವನ್ನು ಸ್ವೀಕರಿಸಬೇಕೆಂದು ಕೋರುತ್ತಿದ್ದು, ಭಕ್ತರಿಗೆ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿದೆ ಎಂದು ಸಮಾಜದ ಗೌರವ ಕಾರ್ಯದರ್ಶಿ ಕೆ.ಎ.ಬೆಳ್ಳಿಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅ.26, 27ರಂದು ಮೈಸೂರಲ್ಲಿ ರಾಜ್ಯ ಮಟ್ಟದ ಕಾರ್ಮಿಕ ಸಮ್ಮೇಳನ

ಮೈಸೂರು, ಅ.14(ಎಂಟಿವೈ)– ಮೈಸೂರಿನ ಪುರಭವನದ ಆವರಣದಲ್ಲಿ ಅ.26 ಮತ್ತು 27ರಂದು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ)ನ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನ ಆಯೋಜಿಸಲಾಗಿದೆ ಎಂದು ರಾಜ್ಯ ಸಮಿತಿ ಅಧ್ಯಕ್ಷ ಕೆ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.26ರಂದು ಬೆಳಗ್ಗೆ 11 ಗಂಟೆಗೆ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಆವರಣದಿಂದ ಕಾರ್ಮಿಕರು ಪುರಭವನದವರೆಗೆ ಮೆರವಣಿಗೆಯಲ್ಲಿ ಸಾಗಲಿದ್ದಾರೆ. ಅಂದು ಮಧ್ಯಾಹ್ನ 12 ಗಂಟೆಗೆ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನವನ್ನು ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷ ಕೆ.ರಾಧಾಕೃಷ್ಣ ಉದ್ಘಾಟಿಸಲಿದ್ದಾರೆ. ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಶಂಕರ್‌ದಾಸ್ಗುಪ್ತ ಮುಖ್ಯ ಭಾಷಣ ಮಾಡುವರು. ಸಂಘಟನೆಯ ರಾಜ್ಯ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ಮೇಟಿ ಪ್ರಾಸ್ತಾವಿಕ ಮಾತನಾಡಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ಸೂಕ್ತಿ ಹಾಗೂ ಛಾಯಾಚಿತ್ರ ಪ್ರದರ್ಶನವನ್ನು ನಿವೃತ್ತ ಪ್ರಾಧ್ಯಾಪಕ ಹಾಗೂ ಸ್ವಾಗತ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಕಾಳಚನ್ನೇಗೌಡ ಉದ್ಘಾಟಿಸುವರು. ಅ.26ರಂದು ಸಂಜೆ 5ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಪ್ರತಿನಿಧಿ ಅಧಿವೇಶನ ನಡೆಯಲಿದೆ. ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಪ್ರತಿನಿಧಿ ಅಧಿವೇಶನ ವೇಳೆ ಪಾಲ್ಗೊಳ್ಳುವರು.

ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಕೈಗಾರಿಕಾ ಕಾರ್ಮಿಕರು, ವೈದ್ಯಕೀಯ ಕಾಲೇಜು, ಸರ್ಕಾರಿ ಹಾಸ್ಟೆಲ್, ವಿವಿ ಹಾಗೂ ಇತರ ಕ್ಷೇತ್ರಗಳ ಗುತ್ತಿಗೆ ಕಾರ್ಮಿಕರು, ಗಣಿ ಕಾರ್ಮಿಕರು, ವಿದ್ಯುತ್ ಕ್ಷೇತ್ರದ ನೌಕರರು, ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ನೌಕರರು, ಕಟ್ಟಡ ಕಾರ್ಮಿಕರು ಇತರ ಕ್ಷೇತ್ರದ ಕಾರ್ಮಿಕರು ಬಹಿರಂಗ ಹಾಗೂ ಪ್ರತಿನಿಧಿ ಅಧಿವೇಶನದಲ್ಲಿ ಪಾಲ್ಗೊಳ್ಳುವುದಾಗಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸ್ವಾಗತ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಕಾಳಚನ್ನೇಗೌಡ, ಅಧ್ಯಕ್ಷ ಉಗ್ರ ನರಸಿಂಹೇಗೌಡ, ರಾಜ್ಯ ಸದಸ್ಯ ಕಾರ್ಯದರ್ಶಿ ಎಂ.ಉಮಾದೇವಿ, ಜಿಲ್ಲಾಧ್ಯಕ್ಷ ವಿ.ಯಶೋಧರ್, ಕಾರ್ಯದರ್ಶಿ ಚಂದ್ರಶೇಖರ ಮೇಟಿ ಇದ್ದರು.


## ನಾಳೆ ಮೌನರಾಗ ಗೀತ ನಮನ

ಮೈಸೂರು, ಅ.14 (ಎಂಟಿವೈ)– ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅ.16ರಂದು ಸಂಜೆ 5.30ಕ್ಕೆ ಮೌನರಾಗ ಗೀತ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಜಯರಾಮರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿಗೆ ಕಲಾಪೋಷಕ ರವಿಗೌಡ ಹಾಗೂ ಗಾಯಕ ಮುಖೇಶ್ ಮಡಿಕೇರಿ ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರಲು ಕಲಾವಿದರು ಮೌನರಾಗ ಗೀತ ನಮನ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಗಾಯಕರಾದ ಬಿ.ಎಸ್.ಜಯರಾಮರಾಜು, ಸುರೇಶ್, ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ, ಖಯೂಂ ಹಾಗೂ ಇನ್ನಿತರರು ಗೀತೆಗಳನ್ನು ಹಾಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕ್ಯಾತನಹಳ್ಳಿ ಪ್ರಕಾಶ್, ಸುರೇಶ್, ಚಂದ್ರಶೇಖರ್ ಹಾಗೂ ಖಯೂಂ ಇದ್ದರು.

## ಸಂಸ್ಥೆಗಳು–ಸಮೃದ್ಧಿ ಅಧ್ಯಯನಕ್ಕಾಗಿ ಮೂವರಿಗೆ ಆರ್ಥಿಕ ನೊಬೆಲ್ ಪ್ರಶಸ್ತಿ



**ನವದೆಹಲಿ:** ಆರ್ಥಿಕ ವಿಭಾಗದ ನೊಬೆಲ್ ಪ್ರಶಸ್ತಿ ಘೋಷಣೆಯಾಗಿದ್ದು, ಸಂಸ್ಥೆಗಳು–ಸಮೃದ್ಧಿ ಅಧ್ಯಯನಕ್ಕಾಗಿ ಮೂವರಿಗೆ ಪ್ರಶಸ್ತಿ ಒಲಿದಿದೆ. ಆಲ್ಫ್ರೆಡ್ ನೊಬೆಲ್ ನೆನಪಿನಲ್ಲಿ ನೊಬೆಲ್ ಪ್ರಶಸ್ತಿಯನ್ನು ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್‌ನಿಂದ ಕೊಡಮಾಡಲಾಗುತ್ತಿದೆ. ಡರೋನ್ ಅಸೆಮೊಗ್ಲು, ಸೈಮನ್ ಜಾನ್ಸನ್ ಮತ್ತು ಜೇಮ್ಸ್ ಎ. ರಾಬಿನ್ಸನ್‌ಗೆ ಆರ್ಥಿಕ ವಿಭಾಗದ ನೊಬೆಲ್ ಪ್ರಶಸ್ತಿ ಒಲಿದಿದೆ. ಮೂವರು ಯುಎಸ್ ಮೂಲದ ಅರ್ಥಶಾಸ್ತ್ರಜ್ಞರು ದೇಶದ ಏಳಿಗೆಗಾಗಿ ಸಾಮಾಜಿಕ ಸಂಸ್ಥೆಗಳ ಪ್ರಾಮುಖ್ಯತೆಯನ್ನು ಪ್ರದರ್ಶಿಸಿದ್ದಾರೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್‌ನ ನೊಬೆಲ್ ಸಮಿತಿ ಹೇಳಿದೆ.

ಕಳಪೆ ಕಾನೂನಿನ ನಿಯಮವನ್ನು ಹೊಂದಿರುವ ಸಮಾಜಗಳು ಮತ್ತು ಜನಸಂಖ್ಯೆಯನ್ನು ದುರ್ಬಳಕೆ ಮಾಡಿಕೊಳ್ಳುವ ಸಂಸ್ಥೆಗಳು ಬೆಳವಣಿಗೆಯನ್ನು ಉಂಟುಮಾಡುವುದಿಲ್ಲ ಅಥವಾ ಉತ್ತಮವಾದ ಬದಲಾವಣೆಯನ್ನು ಉಂಟುಮಾಡುವುದಿಲ್ಲ ಏಕೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಶಸ್ತಿ ವಿಜೇತರ ಸಂಶೋಧನೆ ನಮಗೆ ಸಹಾಯ ಮಾಡುತ್ತದೆ.

## ಮಕ್ಕಳನ್ನು ಕೊಂದು ಆತ್ಮಹತ್ಯೆಗೆ ಶರಣಾದ ದಂಪತಿ

**ಬೆಂಗಳೂರು:** ದಂಪತಿ ತಮ್ಮ ಇಬ್ಬರು ಮಕ್ಕಳನ್ನು ಸಾಯಿಸಿ ತಾವೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನ ಯಲಹಂಕದ ಬಳಿಯ ಸಿಂಗನಾಯಕನಹಳ್ಳಿ ಗ್ರಾಮದ ಯಡಿಯೂರಪ್ಪ ನಗರದಲ್ಲಿ ನಡೆದಿದೆ. ಮೃತಪಟ್ಟವರನ್ನು ಅವಿನಾಶ್ (38), ಅವರ ಪತ್ನಿ ಮಮತಾ (30), ಪುತ್ರಿ ಅಧಿರಾ (5) ಹಾಗೂ ಪುತ್ರ ಅಣ್ಣಯ್ಯ (3) ಎಂದು ಗುರುತಿಸಲಾಗಿದೆ.

ಗುಲ್ಬರ್ಗ ಮೂಲದ ಅವಿನಾಶ್ ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ನರಸಪ್ಪ ಎಂಬುವವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು. ಅವಿನಾಶ ಸಹೋದರ ಉದಯ್ ಪೊಲೀಸರಿಗೆ ದೂರು ನೀಡಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಸ್ಥಳಕ್ಕೆ ರಾಜಾನುಕುಂಟೆ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಖಾಲಿ ಹುದ್ದೆಗಳ ವಿವಾದ: ಎಂಆರ್‌ಸಿ ಸ್ಟೀವರ್ಡ್ ಚುನಾವಣೆ ಮುಂದೂಡಿಕೆ

ಮೈಸೂರು, ಅ. 14(ಆರ್‌ಕೆ)– ಮೈಸೂರ್ ರೇಸ್ ಕ್ಲಬ್ (ಎಂಆರ್‌ಸಿ) ಲಿಮಿಟೆಡ್ ಆವರಣದಲ್ಲಿ ಇಂದು ಕ್ಲಬ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾರಣ ಸ್ಟೀವರ್ಡ್ಸ್‌ಗಳ ಚುನಾವಣೆ ಮುಂದಿನ ದಿನಗಳಲ್ಲಿ ನಡೆಸಲು ತೀರ್ಮಾನಿಸಿ ಮುಂದೂಡಲಾಯಿತು. ಬಹುಶಃ ಈ ರೀತಿ ಬೆಳವಣಿಗೆಯು ಕ್ಲಬ್‌ನ ಇತಿಹಾಸದಲ್ಲಿ ಪ್ರಥಮವಾಗಿದ್ದು, 100 ವರ್ಷಗಳ ಅವಧಿಯಲ್ಲಿ ಮತದಾನದ ವೇಳೆ ಚುನಾವಣೆ ರದ್ದಾದಂತಾಗಿದೆ.




ಮೂರು ಸ್ಟೀವರ್ಡ್ ಹುದ್ದೆಗಳಿಗೆ ಎಂಆರ್‌ಸಿ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ಅವರು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದರು ಎಂದು ಮೂಲಗಳು ತಿಳಿಸಿವೆ. ಎರಡು ಹುದ್ದೆಗಳು ಖಾಲಿ ಇರುವಾಗ ಮತ್ತೊಂದು ಹುದ್ದೆಯನ್ನೂ ಸೇರಿಸಲಾಗಿದೆ ಎಂದು ಸದಸ್ಯರು ಸಭೆಯಲ್ಲಿ ಆರೋಪಿಸಿದ್ದರು ಎನ್ನಲಾಗಿದೆ.

ಖಾಲಿ ಇರುವ ಕೇವಲ 2 ಹುದ್ದೆಗಳಿಗೆ ಮಾತ್ರ ಚುನಾವಣೆ ನಡೆಯಬೇಕು. ಆದರೆ ಸದಸ್ಯರೊಂದಿಗೆ ಚರ್ಚಿಸಿ ಒಪ್ಪಿಗೆ ಪಡೆಯದೇ 3 ಹುದ್ದೆಗಳಿಗೆ ಚುನಾವಣೆ ನಡೆಸಲು ಅಧ್ಯಕ್ಷರು ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದಾರೆ ಎಂದು ಸದಸ್ಯರು ಆರೋಪಿಸಿದರು.

ಈ ವಿಷಯ ಕುರಿತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತೀವ್ರ ಚರ್ಚೆ ನಡೆದು ಕಾವೇರಿದ ಮಾತಿನ ಚಕಮಕಿಯಿಂದಾಗಿ ಸಭೆಯಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಯಿತು. ಈ ವೇಳೆ ಸಮಜಾಯಿಷಿ ನೀಡಿದ ಕ್ಲಬ್ ಅಧ್ಯಕ್ಷರು, ಈ ಸಂಬಂಧ ಕಾನೂನು ಸಲಹೆ ಪಡೆಯಬೇಕಿರುವುದರಿಂದ 21 ದಿನಗಳ ಕಾಲಾವಕಾಶ ಕೋರಿದರು. ಅದಕ್ಕೆ ಸದಸ್ಯರು ಸಮ್ಮತಿಸಿದ್ದರಿಂದ ಸ್ಟೀವರ್ಡ್‌ಗಳ ಚುನಾವಣೆಯನ್ನು ಮುಂದೂಡಲಾಯಿತು.

ಎಂಆರ್‌ಸಿ ಕಾರ್ಯದರ್ಶಿ ಡಾ. ಎಂ.ಆರ್. ಜಗನ್ನಾಥ ಅವರು ಬಳಿಕ ಸಭೆಯನ್ನು ಸುಲಲಿತವಾಗಿ ನಡೆಸಿ ಮಂಡಿಸಿದ್ದ ವಾರ್ಷಿಕ ಲೆಕ್ಕಪತ್ರಗಳೂ ಅನುಮೋದನೆಗೊಂಡವು. ಕೇವಲ ಸ್ಟೀವರ್ಡ್‌ಗಳ ಚುನಾವಣೆಯನ್ನು ಮಾತ್ರ ಮುಂದೂಡಲಾಗಿದ್ದು, ಚುನಾವಣಾ ಪ್ರಕ್ರಿಯೆಗೆ ಮತ್ತೆ ಅಧಿಸೂಚನೆ ಹೊರಡಿಸಬೇಕಾಗುತ್ತದೆ. ಎರಡು ಅಥವಾ ಮೂರು ಹುದ್ದೆಗಳಿಗೆ ಚುನಾವಣೆ ನಡೆಸಬೇಕೇ ಎಂಬುದರ ಬಗ್ಗೆ ನಿಖರವಾಗಿ ಸ್ಪಷ್ಟಪಡಿಸಿಕೊಂಡ ಬಳಿಕ ಮುಂದೆ ಪ್ರಕ್ರಿಯೆ ನಡೆಸಲಾಗುವುದು ಎಂದು ಕಾರ್ಯದರ್ಶಿಗಳು ಸಭೆಗೆ ಮಾಹಿತಿ ನೀಡಿದರು. ಕಂಪನಿಗಳ ಕಾಯ್ದೆ ಪ್ರಕಾರ ಮೂರು ಸ್ಟೀವರ್ಡ್‌ಗಳ ಹುದ್ದೆಗೆ ಚುನಾವಣಾ ಅಧಿಸೂಚನೆ ಹೊರಡಿಸಲಾಗಿತ್ತು. ಒಮ್ಮೆ ಅಧಿಸೂಚನೆ ಹೊರಡಿಸಿದ ಮೇಲೆ, ಅದನ್ನು ಬದಲಿಸಲು ಸಾಧ್ಯವಿಲ್ಲ ಎಂದು ಎಂಆರ್‌ಸಿ ಅಧ್ಯಕ್ಷ ಕೆಎಂ ಚಂದ್ರೇಗೌಡರು ಸಭೆಗೆ ಇದೇ ವೇಳೆ ಸ್ಪಷ್ಟಪಡಿಸಿದರು.

ಅಧಿಸೂಚನೆಯಲ್ಲಿ ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ ಕಾನೂನಿನ ಪ್ರಕಾರ ನಡೆಯಬೇಕು. ಹೀಗಿದ್ದರೂ ಕೆಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ ಕಾರಣ ಸಾಮಾನ್ಯ ಸಭೆಯು ಚುನಾವಣೆ ಮುಂದೂಡಲು ನಿರ್ಧರಿಸಿದೆ. ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದರು.

## ದೇಶ - ವಿದೇಶ

### ಡೊನಾಲ್ಡ್ ಟ್ರಂಪ್ ಮೇಲಿನ ಮೂರನೇ ಕೊಲೆ ಯತ್ನ ವಿಫಲ

**ಕ್ಯಾಲಿಫೋರ್ನಿಯಾ:** ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಈವರೆಗೆ ಎರಡು ಬಾರಿ ಕೊಲೆ ಯತ್ನ ನಡೆದಿದೆ. ಪೊಲೀಸರು ಟ್ರಂಪ್ ಮೇಲೆ ನಡೆಯಬಹುದಾದ ಮೂರನೇ ಹತ್ಯೆ ಯತ್ನವನ್ನು ವಿಫಲಗೊಳಿಸಿದ್ದಾರೆ. ಶಂಕಿತ ವ್ಯಕ್ತಿಯೊಬ್ಬನ ಜತೆ ಲೋಡ್ ಮಾಡಿದ ಬಂದೂಕು, ನಕಲಿ ಐಡಿಗಳನ್ನು ವಶಪಡಿಸಿಕೊಂಡಿದ್ದಾರೆ.



ಕ್ಯಾಲಿಫೋರ್ನಿಯಾದ ಕೋಚೆಲ್ಲಾ ವ್ಯಾಲಿಯಲ್ಲಿ ನಡೆದ ರ್‍ಯಾಲಿ ಸಂದರ್ಭದಲ್ಲಿ ಆಗಬಹುದಾದ ಯತ್ನವನ್ನು ತಡೆದಿದ್ದಾರೆ. ಶಂಕಿತನನ್ನು ಲಾಸ್ ವೇಗಾಸ್‌ನ 49 ವರ್ಷದ ವೆಮ್ ಮಿಲ್ಲರ್ ಎಂದು ಗುರುತಿಸಲಾಗಿದೆ, ರ್‍ಯಾಲಿ ಸೈಟ್‌ನಿಂದ ಸುಮಾರು ಅರ್ಧ ಮೈಲಿ ದೂರದಲ್ಲಿ ಸುಮಾರು 5 ಗಂಟೆಗೆ ಕಪ್ಪು ಎಸ್‌ಯುವಿಯಲ್ಲಿದ್ದ ವ್ಯಕ್ತಿಯನ್ನು ರಿವರ್‌ಸೈಡ್ ಕೌಂಟಿ ಪೊಲೀಸರು ಬಂಧಿಸಿದ್ದಾರೆ. ಮಿಲ್ಲರ್ ನಕಲಿ ವಿಐಪಿ ಪಾಸ್ ಹೊಂದಿದ್ದ, ಮೊದಲು ಭದ್ರತಾ ಚೆಕ ಪಾಯಿಂಟ್ ಮೂಲಕ ಸುಲಭವಾಗಿ ಒಳಗೆ ಹೋಗಿದ್ದ. ಲೋಡ್ ಮಾಡಿದ ಬಂದೂಕು ಹೊಂದಿದ್ದಕ್ಕಾಗಿ ಮತ್ತು ಹೆಚ್ಚಿನ ಸಾಮರ್ಥ್ಯದ ಮ್ಯಾಗಜೀನ್ ಹೊಂದಿದ್ದಕ್ಕಾಗಿ ಆತನ ಮೇಲೆ ಅನುಮಾನ ಮೂಡಿದೆ.


### ಮೀನು ಕೊಡದ ಸ್ನೇಹಿತನನ್ನು ಕೊಂದ ನಾಲ್ವರು ಗೆಳೆಯರು

**ಮೀರತ್:** ಫಿಶ್ ಪಾರ್ಟಿ ಕೇಳಿದಾಗ ನೀಡದೆ ಇದ್ದ ವ್ಯಕ್ತಿಯನ್ನು ಸ್ನೇಹಿತರೇ ಸೇರಿ ಕೊಲೆ ಮಾಡಿರುವ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದಿದೆ.

ಉತ್ತರಪ್ರದೇಶದ ಬುಡೌನ್ ಜಿಲ್ಲೆಯ ದತಗಂಜ್ ವ್ಯಾಪ್ತಿಯ ಚಾಪರ್ ಕೌರಾ ಗ್ರಾಮದಲ್ಲಿ ಈ ಘಟನೆ ನಡೆದಿದೆ. ತೇಜೇಂದ್ರ ಯಾದವ್ ತನ್ನ ಸ್ನೇಹಿತರಾದ ಧರ್ಮಪಾಲ್ ಕಶ್ಯಪ್, ರೂಪರಂ ಕಶ್ಯಪ್, ಮಹಾವೀರ್ ಕಶ್ಯಪ್ ಮತ್ತು ರಾಮ್ ಶಂಕರ್ ಕಶ್ಯಪ್ (ಎಲ್ಲರೂ 30ರ ಹರೆಯ) ಅವರೊಂದಿಗೆ ಶನಿವಾರ ಮಧ್ಯಾಹ್ನ ಗ್ರಾಮದ ಕೊಳವೊಂದಕ್ಕೆ ಮೀನು ಹಿಡಿಯೋಕೆ ತೆರಳಿದ್ದರು. ಈ ವೇಳೆ ತೇಜೇಂದ್ರ ಯಾದವ್ ದೊಡ್ಡದಾದ ಮೀನೊಂದನ್ನು ಹಿಡಿದಿದ್ದಾನೆ. ಮೀನು ಹಂಚುವ ವಿಚಾರದಲ್ಲಿ ತೇಜೇಂದ್ರ ಯಾದವ್ ಮತ್ತು ನಾಲ್ವರ ಮಧ್ಯೆ ತೀವ್ರ ವಾಗ್ವಾದ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಡೇಟಾಗಂಜ್ ವೃತ್ತದ ಅಧಿಕಾರಿ ಶಕ್ತಿಸಿಂಗ್ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ತೇಜೇಂದ್ರ ಯಾದವ್ ತನಗೆ ಸಿಕ್ಕಿದ ಮೀನನ್ನು ಸ್ನೇಹಿತರ ಜೊತೆ ಸೇರಿ ಪಾರ್ಟಿ ಮಾಡಲು ನಿರಾಕರಿಸಿ ಮೀನನ್ನು ಮನೆಗೆ ತೆಗೆದುಕೊಂಡು ಹೋಗಲು ನಿರ್ಧರಿಸಿದ್ದಾನೆ. ಈ ವೇಳೆ ಅವರ ಮಧ್ಯೆ ವಾಗ್ವಾದ ಉಂಟಾಗಿದೆ. ಆರೋಪಿಗಳು ತೇಜೇಂದ್ರನನ್ನು ದೊಣ್ಣೆಗಳಿಂದ ಥಳಿಸಿ ಬಲವಂತವಾಗಿ ಮೀನುಗಳನ್ನು ತೆಗೆದುಕೊಂಡು ಹೋಗಿದ್ದಾರೆ.

### ದ್ವೀಪರಾಷ್ಟ್ರ ತೈವಾನ್ ಸುತ್ತುವರಿದ ಚೀನಾ ಸೇನೆ

**ತೈಪೆ (ತೈವಾನ್):** ಕೆಲವು ದಿನಗಳ ಕಾಲ ತಣ್ಣಗಿದ್ದ ಚೀನಾ ಸೇನೆ, ಇದೀಗ ಮತ್ತೆ ತೈವಾನ್ ವಿರುದ್ಧ ಮುಗಿಬಿದ್ದಿದೆ. ಸೋಮವಾರ ಬೆಳಗ್ಗೆಯಿಂದಲೇ ಮಿಲಿಟರಿ ಡ್ರಿಲ್ ಹೆಸರಲ್ಲಿ ದ್ವೀಪ ರಾಷ್ಟ್ರ ತೈವಾನ್ ದೇಶವನ್ನು ಸುತ್ತುವರೆದಿದೆ. ಚೀನಾದ ಭೂ ಸೇನೆ, ನೌಕಾಪಡೆ ಹಾಗೂ ವಾಯುಪಡೆಗಳು ತೈವಾನ್ ಗಡಿಯ ಸುತ್ತಲೂ ಜಮಾವಣೆಗೊಂಡಿವೆ. ಪ್ರತ್ಯೇಕತಾವಾದಿಗಳಿಗೆ ಎಚ್ಚರಿಕೆ ಕರೆ ಗಂಟೆ ಎಂದು ಚೀನಾ ಸರ್ಕಾರ ಹೇಳಿದ್ದು, ದ್ವೀಪ ರಾಷ್ಟ್ರದ ಸರ್ಕಾರಕ್ಕೆ ಸೇನಾ ಕಾರ್ಯಾಚರಣೆಯ ಎಚ್ಚರಿಕೆ ನೀಡಿದೆ. ಚೀನಾ ದೇಶವು ತೈವಾನ್ ದ್ವೀಪವನ್ನು ಅನಾದಿ ಕಾಲದಿಂದಲೂ ತನ್ನ ಅವಿಭಾಜ್ಯ ಅಂಗ ಎಂದೇ ವಾದಿಸಿಕೊಂಡು ಬಂದಿದೆ. ಇತ್ತ ತೈವಾನ್ ದೇಶದ ಜನ ನಾಯಕರು ಚೀನಾದಿಂದ ಪರಾರಿಯಾಗಿ ಬಂದ ರಾಜಕೀಯ ಪಕ್ಷದ ಸದಸ್ಯರ ಸಂತತಿಯಾಗಿದ್ದು, ಅವರು ಇಡೀ ಚೀನಾ ದೇಶವೇ ತಮ್ಮದು ಎಂದು ವಾದಿಸುತ್ತಾರೆ. ಆದರೆ, ಆರ್ಥಿಕತೆ, ತಂತ್ರಜ್ಞಾನ, ಸೇನೆ, ಜನಸಂಖ್ಯೆ ಹಾಗೂ ಭೂ ಪ್ರದೇಶದ ವಿಚಾರಕ್ಕೆ ಬಂದರೆ ಚೀನಾ ದೇಶವು ತೈವಾನ್‌ಗಿಂತಲೂ ವಿಪರೀತ ಬಲಶಾಲಿಯಾಗಿದ್ದು, ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷ ತೈವಾನ್‌ನ ಕೈವಶಕ್ಕೆ ಸಾಕಷ್ಟು ಪ್ರಯತ್ನ ನಡೆಸುತ್ತಿದೆ.



### ಕೆನಡಾದಿಂದ ಹೈಕಮಿಷನರ್ ಹಿಂಪಡೆದ ಭಾರತ

**ನವದೆಹಲಿ:** ಕೆನಡಾದ ಟ್ರುಡೊ ಸರ್ಕಾರದ ನಡೆಗಳು ರಾಯಭಾರಿಗಳ ಸುರಕ್ಷತೆಗೆ ಧಕ್ಕೆ ಉಂಟು ಮಾಡುತ್ತಿದ್ದು, ಹೈಕಮಿಷನರ್ ಹಾಗೂ ಇನ್ನಿತರ ರಾಜತಾಂತ್ರಿಕ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲು ಭಾರತ ನಿರ್ಧರಿಸಿದೆ ಎಂದು ವಿದೇಶಾಂಗ ಸಚಿವಾಲಯ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಉಗ್ರವಾದ ಮತ್ತು ಹಿಂಸಾಚಾರದ ವಾತಾವರಣದಲ್ಲಿ, ಟ್ರೂಡೊ ಸರ್ಕಾರದ ಕ್ರಮಗಳು ಅವರ ಸುರಕ್ಷತೆಗೆ ಅಪಾಯವನ್ನುಂಟುಮಾಡಿದೆ ಎಂದು ಒತ್ತಿಹೇಳಲಾಗಿದೆ. ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತುತ ಕೆನಡಾ ಸರ್ಕಾರದ ಬದ್ಧತೆಯ ಬಗ್ಗೆ ನಮಗೆ ನಂಬಿಕೆಯಿಲ್ಲ. ಆದ್ದರಿಂದ, ಭಾರತ ಸರ್ಕಾರವು ಹೈಕಮಿಷನರ್ ಇತರ ಉದ್ದೇಶಿತ ರಾಜತಾಂತ್ರಿಕರು ಮತ್ತು ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲು ನಿರ್ಧರಿಸಿದೆ ಎಂದು ವಿದೇಶಾಂಗ ಇಲಾಖೆ ಹೇಳಿದೆ.

ಕಾನೂನುಬಾಹಿರವಾಗಿ ಕೆನಡಾವನ್ನು ಪ್ರವೇಶಿಸಿದ ಕೆಲವು ವ್ಯಕ್ತಿಗಳನ್ನು ಪೌರತ್ವಕ್ಕಾಗಿ ವೇಗವಾಗಿ ಟ್ರ್ಯಾಕ್ ಮಾಡಲಾಗಿದೆ. ಕೆನಡಾದಲ್ಲಿ ವಾಸಿಸುತ್ತಿರುವ ಭಯೋತ್ಪಾದಕರು ಮತ್ತು ಸಂಘಟಿತ ಅಪರಾಧ ನಾಯಕರಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ಹಲವಾರು ಹಸ್ತಾಂತರ ವಿನಂತಿಗಳನ್ನು ಕಡೆಗಣಿಸಲಾಗಿದೆ ಎಂದು MEA ಆರೋಪಿಸಿದೆ.

### ಮುಂಬೈನಿಂದ ಹೊರಡುವ 2 ಇಂಡಿಗೋ ವಿಮಾನಗಳಿಗೆ ಬಾಂಬ್ ಬೆದರಿಕೆ

**ನವದೆಹಲಿ:** ಮುಂಬೈ ವಿಮಾನ ನಿಲ್ದಾಣದಿಂದ ಮಧ್ಯಪ್ರಾಚ್ಯದ ಎರಡು ಪ್ರತ್ಯೇಕ ನಗರಗಳಿಗೆ ಸಂಚಾರ ನಡೆಸುವ ಎರಡು ಇಂಡಿಗೋ ವಿಮಾನಗಳಿಗೆ ಸೋಮವಾರ ಬೆಳಗ್ಗೆ ಬಾಂಬ್ ಬೆದರಿಕೆ ಬಂದಿದೆ.



ಬೆದರಿಕೆ ನಂತರ, ಭದ್ರತಾ ಕ್ರಮಗಳ ಭಾಗವಾಗಿ ವಿಮಾನವನ್ನು ಪ್ರತ್ಯೇಕ ಕೊಲ್ಲಿಗೆ ಸ್ಥಳಾಂತರಿಸಲಾಯಿತು. ಮುಂಬೈನಿಂದ ಮಸ್ಕತ್‌ಗೆ ತೆರಳುವ ಇಂಡಿಗೋ ವಿಮಾನ 6E 1275 ಮತ್ತು ಮುಂಬೈನಿಂದ ಜೆಡ್ಡಾಕ್ಕೆ ಕಾರ್ಯಾಚರಣೆ ನಡೆಸುತ್ತಿರುವ ಇಂಡಿಗೋ ವಿಮಾನ 6E 56 ವಿಮಾನಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

ಪರಿಸ್ಥಿತಿಗೆ ಪ್ರತಿಕ್ರಿಯಿಸಿದ ಇಂಡಿಗೋ ವಕ್ತಾರರು, ಪ್ರೋಟೋಕಾಲ್ ಪ್ರಕಾರ, ವಿಮಾನವನ್ನು ಪ್ರತ್ಯೇಕ ಕೊಲ್ಲಿಗೆ ಒಯ್ಯಲಾಯಿತು. ಪ್ರಮಾಣಿತ ಕಾರ್ಯಾಚರಣೆಯ ಕಾರ್ಯವಿಧಾನವನ್ನು ಅನುಸರಿಸಿ, ಕಡ್ಡಾಯ ಭದ್ರತಾ ತಪಾಸಣೆಗಳನ್ನು ತ್ವರಿತವಾಗಿ ಪ್ರಾರಂಭಿಸಲಾಯಿತು. ಪ್ರಯಾಣಿಕರಿಗೆ ಸಹಾಯ ಮತ್ತು ಉಪಾಹಾರಗಳನ್ನು ಒದಗಿಸಲಾಗಿದೆ. ಪ್ರಯಾಣಿಕರ ಅನಾನುಕೂಲತೆಗೆ ವಿಷಾದಿಸುತ್ತೇವೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ



## ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಗೆ ಹುಟ್ಟುಹಬ್ಬದ ಸಂಭ್ರಮ



ತಮ್ಮ ಪತ್ನಿ ಮತ್ತು ಪುತ್ರನೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರಿಗೆ ಅಭಿಮಾನಿಗಳು ಪುಷ್ಪವೃಷ್ಟಿಗರೆಯುವ ಮೂಲಕ ಶುಭಾಶಯ ಕೋರಿದರು. ಪುರಸಭಾ ಮಾಜಿ ಸದಸ್ಯ ಸಾಯಿಕುಮಾರ್, ಜೆಡಿಎಸ್ ಮುಖಂಡ ರಾಂಪುರ ಪ್ರೀತಮ್, ಪ್ರೇಮ್, ಅರಕೆರೆ ಮಂಜುನಾಥ್, ರಮೇಶ ಇತರರು ಈ ವೇಳೆ ಉಪಸ್ಥಿತರಿದ್ದರು.



ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರಿಗೆ ಹಳೇಬೀಡು ಗ್ರಾ.ಪಂ ಅಧ್ಯಕ್ಷ ಹೆಚ್.ಸಿ. ಧನಂಜಯ್ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಜೆಡಿಎಸ್ ಮುಖಂಡ ಗೌತಮ್ ಮರಿಗೌಡ, ಭಾಸ್ಕರ್(ಬಾಲು), ವಿನಯ್, ಅರಕೆರೆ ಚಂದ್ರು ಅವರುಗಳು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದರು.



ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕೆ.ಆರ್.ನಗರ ಗ್ರಾ.ಪಂ ಉಪಾಧ್ಯಕ್ಷ ರವಿ ಶಂಕರ್, ಗ್ರಾಪಂ ಸದಸ್ಯ ಡಾ.ನಾಗೇಂದ್ರ ಕುಮಾರ್, ನಂದೀಶ್, ರವಿ ನಾರಾಯಣ, ವಿಷಕಂಠು, ಗ್ರಾ.ಪಂ ಸದಸ್ಯ ನರಸಿಂಹ, ಮಾಜಿ ಗ್ರಾ.ಪಂ ಸದಸ್ಯ ಹರೀಶ್ ಇತರರು ಅಭಿನಂದಿಸಿ, ಶುಭಕೋರಿದರು.

## ಅ.17, ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಮಂಡ್ಯ,ಅ.14– ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಅ.17ರಂದು ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಅಂಗವಾಗಿ ಬೆಳಿಗ್ಗೆ 9.30 ಗಂಟೆಗೆ ಜ್ಯುಬಿಲಿ ಪಾರ್ಕ್‌ನಿಂದ ಜಿಲ್ಲಾ ಪಂಚಾಯತ್ ಕಚೇರಿಯವರೆಗೆ ಮೆರವಣಿಗೆ ಹಾಗೂ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಕಚೇರಿ ಕಾವೇರಿ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರುವರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚೆಲುವ ರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ಉಪಸ್ಥಿತಿಯಲ್ಲಿ ಮಂಡ್ಯ ವಿಧಾನ ಸಭಾ ಕ್ಷೇತ್ರ ಶಾಸಕರಾದ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನೀರಿಗೆ ತತ್ವಾರ: ಗ್ರಾಪಂ ಸದಸ್ಯರ ಪ್ರತಿಭಟನೆ

**ಕಿಕ್ಕೇರಿ:** ಮಳೆ ಬಂದೂ ಸಾಕಷ್ಟು ಕೆರೆ ಕಟ್ಟೆ ತುಂಬಿ ಅಂತರ್ಜಲ ವೃದ್ಧಿಸಿದರೂ ಮಾದಿಹಳ್ಳಿ ಸೇರಿದಂತೆ ಹಲವೆಡೆ ಕುಡಿಯುವ ನೀರಿಗೆ ಸಮಸ್ಯೆ ಉದ್ಭವಿಸಿದ್ದು ಇದಕ್ಕೆಲ್ಲ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಗ್ರಾಪಂ ಸದಸ್ಯರು ಪ್ರತಿಭಟನೆ ನಡೆಸಿದರು.

ಹೋಬಳಿಯ ಲಕ್ಷ್ಮೀಪುರ ಗ್ರಾಪಂ ಕಚೇರಿ ಮುಂದೆ ಇಲ್ಲಿನ ಗ್ರಾಪಂ ಸದಸ್ಯರು ಹಾಗೂ ವಿವಿಧ ಗ್ರಾಮಗಳ ಗ್ರಾಮಸ್ಥರು ಜಮಾಯಿಸಿ ಕಚೇರಿಗೆ ಬೀಗ ಜಡಿದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಪಂ. ವ್ಯಾಪ್ತಿಯ ಮಾದಿಹಳ್ಳಿ, ಉದ್ದಿನ ಮಲ್ಲನ ಹೊಸೂರು ಹಾಗೂ ಲಕ್ಷ್ಮೀಪುರ ಗ್ರಾಮಗಳಲ್ಲಿ ಕೆಲವು ದಿನಗಳಿಂದ ಕುಡಿಯಲು ನೀರಿಲ್ಲದೆ ತತ್ವಾರ ಉಂಟಾಗಿದೆ. ಈ ಬಾರಿ ಸಾಕಷ್ಟು ಮಳೆ ಬಿದ್ದು ಅಂತರ್ಜಲ ವೃದ್ಧಿಸಿದ್ದರೂ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಮಾಡಲು ಅಧಿಕಾರಿಗಳು ಜವಾಬ್ದಾರಿವಹಿಸದೆ ಜನಸಾಮಾನ್ಯರಿಗೆ ಮೂಲ ಸೌಲಭ್ಯ ಕಲ್ಪಿಸಲು ಮೀನಾಮೇಷ ತೋರುತ್ತಿದ್ದಾರೆ ಎಂದರು.



ಕಿಕ್ಕೇರಿ ಹೋಬಳಿಯ ಲಕ್ಷ್ಮೀಪುರ ಗ್ರಾಪಂ. ಕಚೇರಿ ಮುಂದೆ ಸೋಮವಾರ ಗ್ರಾಪಂ. ಸದಸ್ಯರು, ಗ್ರಾಮಸ್ಥರು ನೀರಿಗಾಗಿ ಪ್ರತಿಭಟಿಸಿದರು. ಮಾದಿಹಳ್ಳಿ ಶ್ರೀಧರ್, ಅಶೋಕ್, ರಘು, ಸ್ವಾಮಿ, ಕುಮಾರ್, ಲೋಕೇಶ್, ರಾಜೇಶ್, ಬಬ್ರುವಾಹನ, ಉಮೇಶ್ ಇದ್ದರು.

ಗ್ರಾಪಂ. ಸದಸ್ಯ ಶ್ರೀಧರ್ ಮಾತನಾಡಿ, ಲಕ್ಷ್ಮೀಪುರ ಮತ್ತು ಮಾದಿಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಮೋಟರ್ ಕೆಟ್ಟು ಹೋಗಿ 15 ದಿನವಾಗಿದೆ. ಅಧಿಕಾರಿಗಳು ಇತ್ತ ತಿರುಗಿ ನೋಡಿಲ್ಲ. ದೂರವಾಣಿ ಕರೆ ಮಾಡಿದರೂ ಸ್ವೀಕರಿಸದೆ ಉಡಾಫೆ ತೋರುತ್ತಿದ್ದಾರೆ. ಮೇಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿಕೊಡಬೇಕು ಎಂದು ಸ್ಥಳದಲ್ಲಿಯೇ ಠಿಕಾಣಿ ಹೂಡಿದರು.

ವಿಷಯ ತಿಳಿದ ತಾಪಂ. ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ, ಪಂಚಾಯತ್‌ರಾಜ್ ಅಧಿಕಾರಿ ನರಸಿಂಹರಾಜು ಸ್ಥಳಕ್ಕೆ ಭೇಟಿ ನೀಡಿ ತುರ್ತು ಜನರ ಸಮಸ್ಯೆ ಬಗೆಹರಿಸಿಕೊಡಿ ಎಂದು ತಾಕೀತು ಮಾಡಿ, ಪ್ರತಿಭಟನಾಕಾರರ ಮನವೊಲಿಸಿದರು. ಗ್ರಾಪಂ ಸದಸ್ಯರಾದ ಅಶೋಕ್, ರಘು, ಸ್ವಾಮಿ, ಕುಮಾರ್, ಲೋಕೇಶ್, ರಾಜೇಶ್, ಬಬ್ರುವಾಹನ, ಉಮೇಶ್, ಪಿಡಿಒ ಸುರೇಶ್‌ಬಾಬು ಇದ್ದರು.

## ಧಾರಾಕಾರ ಮಳೆಗೆ ನಾಡ ಹೆಂಚಿನ ಮನೆ ಕುಸಿತ

ಪಾಂಡವಪುರ,ಅ.14– ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ನಾಡ ಹೆಂಚಿನ ಮನೆಯೊಂದು ಭಾಗಶಃ ಕುಸಿದು ಬಿದ್ದು, ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಮಂಡಿ ಬೆಟ್ಟಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಮಂಡಿ ಬೆಟ್ಟಹಳ್ಳಿ ಗ್ರಾಮದ ನಿವಾಸಿ ಶಂಭುಲಿಂಗಪ್ಪ, ಮಹದೇವಮ್ಮ ಹಾಗೂ ಚೆನ್ನಮ್ಮ ಅವರಿಗೆ ಸೇರಿದ ಹಳೆಯ ನಾಡಹೆಂಚಿನ ಮನೆಯ ಒಂದು ಭಾಗದ ಗೋಡೆ ಮಳೆಯ ರಭಸಕ್ಕೆ ಕುಸಿದುಬಿದ್ದಿದ್ದು, ಪಕ್ಕದ ನಿವಾಸಿ ಜಗದೀಶ್ ಮನೆಯ ಕಾಂಪೌಂಡ್ ಮೇಲೆ ಗೋಡೆ ಬಿದ್ದಿದ್ದರಿಂದ ಕಾಂಪೌಂಡ್ ಕೂಡ ತೀವ್ರ ಹಾನಿಗೊಂಡಿದೆ. ಮಧ್ಯರಾತ್ರಿ ನಡೆದಿರುವ ಈ ಘಟನೆಯಿಂದ ಮನೆಯಲ್ಲಿ ಮಲಗಿದ್ದವರು



ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮನೆಯಲ್ಲಿದ್ದ ದವಸ ಧಾನ್ಯಗಳು ನಾಶವಾಗಿದೆ.

## ಗ್ಯಾರಂಟಿಗಳಿಂದ ಸರ್ಕಾರದ ಖಜಾನೆ ಖಾಲಿ

ಮಂಡ್ಯ,ಅ.14– ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ ನಂತರ ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದ್ದು, ಸರ್ಕಾರದಲ್ಲಿ ಹಣವಿಲ್ಲದೆ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ಶಾಸಕರಿಗೂ ಅನುದಾನವನ್ನು ನೀಡುತ್ತಿಲ್ಲ. ಇದರಿಂದ ಸ್ವಪಕ್ಷೀಯ ಶಾಸಕರೇ ಸರ್ಕಾರದ ವಿರುದ್ಧ ಬಂಡೆದ್ದಿದ್ದಾರೆ ಎಂದು ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಇಂಡುವಾಳು ಆರೋಪಿಸಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕು ಕೊತ್ತತ್ತಿ ಗ್ರಾಮದಲ್ಲಿ ಸೋಮವಾರ ನಡೆದ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಾದರೂ ಸಮರ್ಪಕವಾಗಿ ಅನುಷ್ಠಾನ ಆಗುತ್ತಿವೆಯೇ ಎಂದು ನೋಡಿದರೆ ಅದು ಕೂಡ ಸರಿಯಾಗಿ ಆಗುತ್ತಿಲ್ಲ. ಹೆಣ್ಣು ಮಕ್ಕಳಿಗೆ ಪ್ರತಿ ತಿಂಗಳು ಸರಿಯಾಗಿ ಗೃಹಲಕ್ಷ್ಮಿ ಯೋಜನೆ ಹಣ ಹೋಗುತ್ತಿಲ್ಲ.



ಕೊತ್ತತ್ತಿ ಗ್ರಾಮದಲ್ಲಿ ಬಿಜೆಪಿ ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ಮುಖಂಡ ಎಸ್.ಸಚ್ಚಿದಾನಂದ ಅವರಿಂದ ಚಾಲನೆ.

ಅನ್ನಭಾಗ್ಯ ಯೋಜನೆಯ ಅಕ್ಕಿ ಮೊತ್ತವೂ ಕೂಡ ಜನರ ಕೈ ಸೇರುತ್ತಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕೆಲಸವಾಗುತ್ತಿಲ್ಲ ಎಂದು ಆರೋಪಿಸಿದರು.

ಮಂಡ್ಯದಲ್ಲಿ ಮೈಷುಗರ್‌ನ ಹೊಸ ಕಾರ್ಖಾನೆ ಸ್ಥಾಪಿಸುವುದಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿತ್ತು. ಆದರೆ, ಈ ವಿಚಾರದಲ್ಲಿ ಈವರೆಗೆ ಯಾವುದೇ ಪ್ರಗತಿಯಾಗಿಲ್ಲ. ಹೊಸ ಕಾರ್ಖಾನೆ ಸ್ಥಾಪಿಸುವುದಾಗಿ ಹೇಳಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡುತ್ತಿದ್ದಾರೆ. ಎರಡು ವರ್ಷಗಳ ಹಿಂದೆಯೇ ಘೋಷಿಸಿದ್ದ ಎಥೆನಾಲ್ ಘಟಕವು ಕೂಡ ಈವರೆಗೆ ಆರಂಭವಾಗಿಲ್ಲ ಎಂದು ಕಿಡಿಕಾರಿದರು. ಕನಿಷ್ಠ ಪಕ್ಷ ಮೂಲಸೌಕರ್ಯಗಳು ಕಲ್ಪಿಸಿಕೊಡಲು ಸರ್ಕಾರ ಹಾಗೂ ಶಾಸಕರಿಂದ ಸಾಧ್ಯವಾಗುತ್ತಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಎಲ್ಲ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚರಿಸುವುದು ದುಸ್ತರವಾಗಿದೆ. ಪತ್ರಿಕೆಗಳಲ್ಲೂ ಈ ಬಗ್ಗೆ ನಿರಂತರವಾಗಿ ವರದಿಗಳು ಬರುತ್ತಿವೆ ಇವುಗಳನ್ನು ನೋಡಿಯಾದರೂ ಸರ್ಕಾರ ಮತ್ತು ಶಾಸಕರು ರಸ್ತೆಗಳ ಅಭಿವೃದ್ಧಿಗೆ ಮುಂದಾಗಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಬೇವಿನಹಳ್ಳಿ ಮಹೇಶ್, ಶ್ರೀರಂಗಪಟ್ಟಣ ತಾಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಸತೀಶ್, ಕೊತ್ತತ್ತಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ರಕ್ಷಿತ್, ಉಪಾಧ್ಯಕ್ಷ ಯೋಗೇಶ್, ಬಿಜೆಪಿ ಮುಖಂಡರಾದ ಸುಕೇಂದ್ರ, ಜವರೇಗೌಡ, ಉದ್ಯಮಿ ಮಹೇಶ್, ಶಂಕರೇಗೌಡ, ಮಾಯಿಗೌಡ ಚೇತನ್ ಇತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

## ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್

ಪರಿಶೀಲಿಸಿದ ಸಮಿತಿಯು ಅದು ಸುಳ್ಳು ಪ್ರಕರಣ ಎಂದು ತಿಳಿಸಿತ್ತು. ಆ ವರದಿಯು ಸಚಿವ ಸಂಪುಟಕ್ಕೆ ಬಂದಿದ್ದು, ನಾವೆಲ್ಲರೂ ಅದನ್ನು ಒಪ್ಪಿಕೊಂಡಿದ್ದೇವೆ. ಬಿಜೆಪಿ ಆಡಳಿತವಿದ್ದಾಗಲೂ ಅನೇಕ ಅಪರೂಪದ ಪ್ರಕರಣಗಳನ್ನು ಹಿಂಪಡೆದಿತ್ತು. ಇದು ಹೊಸದೇನಲ್ಲ ಎಂದು ಸಮರ್ಥಿಸಿಕೊಂಡರು. ಹೋರಾಟಗಳು ನಡೆದ ಸಂದರ್ಭದಲ್ಲಿ ನಡೆದ ಗಲಭೆ ಕೇಸ್‌ಗಳನ್ನು ಕಾಲ ಕಾಲಕ್ಕೆ ಹಿಂಪಡೆದಿದ್ದಾರೆ. ಎಲ್ಲ ಸರ್ಕಾರಗಳು ಕೇಸ್ ಹಿಂಪಡೆದಿವೆ. ಸಿ.ಟಿ.ರವಿ ಕೇಸ್ ಹಿಂಪಡೆದಿದ್ದೇವೆ, ಅದನ್ನು ಹೇಳಲ್ವಾ ಬಿಜೆಪಿಯವರು? ಗಲಭೆಗಳಾದಾಗ ಅಮಾಯಕರ ಮೇಲೆ ಕೇಸ್ ದಾಖಲಾಗಿರುತ್ತವೆ. ಗಲಭೆ ಮಾಡಿದವರು ಓಡಿ ಹೋಗಿರ್ತಾರೆ, ಸಿಕ್ಕಿ ಹಾಕಿಕೊಂಡಿರಲ್ಲ. ಗಲಭೆ ನೋಡುತ್ತ ನಿಂತವರು ಸಿಕ್ಕಿಹಾಕಿಕೊಂಡಿರುತ್ತಾರೆ. ರೈತ ಹೋರಾಟ, ವಿದ್ಯಾರ್ಥಿ ಹೋರಾಟ, ಜನರ ಹೋರಾಟಗಳ ಕೇಸ್‌ನ್ನು ಎಲ್ಲ ಸರ್ಕಾರಗಳು ಹಿಂಪಡೆದಿರುತ್ತವೆ. ಅದೇ ರೀತಿ ಹುಬ್ಬಳ್ಳಿ ಗಲಭೆ ವಾಪಸ್ ಪಡೆದಿರಬಹುದು ಎಂದು ಸ್ಪಷ್ಟಪಡಿಸಿದರು.

**ಜೋಶಿ ಭಯೋತ್ಪಾದಕ:** ಕಾಂಗ್ರೆಸ್‌ನ್ನು ಭಯೋತ್ಪಾದಕರ ಪಕ್ಷ ಎಂದು ಕರೆದಿರುವ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ಜೋಶಿನೇ ಭಯೋತ್ಪಾದಕ ಎಂದು ಉತ್ತರಿಸುವ ಮೂಲಕ ತಿರುಗೇಟು ನೀಡಿದರು.

## ಜಾಮೀನು ಅರ್ಜಿ ವಜಾ

ಕೇಸ್‌ನಲ್ಲಿ ಒಟ್ಟು 17 ಮಂದಿ ಆರೋಪಿಗಳನ್ನು ಬಂಧನ ಮಾಡಲಾಗಿತ್ತು. ಈವರೆಗೂ ತುಮಕೂರು ಜೈಲಿನಲ್ಲಿದ್ದ, ಸಾಕ್ಷಿ ನಾಶ ಆರೋಪ ಎದುರಿಸಿದ್ದ 3 ಮಂದಿ ಕೆಲ ದಿನಗಳ ಹಿಂದೆ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಸೋಮವಾರ ಮತ್ತೆ ಇಬ್ಬರಿಗೆ ಕೋರ್ಟ್ ಜಾಮೀನು ನೀಡಿದೆ. ಈ ಮೂಲಕ 17 ಮಂದಿಯಲ್ಲಿ 5 ಮಂದಿಗೆ ಜಾಮೀನು ಸಿಕ್ಕಂತಾಗಿದೆ. ಉಳಿದಂತೆ 12 ಮಂದಿ ನ್ಯಾಯಾಂಗ ಬಂಧನ ಮುಂದುವರೆಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರೆ, ನಟ ದರ್ಶನ್ ಪರವಾಗಿ ಹಿರಿಯ ವಕೀಲ ನಾಗೇಶ್ ಅವರು ವಾದ ಮಂಡಿಸಿದ್ದರು. ಕಳೆದ ನಾಲ್ಕು ದಿನಗಳಿಂದ ವಾದ ವಿವಾದ ಆಲಿಸಿ ಇದೀಗ ಆದೇಶ ಹೊರಡಿಸಲಾಗಿದೆ.

**ಪ್ರದೂಷ್ ಅರ್ಜಿ ಆದೇಶ 16ಕ್ಕೆ ಕಾಯ್ದಿರಿಸಿದ ಕೋರ್ಟ್:** ರೇಣುಕಾಸ್ವಾಮಿ ಪೋಸ್ಟ್ ಮಾಟರ್ಮ್ ರಿಪೋರ್ಟ್ ಆಧರಿಸಿ ವಾದಿಸುತ್ತಿರುವ ನಟ ಪ್ರದೂಷ್ ಪರ ವಕೀಲ ದಿವಾಕರ್ ಅವರು, ರೇಣುಕಾಸ್ವಾಮಿ ಮೇಲೆ ನಟ ಪ್ರದೂಷ್ ಹಲ್ಲೆ ಮಾಡಿರುವ ಬಗ್ಗೆ ಯಾವುದೇ ಸಾಕ್ಷಿಗಳ ಉಲ್ಲೇಖ ಇಲ್ಲ. ಅವರ ಸಾವಿಗೆ ಕಾರಣ ಅನೇಕ ರಕ್ತಸಿಕ್ತ ಗಾಯಗಳು ಕಾರಣವೆಂದು ಹೇಳಲಾಗುತ್ತಿದೆ. ಆದರೆ ಯಾವ ಗಾಯದಿಂದ ಸಾವನ್ನಪ್ಪಿದ್ದಾರೆ ಎಂದು ಉಲ್ಲೇಖ ಮಾಡಿಲ್ಲ. ಯಾರ ಹೊಡೆತದಿಂದ ಸಾವನ್ನಪ್ಪಿದ ಅಂತಿಲ್ಲ. ಜನರ ದೃಷ್ಟಿಯಲ್ಲಿ 3,900 ಪುಟಗಳ ಚಾರ್ಜ್ ಶೀಟ್ ಅಂತಾ ಇದೆ. ಆದರೆ, ಯಾವ ಗಾಯದಿಂದ ಸಾವು ಸಂಭವಿಸಿದೆ? ಇದನ್ನು ಎಲ್ಲೂ ಉಲ್ಲೇಖಿಸಿಲ್ಲ. ಹಲ್ಲೆ ಎಂದರೆ ಸಾಮಾನ್ಯ ಹಲ್ಲೆ, ಗಂಭೀರ ಹಲ್ಲೆ, ಕೊಲೆ ಯತ್ನ ಸೆಕ್ಷನ್‌ಗಳ ಅಡಿ ಕ್ರಮಕ್ಕೆ ಅವಕಾಶ ಇದೆ. ಆದರೆ, ಕೊಲೆ ಎಂದು ಆರೋಪಿಸುವಾಗ ಯಾವ ಗಾಯ ಸಾವಿಗೆ ಕಾರಣವಾಗಿದೆ. ಆ ಗಾಯಪಡಿಸಿದವರು ಯಾರು ಎಂದು ಸ್ಪಷ್ಟತೆ ಇಲ್ಲ ಎಂದು ವಾದ ಮಂಡಿಸಿದ್ದಾರೆ. ಇನ್ನು ದರ್ಶನ್ ಗ್ಯಾಂಗ್ ಆರೋಪಿಗಳಾದ ವಿನಯ್, ಪ್ರದೂಷ್ ಹಾಗೂ ಜಗದೀಶ್ ಜಾಮೀನು ಅರ್ಜಿ ಆದೇಶವನ್ನು ಅ.16ಕ್ಕೆ ಕಾಯ್ದಿರಿಸಿದೆ.

## ಗೆಹ್ಲೋಟ್‌ಗೆ ಝಡ್ ಶ್ರೇಣಿ ಭದ್ರತೆ

ನೀಡಿದ ಬಳಿಕ ಆಡಳಿತಾರೂಢ ಕಾಂಗ್ರೆಸ್ ನಾಯಕರು ಹಾಗೂ ಸಚಿವರು ರಾಜ್ಯಪಾಲರ ವಿರುದ್ಧ ನೇರವಾಗಿ ತಿರುಗಿಬಿದ್ದಿದ್ದರು. ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಅವರು ಕಾರ್ಯಕ್ರಮಗಳನ್ನು ರದ್ದು ಮಾಡಿದ್ದರು. ಸಾರ್ವಜನಿಕ ಕಾರ್ಯಕ್ರಮದಲ್ಲಿ ಅವರು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ.

ರಾಜ್ಯಪಾಲರು ತಾರತಮ್ಯ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಿತ್ತು. ವಿಧಾನಸೌಧದಿಂದ ರಾಜಭವನಕ್ಕೆ ಪಾದಯಾತ್ರೆಯನ್ನು ಹಮ್ಮಿಕೊಂಡಿತ್ತು. ಡಿಸಿಎಂ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆದಿತ್ತು. ಬಳಿಕ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿತ್ತು. ವಿಧಾನಪರಿಷತ್ ಸದಸ್ಯ ಐವನ್ ಡಿಸೋಜಾ ರಾಜ್ಯಪಾಲರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದರು. ರಾಜ್ಯಪಾಲರ ಸರ್ವಾಧಿಕಾರ ಇದೇ ರೀತಿಯಲ್ಲಿ ಮುಂದುವರಿದರೆ ಬಾಂಗ್ಲಾ ದೇಶದಲ್ಲಿ ಶೇಕ್ ಹಸೀನಾ ವಿರುದ್ಧ ನಡೆದ ಮಾದರಿಯಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಐವನ್ ಡಿಸೋಜಾ ಹೇಳಿಕೆ ನೀಡಿದ್ದರು. ಐವನ್ ಡಿಸೋಜಾ ಹೇಳಿಕೆ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಬಿಜೆಪಿ ನಾಯಕರು ಐವನ್ ಡಿಸೋಜಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಐವನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಈ ಎಲ್ಲಾ ಹಿನ್ನೆಲೆಯಲ್ಲಿ ಇದೀಗ ರಾಜ್ಯಪಾಲರಿಗೆ ಭದ್ರತೆಯನ್ನು ಹೆಚ್ಚಳ ಮಾಡಲಾಗಿದೆ.

## ದಸರಾ ಗಜಪಡೆ ತವರಿಗೆ



ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅರಮನೆ ಮಂಡಳಿ ವತಿಯಿಂದ ಅಭಿಮನ್ಯು ಮಾವುತ ವಸಂತ್ ಹಾಗೂ ಇನ್ನಿತರ ಆನೆಗಳ ಮಾವುತ, ಕಾವಾಡಿಗಳಿಗೆ ಗೌರವ ಧನ ನೀಡುತ್ತಿರುವುದು.

ಕ್ಯಾಪ್ಟನ್ ಅಭಿಮನ್ಯು ಲಾರಿ ಏರಿತು. ಬಳಿಕ ಒಂದಾದ ಮೇಲೆ ಒಂದರಂತೆ ವಿವಿಧ ಆನೆಗಳನ್ನು ಲಾರಿಗೆ ಹತ್ತಿಸಲಾಯಿತು.

ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಏಕಲವ್ಯ ಆನೆ 5–6 ನಿಮಿಷ ಲಾರಿ ಹತ್ತಲು ಹಿಂದೇಟು ಹಾಕಿತು. ಮೊದಲ ಎರಡು ಕಾಲುಗಳು ಲಾರಿ ಮೇಲಿದ್ದರೂ, ಹಿಂದಿನ ಕಾಲನ್ನು ಲಾರಿಯ ರ್‍ಯಾಂಪ್ ಮೇಲೆ ಇಡಲು ಭಯ ಪಡುತ್ತಿತ್ತು. ಬಳಿಕ ಸುಧಾರಿಸಿಕೊಂಡು ಲಾರಿ ಏರಿತು. ಏಕಲವ್ಯ ಆನೆಯನ್ನು ಹೊರತುಪಡಿಸಿದರೆ, ಉಳಿದ ಯಾವ ಆನೆಯೂ ಹಠ ಮಾಡಲಿಲ್ಲ.

4 ವರ್ಷದ ಹಿಂದೆ ಲಕ್ಷ್ಮೀ ಆನೆ ಲಾರಿ ಹತ್ತಲು ಹಿಂದೇಟು ಹಾಕಿತ್ತು. ಆದರೆ, ಈ ಬಾರಿ ಹಠ ಮಾಡದೆ ಲಾರಿ ಏರಿ ಗಮನ ಸೆಳೆಯಿತು. ಮಹೇಂದ್ರ ಹಾಗೂ ಭೀಮ ಆನೆ ಯಾವುದೇ ರ್‍ಯಾಂಪ್ ಅಥವಾ ದಿಬ್ಬವಿಲ್ಲದೆ, ಲಾರಿ ಹತ್ತುವ ಮೂಲಕ ಗಮನ ಸೆಳೆಯಿತು. ಅದರಲ್ಲೂ ಮಹೇಂದ್ರ ಆನೆ ಜನಜಂಗುಳಿ ನಡುವೆಯೇ ನಿಂತಿದ್ದ ಲಾರಿಯನ್ನು ಹತ್ತುವ ಮೂಲಕ ಗಮನ ಸೆಳೆಯಿತು. ಭೀಮ ತನ್ನ ಬಿಡಾರದ ಬಳಿ ಇದ್ದ ಲಾರಿಯನ್ನು ಅಲ್ಲಿಂದಲೇ ಹತ್ತುವ ಮೂಲಕ ಎಲ್ಲರ ಚಿತ್ತ ತನ್ನತ್ತ ಸೆಳೆಯುವಂತೆ ಮಾಡಿತು.

**ಅರಮನೆ ಮಂಡಳಿಯಿಂದ ಗೌರವ:** ದಸರಾ ಗಜಪಡೆ ಸ್ವಸ್ಥಾನಕ್ಕೆ ತೆರಳುವ ವೇಳೆ ಸಂಪ್ರದಾಯದಂತೆ ಅರಮನೆ ಮಂಡಳಿ ವತಿಯಿಂದ ದಸರಾ ಗಜಪಡೆ ಆನೆಗಳ ಮಾವುತ, ಕಾವಾಡಿ, ಸಹಾಯಕರು, ವಿಶೇಷ ಮಾವುತರು ಸೇರಿದಂತೆ 68 ಮಂದಿಗೆ ತಲಾ 15 ಸಾವಿರ ರೂ. ಗೌರವ ಧನ ನೀಡಿ ಗೌರವಿಸಲಾಯಿತು. ಪೂಜೆ ಮುಗಿದ ಬಳಿಕ ಆಗಮಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಮಾವುತ, ಕಾವಾಡಿಗಳಿಗೆ ಗೌರವ ಧನ ವಿತರಿಸಿದರು. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜು, ಡಾ.ಚಂದ್ರಶೇಖರ್ ಪಾಟೀಲ್, ಪ್ರೊಬೆಷನರಿ ಎಸಿಎಫ್ ಅಭಿಷೇಕ್, ಅರಮನೆ ಆಡಳಿತ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬೆಂಗಳೂರಿನಲ್ಲಿ ಧರಣಿ

ಭೇಟಿಗಾಗಿ ದಿನಾಂಕ ನಿಗದಿಪಡಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಮೀಸಲಾತಿ ಹೋರಾಟ ಬಳಸಿಕೊಂಡು ಆಯ್ಕೆಯಾದ ನಮ್ಮ ಸಮುದಾಯದ ಕಾಂಗ್ರೆಸ್‌ನ ಶಾಸಕರು ಬೇಡಿಕೆ ಈಡೇರಿಸಲು ಮುಖ್ಯಮಂತ್ರಿ ಮುಂದೆ ಏಕೆ ಧ್ವನಿ ಎತ್ತುತ್ತಿಲ್ಲವೆಂದು ಗೊತ್ತಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಬೇಡಿಕೆ ಈಡೇರಿಕೆಗಾಗಿ ಕಳೆದ ತಿಂಗಳು ವಕೀಲರ ಸಮಾವೇಶ ನಡೆಸಿ, ಸರ್ಕಾರಕ್ಕೆ ಪ್ರತಿಭಟನೆಯ ಎಚ್ಚರಿಕೆ ಕೊಟ್ಟಿದ್ದೆವು. ಆಗ ಸಿದ್ದರಾಮಯ್ಯ ಮಾತನಾಡಿ, ಅ.15ರಂದು ಸಮುದಾಯದೊಂದಿಗೆ ಸಭೆ ನಡೆಸಲು ದಿನಾಂಕ ನಿಗದಿಪಡಿಸುವುದಾಗಿ ತಿಳಿಸಿದ್ದರು. ಆದರೆ, ಮುಖ್ಯಮಂತ್ರಿ ಈಗ ನವದೆಹಲಿಗೆ ಹೋಗುತ್ತಿದ್ದಾರೆ. ಸಭೆ ಮುಂದಿನ ದಿನಾಂಕ ತಿಳಿಸಲಾಗುವುದು ಎಂದು ಕಳೆದ ವಾರವಷ್ಟೇ ನಮಗೆ ಮಾಹಿತಿ ಸಿಕ್ಕಿದೆ ಎಂದು ಸ್ವಾಮೀಜಿ ಹೇಳಿದರು. ಅ.18ರಂದು ಬೆಂಗಳೂರಿನಲ್ಲಿ ಧರಣಿ ನಡೆಸಿದ ನಂತರವೂ, ಮುಖ್ಯಮಂತ್ರಿ ಭೇಟಿಗೆ ಸಮಯ ನಿಗದಿಯಾಗದಿದ್ದರೆ ವಿಧಾನಸೌಧಕ್ಕೆ ಹೋಗಿ ಅಸಮಾಧಾನ ಹೊರಹಾಕುತ್ತೇವೆ ಎಂದು ತಿಳಿಸಿದರು.

## ಹರಿಪ್ರಸಾದ್ ಆಗ್ರಹ

ಹಿನ್ನೆಲೆಯಲ್ಲಿ ಏಕಾಏಕಿ ಆರೋಪಿಯ ಮನೆ, ಶಾಸಕ ಅಖಂಡ ಶ್ರೀನಿವಾಸ್ ಮನೆ ಸೇರಿದಂತೆ ಡಿಜೆ ಹಳ್ಳಿ ಮತ್ತು ಕೆಜಿ ಹಳ್ಳಿ ಪೊಲೀಸ್ ಠಾಣೆಗೆ ನುಗ್ಗಿ ಗಲಭೆ ನಡೆದಿತ್ತು. ಈ ಗಲಭೆಯಲ್ಲಿ ಅಪಾರ ಪ್ರಮಾಣ ಆಸ್ತಿ– ಪಾಸ್ತಿ ಹಾನಿಯಾಗಿತ್ತು. ಹಲವು ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು. ಡಿಜೆ ಹಳ್ಳಿ ಕೆಜೆ ಹಳ್ಳಿ ಗಲಭೆಗೆ ಸಂಬಂಧಿಸಿದಂತೆ ಮಾತನಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್, ಸುಳ್ಳು ಕೇಸ್‌ಗಳನ್ನು ಹಾಕಿದ್ದರೆ ಪರಿಶೀಲಿಸಿ ವಾಪಸ್ ಪಡೆಯಲು ಸರ್ಕಾರಕ್ಕೆ ಅವಕಾಶವಿದೆ. ಬಿಜೆಪಿ ಎಲ್ಲವನ್ನೂ ರಾಜಕೀಯ ಮಾಡಲು ಹೋಗುತ್ತಿದೆ. ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಕೇಸ್‌ಗಳನ್ನೂ ಪರಿಶೀಲನೆ ಮಾಡುತ್ತೇವೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದ್ದರು.

## ರಾಜ್ಯಪಾಲರಿಗೆ ಬಿಜೆಪಿ ದೂರು

ಮೊಕದ್ದಮೆ ಹಿಂಪಡೆದ ಪ್ರಕರಣ ಸಾಕ್ಷಿಯಾಗಿದೆ ಎಂದರು. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಡುವುದು ನಿಶ್ಚಿತ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ವಿಜಯೇಂದ್ರ ಭವಿಷ್ಯ ಹೇಳುತ್ತಾರಾ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದರು, ಹಾಗಿದ್ದರೆ, ಐದು ವರ್ಷಗಳವರೆಗೆ ನೀವೇ ಮುಖ್ಯಮಂತ್ರಿ ಎಂಬುದಾಗಿ ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಹೇಳಿಸಿ ನೋಡೋಣ ಎಂದು ವಿಜಯೇಂದ್ರ ಸವಾಲು ಹಾಕಿದರು.

ಖರ್ಗೆ ಅವರು ಇಂಥ ಹೇಳಿಕೆ ಕೊಡುವುದಿಲ್ಲ, ರಾಜ್ಯ ರಾಜಕಾರಣದ ಕುರಿತು ಪ್ರತಿಕ್ರಿಯೆ ನೀಡುವುದರಿಂದ ತಪ್ಪಿಸಿಕೊಳ್ಳುತ್ತಿದ್ದಾರೆ, ಬಿಜೆಪಿ ಹೋರಾಟದ ನಂತರ ಮುಡಾ ಹಗರಣದಲ್ಲಿ ಕದ್ದ ಮಾಲನ್ನು ವಾಪಸ್ ಕೊಡಲು ಸಿದ್ದರಾಮಯ್ಯ ಅವರು ನಿರ್ಧರಿಸಿದರು, ಮುಖ್ಯ ಮಂತ್ರಿಗಳ ಪಾಪದ ಕೊಡ ತುಂಬಿದೆ, ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಸೂರ್ಯ–ಚಂದ್ರರು ಇರುವಷ್ಟೇ ಸತ್ಯ ಎಂದರು.

ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಣವನ್ನು ಸರ್ಕಾರ ಲೂಟಿ ಮಾಡಿದೆ, ಇದರ ಬಗ್ಗೆ ಜನರು ಚರ್ಚಿಸುತ್ತಿದ್ದಾರೆ, ಬಡವರಿಗೆ ಮೀಸಲಿಟ್ಟ ನಿವೇಶನಗಳನ್ನು ಮೈಸೂರಿನಲ್ಲಿ ಮುಖ್ಯಮಂತ್ರಿಗಳ ಕುಟುಂಬವೇ ಲೂಟಿ ಮಾಡಿದೆ.

ಎಸ್‌ಇಪಿ/ಟಿಎಸ್‌ಪಿ ಹಣ ದುರುಪಯೋಗ ಪ್ರಕರಣವೂ ಚರ್ಚಾ ವಿಷಯವಾಗಿದೆ, ರಾಜ್ಯದಲ್ಲಿ ಅಭಿವೃದ್ಧಿ ಇಲ್ಲವಾಗಿದೆ, ಇಂಥ ಸರ್ಕಾರದಲ್ಲಿ ಶಾಸಕರಾಗಿರುವ ಬದಲು ಆತ್ಮಹತ್ಯೆ ಮಾಡಿಕೊಳ್ಳುವುದೇ ಒಳಿತೆಂದು ಕಾಂಗ್ರೆಸ್ ಶಾಸಕ ರಾಜುಕಾಗೆ ಅವರು ಹೇಳಿದ್ದರ ಕುರಿತು ಗಮನ ಸೆಳೆದರು. ಗ್ಯಾರಂಟಿಗಳಿಂದ ಅಭಿವೃದ್ಧಿ ಕೆಲಸ ನಿಂತು ಹೋಗಿದೆ ಎಂಬುದಾಗಿ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ, ಅಭಿವೃದ್ಧಿ ಕೆಲಸ ಸ್ಥಗಿತವಾಗಿದೆ ಎಂಬುದು ಆರ್.ವಿ. ದೇಶಪಾಂಡೆ ಸೇರಿದಂತೆ ಕಾಂಗ್ರೆಸ್‌ನ ಹಲವು ಮುಖಂಡರ ಹೇಳಿಕೆಯಾಗಿದೆ.

ಕಾಂಗ್ರೆಸ್ ಯೋಗ್ಯತೆ ಹರಿಯಾಣ, ಜಮ್ಮು–ಕಾಶ್ಮೀರದ ಚುನಾವಣೆಯಲ್ಲಿ ಜಗಜ್ಜಾಹೀರಾಗಿದೆ, ಇಷ್ಟಾದರೂ ಕಾಂಗ್ರೆಸ್‌ಗೆ ಬುದ್ಧಿ ಬಂದಿಲ್ಲ. ಮುಂದಿನ ದಿನಗಳಲ್ಲಿ ಬಿಜೆಪಿ ಜನಾಂದೋಲನ, ಬೃಹತ್ ಪ್ರತಿಭಟನೆ ನಡೆಸಲಿದೆ ಎಂದು ಅವರು ಪ್ರಕಟಿಸಿದರು.


## ನಾಗೇಂದ್ರಗೆ ಷರತ್ತುಬದ್ಧ ಜಾಮೀನು

ಕೈಬಿಟ್ಟಿತ್ತು. ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಈ ಮೂಲಕ ರಾಜ್ಯ ಸರ್ಕಾರ ಬಿ.ನಾಗೇಂದ್ರ ಅವರಿಗೆ ಕ್ಲೀನ್ ಚಿಟ್ ನೀಡಿದೆ ಎಂಬ ಆರೋಪ ಕೇಳಿ ಬಂದಿತ್ತು. ಬಿಜೆಪಿ ನಾಯಕರು ಎಸ್‌ಐಟಿ ತನಿಖೆಯ ಪಾರದರ್ಶಕತೆಯನ್ನೇ ಪ್ರಶ್ನಿಸಿದ್ದರು.

**ಏನಿದು ವಾಲ್ಮೀಕಿ ನಿಗಮ ಹಗರಣ?:** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಒಳಗೊಂಡ ಮಹತ್ವದ ಹಣಕಾಸು ವಂಚನೆ ಪ್ರಕರಣವಾಗಿದೆ. ನಿಗಮದ ಅಧೀಕ್ಷಕ ಚಂದ್ರಶೇಖರನ್ ಅವರ ಆತ್ಮಹತ್ಯೆಯ ನಂತರ ಹಗರಣ ಬೆಳಕಿಗೆ ಬಂದಿದೆ. ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣದ ಬಗ್ಗೆ ಚಂದ್ರಶೇಖರನ್ ಆತ್ಮಹತ್ಯೆಗೂ ಮುನ್ನ ಬರೆದ ಡೆತ್ ನೋಟ್‌ನಲ್ಲಿ ವಿವರವಾಗಿ ಬರೆದಿದ್ದಾರೆ. ಹಲವು ಅಧಿಕಾರಿಗಳ ಹೆಸರನ್ನೂ ಉಲ್ಲೇಖ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸಚಿವ ಬಿ.ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಇ.ಡಿ ಅವರನ್ನು ವಶಕ್ಕೆ ಪಡೆದುಕೊಂಡು ಬಂಧನಕ್ಕೆ ಒಳಪಡಿಸಿತ್ತು.

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮುಖ್ಯ ಖಾತೆಯಲ್ಲಿ 2024–25 ನೇ ಸಾಲಿನ ಯೋಜನೆಗಳಿಗೆ ಮೀಸಲಿಟ್ಟ 187 ಕೋಟಿ ಮೊತ್ತದಲ್ಲಿ ರೂ. 88 ಕೋಟಿ ಹಣವನ್ನು ನಿಗಮದ ಅಧ್ಯಕ್ಷರ ಗಮನಕ್ಕೂ ಬಾರದೇ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಂ.ಜಿ ರಸ್ತೆಯ ಶಾಖೆಯ ಅನಧಿಕೃತ ಖಾತೆಗೆ ವರ್ಗಾವಣೆ ಮಾಡಲಾಗಿದೆ ಎಂಬುದು ಆರೋಪವಾಗಿತ್ತು. ಫೆ.26ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಲೆಕ್ಕಾಧಿಕಾರಿಗಳ ಸಹಿ ಪಡೆದು ನಿಗಮದ ಖಾತೆಯಿಂದ ಬೇರೆ ಬೇರೆ ಖಾತೆಗಳಿಗೆ ಹಂತ–ಹಂತವಾಗಿ 187.33 ಕೋಟಿ ರೂ. ವರ್ಗಾವಣೆ ಮಾಡಲಾಗಿತ್ತು. ಈ ಪ್ರಕರಣ ಬಯಲಿಗೆ ಬರುತ್ತಿದ್ದಂತೆ ಕೋಲಾಹಲವೇ ಸೃಷ್ಟಿಯಾಗಿತ್ತು. ಪ್ರಕರಣದಲ್ಲಿ ಸಚಿವರಾಗಿದ್ದ ಬಿ. ನಾಗೇಂದ್ರ ಅವರನ್ನು ಇ.ಡಿ ಬಂಧನಕ್ಕೆ ಒಳಪಡಿಸಿತ್ತು. ಇದಕ್ಕೂ ಮುನ್ನ ನಾಗೇಂದ್ರ ನಿವಾಸ ಮತ್ತು ಶಾಸಕ ಬಸನಗೌಡ ದದ್ದಲ್ ನಿವಾಸ ಸೇರಿದಂತೆ 20 ಕ್ಕೆ ಹೆಚ್ಚು ಸ್ಥಳಗಳಲ್ಲಿ ದಾಳಿ ನಡೆಸಿತ್ತು. ಸತತ ಎರಡು ದಿನಗಳ ಶೋಧ ಕಾರ್ಯದ ಬಳಿಕ ನಾಗೇಂದ್ರ ಅವನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿ ನಂತರದಲ್ಲಿ ಬಂಧನಕ್ಕೆ ಒಳಪಡಿಸಿತ್ತು.

## ಪುಟ್ಟರಾಜಶೆಟ್ಟಿ ನಿಧನ



ಮೈಸೂರು,ಅ.14– ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದ ಪುಟ್ಟರಾಜಶೆಟ್ಟಿ (ಭೈರಪ್ಪ–73) ಸೋಮವಾರ ಹೃದಯಾಘಾತದಿಂದ ನಿಧನರಾದರು. ಪ್ರಗತಿಪರ ರೈತರಾಗಿದ್ದ ಮೃತರು ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸಂಜೆ ಮೃತರ ತೋಟದಲ್ಲಿ ನೆರವೇರಿತು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

### ರಾಜಾಸೀಟ್ ಕಾಮಗಾರಿಯಲ್ಲಿ ಅಕ್ರಮ ಆರೋಪ ಹಿನ್ನೆಲೆ

# ಲೋಕಾಯುಕ್ತ ಅಧಿಕಾರಿಗಳಿಂದ ತನಿಖೆ ಆರಂಭ

ಮಡಿಕೇರಿ, ಅ.14–ನಗರದ ಪ್ರಸಿದ್ಧ ಪ್ರವಾಸಿ ತಾಣ ಗ್ರೇಟರ್ ರಾಜಾಸೀಟ್ ಕಾಮಗಾರಿಯಲ್ಲಿ ಅಕ್ರಮ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಸೋಮವಾರ ಮಡಿಕೇರಿಗೆ ಆಗಮಿಸಿದ ಅಧಿಕಾರಿಗಳು ರಾಜಾಸೀಟ್‌ಗೆ ಭೇಟಿ ನೀಡಿ, ವಿವಿಧ ಕಾಮಗಾರಿ ಪರಿಶೀಲಿಸಿದರು. 2019–20ರಲ್ಲಿ ಸುಮಾರು 4 ಕೋಟಿ 50 ಲಕ್ಷ ರೂ. ವೆಚ್ಚದಲ್ಲಿ ರಾಜಾಸೀಟ್ ಉದ್ಯಾನದಲ್ಲಿ ಕೈಗೊಂಡ ಗ್ರೇಟರ್ ರಾಜಾಸೀಟ್ ಕಾಮಗಾರಿಯಲ್ಲಿ ಅಕ್ರಮ ನಡೆದಿದೆ ಹಾಗೂ ನಕಲಿ ಎಂಬಿ ಪುಸ್ತಕ ಸೃಷ್ಟಿಸಿ ಅವ್ಯವಹಾರ ನಡೆಸಲಾಗಿದೆ ಎಂದು ಅಂದಿನ ಲೋಕೋಪಯೋಗಿ ಇಲಾಖೆ ಜ್ಯೂನಿಯರ್ ಇಂಜಿನಿಯರ್ ಕೆ.ಎಲ್. ದೇವರಾಜ್ ಮತ್ತು ಮೇಲಧಿಕಾರಿಗಳ ವಿರುದ್ಧ ಕಾಂಗ್ರೆಸ್ ಮುಖಂಡ ತೆನ್ನಿರ ಮೈನಾ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.



ಲೋಕಾಯುಕ್ತ ತನಿಖಾಧಿಕಾರಿ ತೇಜಶ್ರೀ ಬಿ.ಮದ್ದೋಡಿ, ಲೋಕೋಪಯೋಗಿ ಅಧಿಕಾರಿಗಳೊಂದಿಗೆ ರಾಜಾಸೀಟ್ ಕಾಮಗಾರಿ ಪರಿಶೀಲಿಸಿದರು.

ಈ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಸಂಸ್ಥೆ ತಾಂತ್ರಿಕ ವಿಭಾಗದ ತನಿಖಾಧಿಕಾರಿ ತೇಜಶ್ರೀ ಬಿ.ಮದ್ದೋಡಿ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿ ದಾಖಲೆ ಪರಿಶೀಲಿಸಿ ಸಂಗ್ರಹಿಸಿದರು. ದೂರುದಾರ ತೆನ್ನಿರ ಮೈನಾ ಮತ್ತು ಲೋಕೋಪಯೋಗಿ ಅಧಿಕಾರಿಗಳೊಂದಿಗೆ ತೇಜಶ್ರೀ, ರಾಜಾಸೀಟ್‌ಗೆ ತೆರಳಿ ಪರಿಶೀಲಿಸಿದರು. 2023ರ ಮಾ.18ರಂದು ಲೋಕಾರ್ಪಣೆ ಆದ ಗ್ರೇಟರ್ ರಾಜಾಸೀಟ್ ಇನ್ನೂ ತೋಟಗಾರಿಕೆ ಇಲಾಖೆಗೆ ಹಸ್ತಾಂತರ ಮಾಡದಿರುವ ಬಗ್ಗೆ ಲೋಕೋಪಯೋಗಿ ಇಂಜಿನಿಯರ್‌ಗಳಿಂದ ವಿವರಣೆ ಪಡೆದರು. ಅಲ್ಲಲ್ಲಿ ಬಿರುಕು ಬಿಟ್ಟ ಕಾಮಗಾರಿ, ಹಾರಿಹೋದ ಹೆಂಚು, ವಿದ್ಯುತ್ ಸಂಪರ್ಕ ಇಲ್ಲದ ಲೈಟ್‌ಗಳು, ಒಡೆದು ಹೋದ ಗ್ರಾನೈಟ್ ಕಲ್ಲುಗಳು ಸೇರಿದಂತೆ ವಿವಿಧ ಕಾಮಗಾರಿಗಳನ್ನು ಲೋಕಾಯುಕ್ತ ಸಿಬ್ಬಂದಿ ಚಿತ್ರೀಕರಿಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ತೆನ್ನಿರ ಮೈನಾ, ಈಗಾಗಲೇ ಕಿರಿಯ ಇಂಜಿನಿಯರ್ ನಕಲಿ ಎಂಬಿ ಪುಸ್ತಕ ಸೃಷ್ಟಿಸಿರುವುದು ಕಂಡು ಬಂದಿದೆ. ಮುಂದೆ ಅಕ್ರಮದ ವಿವರಗಳು ಬಹಿರಂಗವಾಗಿ ತಪ್ಪಿತಸ್ಥರಿಗೆ ಶಿಕ್ಷೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭ ಮಡಿಕೇರಿ ನಗರಸಭೆ ಅಧ್ಯಕ್ಷ ಹೆಚ್.ಎಂ.ನಂದಕುಮಾರ್, ಕಾಮಗಾರಿ ಗುಣಮಟ್ಟದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

# ಹುಲಿ ಸೆರೆಗೆ ಮುಂದುವರೆದ ಕಾರ್ಯಾಚರಣೆ

### ವೆಸ್ಟ್‌ನೆಮ್ಮಲೆ ಗ್ರಾಮದಲ್ಲಿ ಮತ್ತೊಂದು ಬೋನು ಅಳವಡಿಕೆ



ವೆಸ್ಟ್‌ನೆಮ್ಮಲೆ ಗ್ರಾಮದಲ್ಲಿ ಹುಲಿ ಸೆರೆಗೆ ಅರಣ್ಯ ಸಿಬ್ಬಂದಿ, ಕ್ಷಿಪ್ರ ಕಾರ್ಯಪಡೆ, ಕಾಡಾನೆ ಟಾಸ್ಕ್‌ಫೋರ್ಸ್ ತಂಡ ಕಾರ್ಯಾಚರಣೆ ನಡೆಸಿತು.

ಮಡಿಕೇರಿ, ಅ.14–ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವ ಹುಲಿ ಸೆರೆಗೆ ಶ್ರೀಮಂಗಲ ಹೋಬಳಿಯ ವೆಸ್ಟ್‌ನೆಮ್ಮಲೆ ಗ್ರಾಮದಲ್ಲಿ ಸೋಮವಾರವೂ ಕಾರ್ಯಾಚರಣೆ ನಡೆಸಲಾಯಿತು.

ಕಾಡುಹಂದಿಯನ್ನು ಹುಲಿ ಕೊಂದು ಕೆಲ ಭಾಗವನ್ನು ತಿಂದಿರುವುದು ಕೂಂಬಿಂಗ್ ಸಂದರ್ಭ ಪತ್ತೆಯಾಗಿದೆ. ಆದ್ದರಿಂದ ಹುಲಿ ಸುತ್ತಮುತ್ತ ಇರುವ ಸಾಧ್ಯತೆ ಇರುವುದರಿಂದ ಹಂದಿ ಮೇಲೆ ದಾಳಿ ನಡೆಸಿರುವ ಜಾಗದಲ್ಲಿ ಮತ್ತೊಂದು ಬೋನು ಇರಿಸಿ, ಹುಲಿ ಸೆರೆಗೆ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಕಾರ್ಯಾಚರಣೆಗಾಗಿ 60 ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಅಧಿಕಾರಿಗಳು, ಕ್ಷಿಪ್ರ ಕಾರ್ಯಪಡೆ, ಕಾಡಾನೆ ಟಾಸ್ಕ್‌ಫೋರ್ಸ್ ತಂಡವನ್ನು ಬಳಸಿಕೊಳ್ಳಲಾಗಿದೆ. ವೆಸ್ಟ್‌ನೆಮ್ಮಲೆಯ 2 ಕಿಮೀ ವ್ಯಾಪ್ತಿಯಲ್ಲಿ ಹುಲಿಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದ್ದು, ಇದುವರೆಗೆ ಹುಲಿ ಹೆಜ್ಜೆ ಗುರುತು ಪತ್ತೆಯಾಗಿಲ್ಲ. ಮಾನವನ ಮೇಲೆ ಹುಲಿ ದಾಳಿಯಾಗುವ ಸಾಧ್ಯತೆ ಮತ್ತು ಹುಲಿ ರಾಷ್ಟ್ರೀಯ ಪ್ರಾಣಿಯಾಗಿರುವ ಹಿನ್ನೆಲೆಯಲ್ಲಿ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ, ವನ್ಯಜೀವಿ ವಿಭಾಗದ ಪಿಸಿಸಿಎಫ್ ಪುಷ್ಕರ್ ಅವರ ಗಮನ ಸೆಳೆದು ಅರವಳಿಕೆ ನೀಡಿ ಹುಲಿ ಸೆರೆಗೆ ಅನುಮತಿ ಮಂಜೂರು ಮಾಡಿಸಿದ್ದಾರೆ.

ಮಡಿಕೇರಿ ವನ್ಯಜೀವಿ ವಿಭಾಗದ ಡಿಸಿಎಫ್ ನೆಹರು, ವಿರಾಜಪೇಟೆ ಡಿಸಿಎಫ್ ಜಗನ್ನಾಥ್, ಎಸಿಎಫ್ ಗೋಪಾಲ್, ಮಡಿಕೇರಿ ಎಸಿಎಫ್ ಶ್ರೀನಿವಾಸ್ ನಾಯಕ್, ಶ್ರೀಮಂಗಲ ಆರ್‌ಎಫ್‌ಓ ಅರವಿಂದ್, ಪೊನ್ನಂಪೇಟೆ ಆರ್‌ಎಫ್‌ಓ ಶಂಕರ್ ಹಾಗೂ ಅರವಳಿಕೆ ತಜ್ಞ ಡಾ.ಚಿಟ್ಟಿಯಪ್ಪ, ಶಾರ್ಪ್ ಶೂಟರ್ ರಂಜನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ.

ಕಾರ್ಯಾಚರಣೆ ಉಸ್ತುವಾರಿ ವಹಿಸಿರುವ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಮಾಹಿತಿ ನೀಡಿ, ಮತ್ತಿಗೋಡು ಸಾಕಾನೆ ಶಿಬಿರದಿಂದ ಶ್ರೀರಾಮ ಮತ್ತು ಅಜಯ ಎರಡು ಸಾಕಾನೆಗಳನ್ನು ಕಾರ್ಯಾಚರಣೆಗೆ ಕರೆತರಲಾಗಿದೆ. ಆನೆಗಳನ್ನು ಬಳಸಿದರೆ ಕಾಫಿ ತೋಟದ ಬೆಳೆ ನಷ್ಟವಾಗುವ ಕಾರಣದಿಂದ ಸಾಕಾನೆಗಳನ್ನು ಶೋಧ ಕಾರ್ಯಕ್ಕೆ ಬಳಸುತ್ತಿಲ್ಲ. ಆದರೂ ಹುಲಿ ಸುಳಿವು ದೊರೆತರೆ ತಕ್ಷಣ ಆನೆಗಳನ್ನು ಬಳಸಲು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದರು.

ಇದೇ ವೇಳೆ ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ತಾಪಂ ಮಾಜಿ ಸದಸ್ಯ ಪಲ್ವಿನ್ ಪೂಣಚ್ಚ, ಟಿ.ಶೆಟ್ಟಿಗೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ತೀತಿರ ಪ್ರಭು ಸುಬ್ಬಯ್ಯ, ವಿವಿಧ ಸಂಘ–ಸಂಸ್ಥೆ ಪ್ರಮುಖರಾದ ಮಾಣೀರ ವಿಜಯನಂಜಪ್ಪ, ಚೊಟ್ಟೆಯಂಡಮಾಡ ವಿಶು, ಉದಯ, ಕಾಳಿಮಾಡ ಪ್ರಶಾಂತ್, ಅಪ್ಪಚಂಗಡ ಮೋಟಯ್ಯ, ಇಟ್ಟಿರ ಭವಿನ್, ಮಾಣೀರ ಉಮೇಶ್, ಚಂಗುಲಂಡ ಸೂರಜ್, ಪರಮಲೆ ಗಣೇಶ್, ಮಾಣೀರ ಬೆಳ್ಳಿಯಪ್ಪ ಇದ್ದರು.

## ಹುಲಿಗೆ ತೆನೆ ಹಸು ಬಲಿ



ಬಾಳೆಲೆ ದೇವನೂರು ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ಗೋಣಿಕೊಪ್ಪ, ಅ.14–ಬಾಳೆಲೆ ದೇವನೂರು ಗ್ರಾಮದಲ್ಲಿ ಹುಲಿ ದಾಳಿ ನಡೆಸಿ ತೆನೆ ಹಸುವನ್ನು ಕೊಂದುಹಾಕಿದೆ.

ಗ್ರಾಮದ ಕಳ್ಳೇಂಗಡ ಗಣೇಶ್ ಅವರಿಗೆ ಸೇರಿದ ಹಸುವಿನ ಮೇಲೆ ಭಾನುವಾರ ಹುಲಿ ದಾಳಿ ಮಾಡಿ ಕೊಂದುಹಾಕಿದೆ. ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

## ರಕ್ಷಿತಾ, ಗಣೇಶ್‌ಗೆ ಜಯ



ಗಣೇಶ್, ರಕ್ಷಿತಾ

ಪೊನ್ನಂಪೇಟೆ, ಅ.14–ಹಾವೇರಿಯಲ್ಲಿ ನಡೆದ ರಾಜ್ಯ ಮಟ್ಟದ ಚೆಸ್ ಪಂದ್ಯಾಟದಲ್ಲಿ ಇಲ್ಲಿನ ಸಂತಅಂತೋಣಿ ಪ್ರೌಢಶಾಲೆ ವಿದ್ಯಾರ್ಥಿಗಳಾದ ರಕ್ಷಿತಾ ಮತ್ತು ಗಣೇಶ್ ವಿಜೇತರಾಗಿದ್ದಾರೆ.

# ಕೊಡವ ಸಿನಿಮಾದ ಪ್ರೀಮಿಯರ್ ಶೋ

**ವಿರಾಜಪೇಟೆ:** ಸ್ಥಳೀಯ ಸಂಘ–ಸಂಸ್ಥೆಗಳ ಪ್ರಯತ್ನದಿಂದ ಕೊಡವ ಸಿನಿಮಾ ಕೊಡವ ಜನಾಂಗದ ಸಂಸ್ಕೃತಿ, ಆಚಾರ–ವಿಚಾರ, ಪದ್ಧತಿ, ಪರಂಪರೆ ಉಳಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಇಲ್ಲಿನ ಕೊಡವ ಸಮಾಜದ ಸಭಾಂಗಣದಲ್ಲಿ ಸೋಮವಾರ ಪಿ ಮತ್ತು ಜಿ ಕ್ರಿಯೇಷನ್ ನಿರ್ಮಾಣದಡಿ ಕೊಡವ ಸಿನಿಮಾದ ಪ್ರೀಮಿಯರ್ ಶೋಗೆ ಚಾಲನೆ ನೀಡಿ ಮಾತನಾಡಿದ ಅವರು, ಕೊಡವರು ಕಡಿಮೆ ಇದ್ದರೂ ತಮ್ಮದೇ ಸಂಸ್ಕೃತಿ ಉಳಿಸಿಕೊಂಡಿದ್ದಾರೆ. ಅದೇ ರೀತಿ ನಮ್ಮ ಜನಾಂಗದಲ್ಲಿ ಜನರಲ್ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಸದಾ ದೇಶ ರಕ್ಷಣೆ ಮೂಲಕ ವಿಶ್ವದ್ಯಾಂತ ಹೆಸರು ಗಳಿಸಿದ್ದಾರೆ. ಆದ್ದರಿಂದ ಕೊಡವ ಆಚಾರ–ವಿಚಾರವನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ರೂಪಿಸಬೇಕಿದೆ. ಈ ಚಿತ್ರದಲ್ಲಿ ನನಗೂ ಒಂದು ಪಾತ್ರ ನೀಡಿದ್ದು, ಅಭಿನಯ ಸಂತಸ ತಂದಿದೆ. ಈ ಸಿನಿಮಾವನ್ನು ಪ್ರೇಕ್ಷಕರು ಹೆಚ್ಚು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.



ಕೊಡವ ಚಿತ್ರ ನಿರ್ದೇಶಕ ಪ್ರತೀಶ್ ಪೂವಯ್ಯ, ನಿರ್ಮಾಪಕ ಅಚೆಯಡ ಗಗನ್ ಗಣಪತಿ, ಕಲಾವಿದ ಅಲ್ಲಾರಂಡ ವಿಠಲ್ ನಂಜಪ್ಪ, ಮಾಳೇಟಿರ ಶ್ರೀನಿವಾಸ್, ಕ್ಯಾಪ್ಟನ್ ಬಿದ್ದಂಡ ನಾಣಯ್ಯ, ಸೋಮೆಯಂಡ ಬೋಸ್ ಬೆಳ್ಯಪ್ಪ, ಬಿದ್ದಂಡ ಉತ್ತಮ್ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್‌ನಾಚಯ್ಯ ಮಾತನಾಡಿ, ಕೊಡವರ ಜನಸಂಖ್ಯೆ ಕಡಿಮೆಯಾಗುತ್ತಿದೆ. ಕೆಲವರು ಕಿರುಕುಳ ನೀಡುತ್ತಿರುವುದರಿಂದ ಆಸ್ತಿ–ಪಾಸ್ತಿ ಮಾರಿ ಹೋಗುತ್ತಿದ್ದಾರೆ. ಆದ್ದರಿಂದ ಕೊಡವರು ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಕುಂಬೆರ ಮನು ಕುಮಾರ್, ಕೊಡಗು ಪ್ರೆಸ್‌ಕ್ಲಬ್ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ, ಕೊಡವ ಚಿತ್ರ ನಿರ್ಮಾಪಕಿ ಪಟ್ಟಡ ರೀನಾ ಪ್ರಕಾಶ್, ಉದ್ಯಮಿ ಕಾಣತಂಡ ಜಗದೀಶ್ ಮಾತನಾಡಿದರು. ಹಿರಿಯ ಕಲಾವಿದ ಸೋಮೆಯಂಡ ಬೋಸ್ ದೇವಯ್ಯ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಚಿತ್ರ ನಿರ್ದೇಶಕ ಪ್ರತೀಶ್ ಪೂವಯ್ಯ, ನಿರ್ಮಾಪಕ ಅಚೆಯಡ ಗಗನ್ ಗಣಪತಿ, ರಂಗ ಚಾವಡಿಯ ಕಲಾವಿದ ಅಲ್ಲಾರಂಡ ವಿಠಲ್ ನಂಜಪ್ಪ, ವೀಕ್ಷಕ ವಿವರಣೆಗಾರ ಮಾಳೇಟಿರ ಶ್ರೀನಿವಾಸ್, ಕ್ಯಾಪ್ಟನ್ ಬಿದ್ದಂಡ ನಾಣಯ್ಯ, ಸಾಹಿತಿ ಕಲಾವಿದ ಸೋಮೆಯಂಡ ಬೋಸ್ ಬೆಳ್ಯಪ್ಪ, ನಟ ಬಿದ್ದಂಡ ಉತ್ತಮ್ ಅವರನ್ನು ಸನ್ಮಾನಿಸಲಾಯಿತು.

ಚಿತ್ರದ ನಾಯಕ ಮಾಚೇಟಿರ ವಿಕಾಸ್, ನಾಯಕಿ ದೇಷ್ಮಾ ದೇಚಮ್ಮ, ಛಾಯಾಗ್ರಾಹಕ ಪಾಮು, ಕಲಾವಿದರಾದ ಚೇನಂಡ ಗಿರೀಶ್, ಪಟ್ಟಡ ಧನು, ತಾತಂಡ ಪ್ರಭಾನಾಣಯ್ಯ, ತೀತಿರ ಕುಟ್ಟಪ್ಪ, ಜಮ್ಮಡ ಪ್ರೀತ್ ಅಪ್ಪಯ್ಯ, ಮಲ್ಲಮಾಡ ಶ್ಯಾಮಲ, ಮುಂಡಚಾಡಿರ ರೆನ್ನಿಭಾರತ್, ಕಾಣತಂಡ ಬೀನಾ, ಪಳೆಯಂಡ ಸುಚಿತ ಸುಬ್ಬಯ್ಯ, ಅಂಡಮಾಡ ಸಾವನ್ ಅಯ್ಯಪ್ಪ, ಮಾ.ಲೆರಾಯಿ ಪೂಣಚ್ಚ ಉಪಸ್ಥಿತರಿದ್ದರು.

## ಕೃತಿಕಾ ದೇವಯ್ಯ ಭಾರತೀಯ ಸೇನೆ ಕ್ಯಾಪ್ಟನ್



**ಮಡಿಕೇರಿ:** ಭಾರತೀಯ ಸೇನೆಯಲ್ಲಿ ಕ್ಯಾಪ್ಟನ್ ಆಗಿ ಕೊಡಗಿನ ಕಕ್ಕಬೆಯ ಅರೆಯಡ ಕೃತಿಕಾ ದೇವಯ್ಯ ಪದೋನ್ನತಿ ಹೊಂದಿದ್ದಾರೆ. ಕೃತಿಕ ದೇವಯ್ಯ ಭಾರತೀಯ ಸೇನೆಯ ಆಫೀಸರ್ಸ್ ನೇಮಕಾತಿ ಪರೀಕ್ಷೆಯಲ್ಲಿ ಎರಡನೇ ರ್‍ಯಾಂಕ್ ಗಳಿಸಿದ್ದಾರೆ. ಈಕೆ ಶ್ರೀರಾಮ ಟ್ರಸ್ಟ್ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ಬಳಿಕ ಬೆಂಗಳೂರಿನ ಆರ್‌ವಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪೂರೈಸಿದ್ದರು.

ಕೃತಿಕಾ ದೇವಯ್ಯ 2018ರಲ್ಲಿ ಗಣರಾಜ್ಯೋತ್ಸವ ಸಮಾರಂಭದ ಎನ್‌ಸಿಸಿ ಪರೇಡ್‌ನಲ್ಲಿ ಭಾಗವಹಿಸಿದ್ದರು. ವಿಯೆಟ್ನಾಂನಲ್ಲಿ ನಡೆದ ಎನ್‌ಸಿಸಿ ಯುವ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ ಕೃತಿಕಾ ಕಕ್ಕಬೆಯ ಯವಕಪಾಡಿ ಗ್ರಾಮದ ಅರೆಯಡ ಜೀವನ್ ದೇವಯ್ಯ ಮತ್ತು ಬಬಿತಾ ದಂಪತಿ ಪುತ್ರಿಯಾಗಿದ್ದಾರೆ.

## ಶಿಕ್ಷಣ ಸಿಂಧು ಪ್ರಶಸ್ತಿಗೆ ಸುಷ್ಮಾ ಆಯ್ಕೆ



**ಸಿದ್ದಾಪುರ:** ಬೆಂಗಳೂರಿನ ಸೂರ್ಯ ಫೌಂಡೇಷನ್, ಸ್ಪಾರ್ಕ್ ಅಕಾಡೆಮಿ ಮತ್ತು ಮೈಸೂರಿನ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ ಸಹಯೋಗದಲ್ಲಿ ನೀಡಲಾಗುವ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಶಿಕ್ಷಣ ಸಿಂಧು ಪ್ರಶಸ್ತಿಗೆ ವಿರಾಜಪೇಟೆ ತಾಲೂಕಿನ ಚನ್ನಂಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಕೆ.ಕೆ.ಸುಷ್ಮಾ ಭಾಜನರಾಗಿದ್ದಾರೆ.

ಸುಷ್ಮಾ ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಪ್ರಗತಿಗೆ ಶಾಲಾ ಹಂತದಲ್ಲಿ ಕೈಗೊಂಡ ವಿಶಿಷ್ಟ ಕಾರ್ಯಕ್ರಮ ಸಾಧನೆಗಳನ್ನು ಗುರುತಿಸಿ 2024–25ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

# ಕಾಂತರಾಜು ವರದಿ ಜಾರಿಗೆ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಮಂಗಲ ಶಿವಕುಮಾರ್ ಮಾತನಾಡಿದರು.

ಚಾಮರಾಜನಗರ, ಅ.14– ಹಿಂದುಳಿದ ವರ್ಗಗಳ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ತಿಳಿಯಲು ನಡೆಸಿದ ಕಾಂತರಾಜು ವರದಿಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಮಂಗಲ ಶಿವಕುಮಾರ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ವೇಳೆ ಕಾಂತರಾಜು ಆಯೋಗ ರಚಿಸಿದ್ದರು. ಈಗಾಗಲೇ ವರದಿ ಸರ್ಕಾರದ ಕೈ ಸೇರಿದ್ದು, ಹಿಂದುಳಿದ ವರ್ಗಗಳ ನಾಯಕರಾಗಿರುವ ಸಿದ್ದರಾಮಯ್ಯ ಕೂಡಲೇ ವರದಿ ಜಾರಿಗೊಳಿಸಬೇಕು. ಆ ಮೂಲಕ ಹಿಂದುಳಿದ ವರ್ಗಗಳಿಗೆ ನ್ಯಾಯ ಒದಗಿಸಬೇಕು ಎಂದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ವರ್ಷ ಕಳೆದರೂ ವರದಿ ಜಾರಿ ಮಾಡದಿರುವುದು ಸರಿಯಲ್ಲ. ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ವರದಿ ಜಾರಿಗೊಳಿಸಬೇಕು. ಸ್ವಾತಂತ್ರ್ಯ ಪೂರ್ವ ಹಾಗೂ ನಂತರ ಹಿಂದುಳಿದ ವರ್ಗಗಳ ಹಣೆಪಟ್ಟಿ ಹೋಗಲಾಡಿಸಲು ಸಾಧ್ಯವಾಗಿಲ್ಲ. ಹಿಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಿಂದುಳಿದ ವರ್ಗಗಳ ಧ್ವನಿಯಾಗಿದ್ದರು. ನಂತರ ಡಿ.ದೇವರಾಜ ಅರಸು ಹಿಂದುಳಿದವರ ಅಭಿವೃದ್ಧಿಗೆ ಮುಂದಾಗಿದ್ದರು. ಹಾಗಾಗಿ ಇಂದಿಗೂ ಅವರು ಹಿಂದುಳಿದ ವರ್ಗಗಳ ನಾಯಕರೆಂದು ಜನರ ಮನಸ್ಸಿನಲ್ಲಿ ಉಳಿದಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾದ ನಟರಾಜೇಗೌಡ, ರಾಮಶೆಟ್ಟಿ, ಉಪಾಧ್ಯಕ್ಷ ವೆಂಕಟರಾಜು, ಅರಸ ಶೆಟ್ಟಿ, ಲಕ್ಷ್ಮಣ್, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಸುರೇಶ್ ಹಾಜರಿದ್ದರು.

# ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಬೈಕ್ ರ್‍ಯಾಲಿ

### ● ಕೊಳ್ಳೇಗಾಲದಿಂದ ಚಾಮರಾಜನಗರದವರೆಗೆ ಜಾಥಾ ● ಭುವನೇಶ್ವರಿ ವೃತ್ತದಲ್ಲಿ ಸರಪಳಿ

ಚಾಮರಾಜನಗರ, ಅ.14–ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿ ಹೋರಾಟ ಸಮಿತಿಗಳ ಒಕ್ಕೂಟದ ವತಿಯಿಂದ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಸೋಮವಾರ ಕೊಳ್ಳೇಗಾಲದಿಂದ ಚಾಮರಾಜನಗರವರೆಗೆ ಬೃಹತ್ ಬೈಕ್ ರ್‍ಯಾಲಿ ನಡೆಸಲಾಯಿತು.

ಕೊಳ್ಳೇಗಾಲದಿಂದ ಆರಂಭಗೊಂಡ ಬೈಕ್ ರ್‍ಯಾಲಿ ಯಳಂದೂರು, ಸಂತೇಮರಹಳ್ಳಿ ಮಾರ್ಗವಾಗಿ ನಗರದ ಭುವನೇಶ್ವರಿ ವೃತ್ತಕ್ಕೆ ತಲುಪಿತು. ನಂತರ ವೃತ್ತದಲ್ಲಿ ಕೆಲಕಾಲ ಸರಪಳಿ ರಚಿಸಿ, ಜಿಲ್ಲಾಡಳಿತ ಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಒಳಮೀಸಲಾತಿ ಪರ ಘೋಷಣೆ ಕೂಗಿದರು. ಬಳಿಕ ತಹಸೀಲ್ದಾರ್ ಗಿರಿಜಾ ಅವರಿಗೆ ಮನವಿ ಸಲ್ಲಿಸಿದರು.



ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕೊಳ್ಳೇಗಾಲದಿಂದ ಚಾಮರಾಜನಗರದವರೆಗೆ ಬೃಹತ್ ಬೈಕ್ ರ್‍ಯಾಲಿ ನಡೆಸಿದರು.

ಬೈಕ್ ರ್‍ಯಾಲಿ ನೇತೃತ್ವ ವಹಿಸಿದ್ದ ಪರಿಶಿಷ್ಟ ಜಾತಿಗಳ ಮೀಸಲಾತಿ ಜಾರಿ ಹೋರಾಟ ಸಮಿತಿಗಳ ಒಕ್ಕೂಟದ ಕಾನೂನು ಸಲಹೆಗಾರ ವಕೀಲ ಬೂದಿತಿಟ್ಟು ರಾಜೇಂದ್ರ ಮಾತನಾಡಿ, ಒಳಮೀಸಲಾತಿ ಜಾರಿಗೊಳಿಸಲು ಆಯಾ ರಾಜ್ಯಗಳ ಪರಮಾಧಿಕಾರವಿದೆ ಎಂದು ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಅದರಂತೆ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೊಳಿಸಬೇಕು. ಪರಿಶಿಷ್ಟ ಸಮುದಾಯ 30 ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಡುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ದ್ವಂದ್ವ ನೀತಿ ತಾಳದೆ ಕೂಡಲೇ ಸಚಿವ ಸಂಪುಟದಲ್ಲಿ ನ್ಯಾಯಮೂರ್ತಿ ಎಜೆಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ 34,863 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿದ್ದಾರೆ. ಯಾವುದೇ ಕಾರಣಕ್ಕೂ ಸರ್ಕಾರ ಒಳಮೀಸಲಾತಿ ಜಾರಿ ಮಾಡುವ ತನಕ ನೇಮಕಾತಿ ಮಾಡಬಾರದು. ಒಂದು ವೇಳೆ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿ ಮಾಡದಿದ್ದರೆ ಕರ್ನಾಟಕ ಬಂದ್ ಮಾಡುವುದಾಗಿ ಎಚ್ಚರಿಸಿದರು.

ಮುಖಂಡರಾದ ಅರಕಲವಾಡಿ ನಾಗೇಂದ್ರ, ಎಸ್.ಅರುಣ್ ಕುಮಾರ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಸ್ವಾತಂತ್ರ್ಯಪೂರ್ವದಿಂದಲೂ ಸಮುದಾಯವನ್ನು ಶೋಷಣೆ ಮಾಡಿಕೊಂಡು ಬಂದಿದೆ. ಸುಪ್ರೀಂಕೋರ್ಟ್ ತೀರ್ಪಿನಂತೆ ಸರ್ಕಾರ ಒಳಮೀಸಲಾತಿ ಜಾರಿಗೊಳಿಸಲಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್ ಕೇಳಬೇಕು ಎಂದು ಹೇಳುವ ಮೂಲಕ ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಾರೆ. ಅ.18ರೊಳಗೆ ಒಳಮೀಸಲಾತಿ ಜಾರಿಗೊಳಿಸದಿದ್ದರೆ ಸಿಎಂ ವಿರುದ್ಧ ನ್ಯಾಯಾಲಯ ಆದೇಶ ಉಲ್ಲಂಘನೆ ಆರೋಪದಡಿ ಮೊಕದ್ದಮೆ ಹೂಡುವುದಾಗಿ ಎಚ್ಚರಿಸಿದರು. ರ್‍ಯಾಲಿಯಲ್ಲಿ ಒಳಮೀಸಲಾತಿ ಹೋರಾಟದ ಮುಖಂಡರಾದ ಪಿ.ಶಿವಮಲ್ಲು, ಮೂಡಹಳ್ಳಿ ಮೂರ್ತಿ, ರಾಚಪ್ಪ, ಮಾಧು, ಬಾಲು, ಶಿವಕುಮಾರ್, ಬಸವರಾಜು ದ್ವಾರ್ಕಿ, ದೇವರಾಜು ಇತರರು ಭಾಗವಹಿಸಿದ್ದರು.

# ದೀಕ್ಷಾ ಭೂಮಿ ಯಾತ್ರಾ ಬಸ್‌ಗೆ ಚಾಲನೆ

ಕೊಳ್ಳೇಗಾಲ, ಅ.14–ಕೊಳ್ಳೇಗಾಲದಿಂದ ಮಹಾರಾಷ್ಟ್ರದ ನಾಗಪುರ ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾ ಭೂಮಿಗೆ ತೆರಳಿದ 9 ಯಾತ್ರಾ ಬಸ್‌ಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಕೊಳ್ಳೇಗಾಲದಿಂದ 200ಕ್ಕೂ ಜನ ದೀಕ್ಷಾ ಭೂಮಿಗೆ ತೆರಳುತ್ತಿದ್ದಾರೆ. ಯಾತ್ರೆಗೆ ತೆರಳಿದ ಎಲ್ಲರೂ ಬಾಬಾ ಸಾಹೇಬರ್ ಅವರ ಗಟ್ಟಿ ನಿಲುವನ್ನು ಉಳಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ತತ್ವ ಸಿದ್ಧಾಂತವನ್ನು ಅರಿಯಬೇಕು ಎಂದರು.





ಅಂಬೇಡ್ಕರ್ ದೀಕ್ಷಾ ಭೂಮಿಗೆ ತೆರಳಿದ ಯಾತ್ರಾ ಬಸ್‌ಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಈ ವೇಳೆ ಅಂಬೇಡ್ಕರ್ ಪ್ರತಿಮೆ ನಿರ್ಮಾತೃ ಓಲೆ ಮಹದೇವ, ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎ.ಪಿ.ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಬಸ್ತಿಪುರ ರವಿ, ರಾಘವೇಂದ್ರ, ಮಂಜುನಾಥ್, ಬಸ್ತಿಪುರ ಶಾಂತು, ರಮೇಶ್ ಇನ್ನಿತರಿದ್ದರು.

# ಅ.17ರಂದು ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಚಾಮರಾಜನಗರ, ಅ.14– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯನ್ನು ಅ.17ರಂದು ಬೆಳಗ್ಗೆ 10 ಗಂಟೆಗೆ ನಗರದ ವರನಟ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.



ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮತ್ತಿತರರು ಭಾಗವಹಿಸಲಿದ್ದಾರೆ.

ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಪ್ರಾಂಶುಪಾಲ ಬಂಗಾರ ನಾಯಕ ಅವರು ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ನಾಳೆ ಚಾಮರಾಜನಗರದಲ್ಲಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಚಾಮರಾಜನಗರ, ಅ.14–ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಸ್ವತಂತ್ರ ಮೈಕ್ರೋ ಫೈನಾನ್ಸ್ ಮತ್ತು ಅದಾನಿ ಕ್ಯಾಪಿಟಲ್ ಸಹಯೋಗದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಅ.16ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ನೇರ ಸಂದರ್ಶನವನ್ನು ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನಡೆಯಲಿದೆ.

ಚಾಮರಾಜನಗರದ ಸ್ವತಂತ್ರ ಮೈಕ್ರೋ ಫೈನಾನ್ಸ್ ಸಂಸ್ಥೆಯಲ್ಲಿ 25 ಫೀಲ್ಡ್ ಆಫೀಸರ್ ಹುದ್ದೆಗಳಿಗಾಗಿ ಎಸ್‌ಎಸ್‌ಎಲ್‌ಸಿಯಿಂದ ಪದವಿ ವಿದ್ಯಾರ್ಹತೆ ಹೊಂದಿರುವ 18 ರಿಂದ 30ರ ವಯೋಮಿತಿಯ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಮತ್ತು ಅದಾನಿ ಕ್ಯಾಪಿಟಲ್ ಸಂಸ್ಥೆಯಲ್ಲಿ 5 ಫೀಲ್ಡ್ ಆಫೀಸರ್ ಹುದ್ದೆಗಳಿಗೆ ಪಿಯುಸಿ ವಿದ್ಯಾರ್ಹತೆ ಹೊಂದಿರುವ 18 ರಿಂದ 30ರ ವಯೋಮಿತಿಯ ಪುರುಷ ಅಭ್ಯರ್ಥಿಗಳು ಮಾತ್ರ ಸಂದರ್ಶನದಲ್ಲಿ ಭಾಗವಹಿಸಬಹುದು.

ಆಸಕ್ತ ಅಭ್ಯರ್ಥಿಗಳು ಸ್ವವಿವರ ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ದೂರವಾಣಿ ಸಂಖ್ಯೆ 08226–224430 ಅನ್ನು ಸಂಪರ್ಕಿಸಬಹುದು.

## ತಾಲೂಕು ಭೂ ನ್ಯಾಯ ಮಂಡಳಿ ಸದಸ್ಯರಾಗಿ ಗುರುರಾಜ್ ನೇಮಕ



ಯಳಂದೂರು, ಅ.14– ತಾಲೂಕು ಭೂ ನ್ಯಾಯ ಮಂಡಳಿ ಸದಸ್ಯರಾಗಿ ಕೆಸ್ತೂರು ಗ್ರಾಮದ ಕೆ.ಆರ್.ಗುರುರಾಜ್ ಸೇರಿದಂತೆ ನಾಲ್ವರನ್ನು ನೇಮಕಗೊಳಿಸಲಾಗಿದೆ.

## ಡಾ. ಇಳಯರಾಜ ಅವರಿಗೆ ಸನ್ಮಾನ...



ಯುವ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ಪ್ರಸಿದ್ಧ ಸಂಗೀತ ಗಾಯಕ ಡಾ. ಇಳಯರಾಜ ಅವರನ್ನು ಯುವ ದಸರಾ ಉಪ ಸಮಿತಿ ಸದಸ್ಯ ಕೊಳ್ಳೇಗಾಲ ಜಿ.ಮೂರ್ತಿ ಮುಡಿಗುಂಡ ಸನ್ಮಾನಿಸಿದರು.

## ಶಂಕರ ಬಿದರಿಗೆ ಶಾಸಕ ಗಣೇಶ್‌ಪ್ರಸಾದ್ ಸ್ವಾಗತ...



ಗುಂಡ್ಲುಪೇಟೆಗೆ ಭೇಟಿ ನೀಡಿದ ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಅವರನ್ನು ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಸನ್ಮಾನಿಸಿದರು. ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಮುಖಂಡರಾದ ನಂಜಪ್ಪ, ಮಹೇಶ್, ಕಮರಹಳ್ಳಿ ರವಿ, ನಾಗೇಂದ್ರ ಇತರರು ಇದ್ದರು.

ಮೈಸೂರು ಮಿತ್ರ



ಕೇರಳ ಕಂಪನಿಗಳಿಂದ ಶುಂಠಿ ಕಟಾವಿಗೆ ಕಡಿಮೆ ಕೂಲಿ

# ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದಿಂದ ಪ್ರತಿಭಟನೆ



ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಅ.14– ಶುಂಠಿ ಕಟಾವು ಮಾಡಲು ಕೇರಳ ಮೂಲದ ಶುಂಠಿ ಕಂಪನಿಗಳು ಕಡಿಮೆ ಕೂಲಿ ನೀಡುತ್ತಿದ್ದಾರೆ ಎಂದು ಆರೋಪಿಸಿ ಹೆಚ್.ಡಿ.ಕೋಟೆ, ಸರಗೂರು, ಹುಣಸೂರು ಮತ್ತು ಪಿರಿಯಾಪಟ್ಟಣದ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಸದಸ್ಯರು ಶುಂಠಿ ಕಟಾವು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನ ಬೊಪ್ಪನಹಳ್ಳಿ ಬಳಿಯ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಕಚೇರಿ ಎದುರು ನೂರಾರು ವಾಹನಗಳಲ್ಲಿ ಆಗಮಿಸಿದ ಸಾವಿರಾರು ಕೂಲಿ ಕಾರ್ಮಿಕರು ಜಮಾಯಿಸಿ ಶುಂಠಿ ಕಟಾವು ಮಾಡುವುದಿಲ್ಲ ಎಂದು ಪ್ರತಿಭಟಿಸಿದರು.

ಸಂಘದ ಅಧ್ಯಕ್ಷ ಮಗ್ಗೆ ಸುಂದ್ರ ಮಾತನಾಡಿ, ಕೇರಳ ಮೂಲದ ಶುಂಠಿ ಖರೀದಿಸುವ ಕಂಪನಿಗಳು ಈ ಹಿಂದೆ ನಮ್ಮ ಸಂಘದ 5000ಕ್ಕೂ ಹೆಚ್ಚಿನ ಕೂಲಿ ಕಾರ್ಮಿಕರಿಂದ ಶುಂಠಿ ಕಟಾವು ಮಾಡಿಸಿ 60 ಕೆಜಿ ತೂಕದ ಒಂದು ಚೀಲಕ್ಕೆ 275 ರೂ. ನೀಡುತ್ತಿದ್ದರು. ನಂತರ ಕ್ರಮೇಣ ಕಟಾವು ಹಣವನ್ನು ಕಡಿಮೆ ಮಾಡುತ್ತಾ ಬಂದಿದ್ದು, ಒಂದು ಚೀಲಕ್ಕೆ 175 ರೂ.ಗಳನ್ನು ನೀಡುತ್ತಿದ್ದರು. ಸಂಘದ ಕೂಲಿ ಕಾರ್ಮಿಕರು ವಿಧಿ ಇಲ್ಲದೇ ಜೀವನ ನಿರ್ವಹಣೆಗಾಗಿ ಅವರು ನೀಡಿದ ಬೆಲೆಗೆ ಶುಂಠಿ ಕಟಾವು ಮಾಡುತ್ತಿದ್ದರು. ಆದರೀಗ 175 ರಿಂದ 150 ರೂ.ಗಳಿಗೆ ಇಳಿಸಿರುವುದರಿಂದ ಕಾರ್ಮಿಕರು ಶುಂಠಿ ಕಟಾವಿಗೆ ತೆರಳದೆ ಪ್ರತಿಭಟನೆಗೆ ಮುಂದಾಗಿದ್ದಾರೆ ಎಂದು. ಕೇರಳ ಮೂಲದ ಶುಂಠಿ ಕಂಪನಿಗಳಿಗೆ ಬಿಸಿ ಮುಟ್ಟಿಸುವವರೆಗೂ ನಾವು ಕಟಾವು ಮಾಡಲು ಜಮೀನಿಗೆ ತೆರಳುವುದಿಲ್ಲ ಎಂದರು.

**ಅಸ್ಸಾಂ ಕಾರ್ಮಿಕರ ಲಗ್ಗೆ:** ಶುಂಠಿ ಕಟಾವು ಮಾಡಲು ಅಸ್ಸಾಂ ಮೂಲದ ಕೂಲಿ ಕಾರ್ಮಿಕರು ಕರ್ನಾಟಕಕ್ಕೆ ಲಗ್ಗೆ ಇಟ್ಟ ಹಿನ್ನೆಲೆಯಲ್ಲಿ ಇಂದು ನಮ್ಮ ಕಾರ್ಮಿಕರನ್ನು ಕೇರಳ ಮೂಲದ ಶುಂಠಿ ಕಂಪನಿಗಳು ನಿರ್ಲಕ್ಷಿಸಿವೆ. ಸ್ಥಳೀಯ ಕೂಲಿ ಕಾರ್ಮಿಕರನ್ನು ಪರಿಗಣಿಸದ ಕೇರಳ ಮೂಲದ ಶುಂಠಿ ಕಂಪನಿಗಳಿಗೆ ನಮ್ಮ ರೈತರು ಶುಂಠಿ ಮಾರಬಾರದು ಎಂದು ಒತ್ತಾಯಿಸಿದ ಅವರು, ಅಸ್ಸಾಂ ಮೂಲದ ಕೂಲಿ ಕಾರ್ಮಿಕರು ಕೇವಲ 150 ರೂ.ಗಳಿಗೆ ಒಂದು ಚೀಲ ಕಟಾವು ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ಕಾರ್ಮಿಕರಿಗೆ ತೊಂದರೆ ಉಂಟಾಗಿದೆ ಎಂದು ತಿಳಿಸಿದರು.

ಶಾಸಕ ಅನಿಲ್ ಅವರು ಮಧ್ಯಪ್ರವೇಶಿಸಿ ತಾಲೂಕಿನ ಶುಂಠಿ ಕಾರ್ಮಿಕರಿಗೆ ಆಗಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಮೂಲಕ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ನಾಗರಾಜು, ಉಪಾಧ್ಯಕ್ಷ ರಾಮಕೃಷ್ಣ, ಬೆಟ್ಟನಾಯಕ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸಹ ಕಾರ್ಯದರ್ಶಿ ಸೋಮೇಶ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಮರಿಸಿದ್ದಯ್ಯ, ನಿರ್ದೇಶಕರಾಗಿ ರಾಜು, ಬೆಟ್ಟನಾಯಕ, ಮಹದೇವನಾಯಕ ತೇಜಕುಮಾರ್, ಪ್ರವೀಣ್, ಕುಮಾರ್, ಬೆಟ್ಟನಾಯಕ, ಚಿಕ್ಕಣ್ಣ, ದುಂಡರಾಜು, ಗೋವಿಂದರಾಜು ಇದ್ದರು.

# ಬೌದ್ಧ ಧರ್ಮದ ಪುನರುತ್ಥಾನಕ್ಕೆ ಅಂಬೇಡ್ಕರ್ ಬುನಾದಿ

ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ಬಣ್ಣನೆ



ತಿ.ನರಸೀಪುರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಧಮ್ಮ ದೀಕ್ಷೋತ್ಸವ ಆಚರಣಾ ಕಾರ್ಯಕ್ರಮ ನಡೆಯಿತು.

ತಿ.ನರಸೀಪುರ, ಅ.14– ಬೌದ್ಧ ಧರ್ಮ ಸ್ವೀಕರಿಸಿದ ಅಂಬೇಡ್ಕರ್ ಅವರು ಧರ್ಮದ ಪುನರುತ್ಥಾನಕ್ಕೆ ಬುನಾದಿ ಹಾಕಿದರು ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ಬಣ್ಣಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸೋಮವಾರ ನಡೆದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಧಮ್ಮ ದೀಕ್ಷೋತ್ಸವ ಆಚರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶೋಷಿತರು ಮತ್ತು ಹಿಂದುಳಿದ ವರ್ಗಗಳು ಜಾಗೃತರಾಗಿ ದೇಶದ ಮೂಲ ಧರ್ಮವಾದ ಬೌದ್ಧ ಧರ್ಮದ ಪಾಲನೆ ಹಾಗೂ ಬುದ್ಧನ ಕಡೆಗೆ ನಡೆಯಲು ಚಿಂತನೆ ಮಾಡುವಂತೆ ಕರೆ ನೀಡಿದರು. ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ ಮಾತನಾಡಿ, ಅಂಬೇಡ್ಕರ್ ಅವರನ್ನು ಗೌರವಿಸುವ ಪ್ರತಿಯೊಬ್ಬರೂ ಸಮಾನತೆ ಮತ್ತು ಕರುಣೆ ಸಂದೇಶವಿರುವ ಬೌದ್ಧ ಧರ್ಮವನ್ನು ಅನುಸರಿಸಿ ಬುದ್ಧ ಮಾರ್ಗದಲ್ಲಿ ನಡೆಯಬೇಕು ಎಂದ ಅವರು ಪ್ರಪಂಚದ ಎಲ್ಲಾ ಧರ್ಮಗಳನ್ನು ಅಧ್ಯಯನ ಮಾಡಿ ಭರತ ಖಂಡದ ಮೂಲ ಧರ್ಮ ಬುದ್ಧನ ಧಮ್ಮವನ್ನು ಅಂಬೇಡ್ಕರ್ ಸ್ವೀಕರಿಸಿದರು. ಅಂಬೇಡ್ಕರ್ ಅವರನ್ನು ಪ್ರೀತಿಸುವ, ಗೌರವಿಸುವ ನಾವು ಬುದ್ಧನ ಮಾರ್ಗವನ್ನು ಅನುಸರಿಸುವಲ್ಲಿ ಹಾಗೂ ಬೌದ್ಧ ಧರ್ಮ ಆಚರಣೆ ಮಾಡುವಲ್ಲಿ ಭಿನ್ನತೆ ತೋರಿಸುತ್ತೇವೆ. ಉತ್ತಮ ತತ್ವಗಳು, ಸಂದೇಶಗಳನ್ನು ನೀಡಿರುವ ಬುದ್ಧರ ಮಾರ್ಗದಲ್ಲಿ ನಡೆಯುವುದನ್ನು ಅನುಸರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನಳಂದ ಬುದ್ಧ ವಿಹಾರದ ಭಂತೆ ಬೋಧಿರತ್ನ ಆಶೀರ್ವಚನ ನೀಡಿದರು. ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಸೋಸಲೆ ಮಹದೇವಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಹಾಗೂ ಕೋಮಲಾಕ್ಷಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನಾ, ತಾಲೂಕು ಕಚೇರಿ ಎದುರಿನ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಅಖಿಲ ಭಾರತ ಜನಜಾಗೃತಿ ವೇದಿಕೆ ಸಂಚಾಲಕ ಕೆ.ಎನ್.ಪ್ರಭುಸ್ವಾಮಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ಬಾಬೂಜಿ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್, ಟಿಎಪಿಸಿಎಂಎಸ್ ನಿರ್ದೇಶಕ ಎಂ.ಎಸ್.ಬಸವರಾಜು, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ತೊಟ್ಟವಾಡಿ ಅನಿಲ್ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಮಹೇಶ್, ದಸಂಸ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ್, ಬನ್ನಹಳ್ಳಿ ಸೋಮಣ್ಣ, ಯರಗನಹಳ್ಳಿ ಸುರೇಶ್, ಕುಕ್ಕೂರು ರಾಜು, ಮುಖಂಡರಾದ ಪ್ರಸನ್ನ, ಎಸ್. ನಂಜುಂಡಯ್ಯ, ಎ.ಶಿವಕುಮಾರ್ (ಬಡ್ಡು), ತಾಯೂರು ಸಾಗರ್, ಮಹದೇವಮ್ಮ ಗಣೇಶ್ ಮೂರ್ತಿ, ಕಲಿಯೂರು ಶಿವಣ್ಣ, ಕನ್ನಳ್ಳಿ, ಶಿವಕುಮಾರ್, ಕೆಂಚಪ್ಪ, ದೊಡ್ಡಪುರ ಲಕ್ಷ್ಮಣ, ಕಿರಗಸೂರು ಚಂದ್ರಮ್ಮ, ಕೆಬ್ಬೆಹುಂಡಿ ನಿಂಗರಾಜು, ಬೆನಕನಹಳ್ಳಿ ಗಂಗಾಧರ್, ನಿಲಸೋಗೆ ಬಸವರಾಜು, ರಾಜಮ್ಮ, ಕುಪ್ಯ ಗವಿಸಿದ್ದಯ್ಯ, ಬನ್ನಹಳ್ಳಿ ಪುಟ್ಟಸ್ವಾಮಿ, ಮಂಜುನಾಥ್ ಹಾಜರಿದ್ದರು.

# ಡೈರಿ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ



ಡೈರಿ ಕಟ್ಟಡ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಅ.14– ತಾಲೂಕಿನ ಎಮ್ಮೆಕೊಪ್ಪಲು ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ನಂತರ ಮಾತನಾಡಿದ ಅವರು, ತಾಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದ ಅವರು ಡೈರಿ ಕಟ್ಟಡ ಕಾಮಗಾರಿಗೆ ವೈಯಕ್ತಿಕವಾಗಿ ಸಹಾಯ ಮಾಡುವುದಾಗಿ ತಿಳಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಕೆಂಪನಹಳ್ಳಿ ಕುಮಾರ್, ಸತ್ಯನಾರಾಯಣ ಸೇರಿದಂತೆ ಗ್ರಾಮದ ಯಜಮಾನರು ಹಾಜರಿದ್ದರು.

# ಬೈಲಕುಪ್ಪೆ ಠಾಣೆಯಲ್ಲಿ ಸೀಮಂತ ಕಾರ್ಯಕ್ರಮ

ಬೈಲಕುಪ್ಪೆ ಠಾಣೆಯಲ್ಲಿ ಸೀಮಂತ ಕಾರ್ಯ ನೆರವೇರಿತು.



ಬೈಲಕುಪ್ಪೆ, ಅ.14– ಮಹಿಳಾ ಪೊಲೀಸರೆಂದರೆ ಮೂಗು ಮುರಿಯುವ ಸಂದರ್ಭ ತಮ್ಮ ಠಾಣೆಯ ಮಹಿಳಾ ಪೇದೆಯ ಸೀಮಂತ ಕಾರ್ಯ ನೆರವೇರಿಸುವ ಮೂಲಕ ಬೈಲಕುಪ್ಪೆ ಠಾಣೆ ಅಧಿಕಾರಿಗಳು, ಸಹೋದ್ಯೋಗಿಗಳು ಸಂಭ್ರಮಿಸಿದರು.

ಬೈಲಕುಪ್ಪೆ ಪೊಲೀಸ್ ಠಾಣೆ ಮಹಿಳಾ ಸಿಬ್ಬಂದಿ ಸುನೀತಾ ತುಂಬು ಗರ್ಭಿಣಿಯಾಗಿದ್ದು, ಇವರಿಗೆ ಸೀಮಂತ ಕಾರ್ಯವನ್ನು ಠಾಣೆಯಲ್ಲೇ ಮಾಡುವ ನಿರ್ಧಾರವನ್ನು ಇತರೆ ಮಹಿಳಾ ಪೊಲೀಸ್ ಸಿಬ್ಬಂದಿ ಕೈಗೊಂಡಿದ್ದರು. ಇದರ ನೇತೃತ್ವವನ್ನು ಠಾಣೆ ಇನ್ಸ್‌ಪೆಕ್ಟರ್ ಅಜಯ್ ಕುಮಾರ್ ವಹಿಸಿದ್ದರು. ಈ ಹಿನ್ನೆಲೆಯಲ್ಲಿ ಸುನೀತಾ ಅವರ ಸೀಮಂತ ಕಾರ್ಯ ಪೊಲೀಸ್ ಠಾಣೆಯಲ್ಲಿ ಸಂಭ್ರಮ ಸಡಗರದಿಂದ ನೆರವೇರಿತು. ಸದಾ ಜಂಜಾಟದಲ್ಲೇ ಮುಳುಗಿರುವ ಪೊಲೀಸರು ತಮ್ಮ ಠಾಣೆಯಲ್ಲಿ ಸೀಮಂತ ಕಾರ್ಯ ನಡೆಸಿಕೊಟ್ಟಿದ್ದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಠಾಣೆ ಸಭಾಂಗಣದಲ್ಲಿ ಪೇದೆ ಸುನೀತಾ ಅವರಿಗೆ ಮಹಿಳಾ ಸಹೋದ್ಯೋಗಿಗಳು ಒಟ್ಟಾಗಿ ಸೇರಿ ಅರಿಶಿನ ಕುಂಕುಮ ಹಚ್ಚಿ, ಹಸಿರುಬಳೆ ತೊಡಿಸಿದರು. ರೇಷ್ಮೆ ಸೀರೆ, ಅಕ್ಕಿ, ಫಲ ತಾಂಬೂಲ ಸಹಿತ ಉಡಿ ತುಂಬುವ ಶಾಸ್ತ್ರ ನೆರವೇರಿಸಿ, ಅಕ್ಷತೆ ಹಾಕಿ ಶುಭ ಹಾರೈಸಿದರು. ಪುರುಷ ಸಹೋದ್ಯೋಗಿ ಮಿತ್ರರು ಸಹ ಹಾಜರಿದ್ದು ಶುಭ ಹಾರೈಸಿದರು. ಈ ಸಂದರ್ಭ ಎಸ್‌ಐ ಅಜಯ್ ಕುಮಾರ್, ಎಎಸ್‌ಐ ವೆಂಕಟೇಶ್, ಮಹಿಳಾ ಸಿಬ್ಬಂದಿಗಳಾದ ಅನಿತಾ, ಸವಿತಾ, ಪ್ರೀತು, ಅಶ್ವಿತಾ ಸೇರಿದಂತೆ ಠಾಣೆ ಸಿಬ್ಬಂದಿಗಳಿದ್ದರು.

## ಸನ್ಮಾನ



ತಿ.ನರಸೀಪುರದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ನಡೆದ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಮಹೋತ್ಸವದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ವೀರೇಶ್ ಅವರನ್ನ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು. ಈ ವೇಳೆ ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಎಂಎಲ್ ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮೀಜಿ, ಕೃಷಿಕ ಸಮಾಜದ ಅಧ್ಯಕ್ಷ ಶಿವಮಲ್ಲಪ್ಪ ಇತರರಿದ್ದರು.

# ಗ್ರಾಮೀಣ ಜನರ ಆರೋಗ್ಯ ಸುಧಾರಣೆಗೆ ಸಹಕಾರ ಅಗತ್ಯ

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್



ಸಭೆಯಲ್ಲಿ ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿದರು.

ಸರಗೂರು, ಅ.14– ಗ್ರಾಮೀಣ ಜನರ ಆರೋಗ್ಯ ಸುಧಾರಣೆಗೆ ಗ್ರಾಮಸ್ಥರ ಸಹಕಾರ ಅಗತ್ಯ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ಸರಗೂರು ತಾಪಂ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ವತಿಯಿಂದ ತಾಲೂಕಿನ ಬಿ.ಮಟಕೆರೆ ಗ್ರಾಪಂ ಆವರಣದಲ್ಲಿ ಆಯೋಜಿಸಿದ್ದ ಗ್ರಾಮ ಆರೋಗ್ಯ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕು ಆರೋಗ್ಯ ಕೇಂದ್ರಗಳನ್ನು ಬಲಪಡಿಸುವ ಜೊತೆಗೆ ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶದಿಂದ ಮಧುಮೇಹ, ಅಧಿಕ ರಕ್ತದ ಒತ್ತಡ, ಕ್ಷಯ ರೋಗ, ಅಪೌಷ್ಟಿಕತೆ ಮತ್ತು ರಕ್ತಹೀನತೆ, ಮುಟ್ಟಿನ ನೈರ್ಮಲ್ಯ, ಕುಡಿಯುವ ನೀರು ಮತ್ತು ಸ್ವಚ್ಛತೆ, ಮಾನಸಿಕ ಕಾಯಿಲೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆಯಲು ಮುಂದಾಗಬೇಕು. ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಜನರಿಗೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಈ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರಶೇಖರ್ ಮಾತನಾಡಿದರು. ಅಧ್ಯಕ್ಷತೆಯನ್ನು ಬಿ.ಮಟಕೆರೆ ಗ್ರಾಪಂ ಅಧ್ಯಕ್ಷ ನಾಗೇಂದ್ರ ವಹಿಸಿದ್ದರು. ಪಿಡಿಓ ಭಾಗ್ಯ, ಉಪಾಧ್ಯಕ್ಷೆ ಭಾರತಿ, ಆರೋಗ್ಯ ಇಲಾಖೆ ಸಿಬ್ಬಂದಿ ಅನಿತಾ, ಜಲಜ, ಅಂಗನವಾಡಿ ಮೇಲ್ವಿಚಾರಕಿ ಚಿನ್ನಮ್ಮ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಗ್ರಾಪಂ ಸಿಬ್ಬಂದಿಗಳಾದ ಮಹೇಶ್, ರಾಮು, ಸರಸ್ವತಿ, ಪಲ್ಲವಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಇನ್ನಿತರರಿದ್ದರು.

# ತಂದೆ ಹಾದಿಯಲ್ಲಿ ಸಾಗಿ ಜನಸೇವೆಗೆ ಮುಂದಾಗುತ್ತೇನೆ

ಜನಸಂಪರ್ಕ ಸಭೆಯಲ್ಲಿ ಶಾಸಕ ದರ್ಶನ್



ಹುಲ್ಲಹಳ್ಳಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಅ.14– ಕ್ಷೇತ್ರದ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿರುವ ನನ್ನ ತಂದೆ, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಹಾದಿಯಲ್ಲಿ ಸಾಗುವ ಮೂಲಕ ಜನಸೇವೆಗೆ ಮುಂದಾಗುತ್ತೇನೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ತಂದೆಯವರ ಆಶಯದಂತೆ ಪ್ರತಿ ತಿಂಗಳು ಜನಸಂಪರ್ಕ ಸಭೆ ನಡೆಸುತ್ತಿದ್ದೇನೆ. ನಗರದಲ್ಲಿ ಕಡ್ಡಾಯವಾಗಿ ಪ್ರತಿ ಸೋಮವಾರ ಜನಸಂಪರ್ಕ ಸಭೆಯನ್ನು ಕಳೆದ ಒಂದು ವರ್ಷಗಳಿಂದ ನಿರಂತರವಾಗಿ ನಡೆಸುತ್ತಾ ಬಂದಿದ್ದೇನೆ. ಜನಸಂಪರ್ಕ ಸಭೆಗೆ ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಂದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಹಿಡಿದು ಬರುತ್ತಾರೆ. ಅವರ ಸಮಸ್ಯೆಯನ್ನು ಸ್ಪಷ್ಟವಾಗಿ ತಿಳಿದು ಸ್ಥಳದಲ್ಲೇ ಪರಿಹರಿಸಲು ಮುಂದಾಗುತ್ತೇನೆ. ಲೋಪದೋಷಗಳು ಇದ್ದರೆ ಅದಕ್ಕೆ ಸಮಯಾವಕಾಶ ನೀಡುತ್ತೇನೆ. ಜನಸಂಪರ್ಕ ಸಭೆಗೆ ತಾಲೂಕು ಮಟ್ಟದ ಅಧಿಕಾರಿಗಳು ಕೂಡ ಹಾಜರಿರುತ್ತಾರೆ. ಯಾವ ಇಲಾಖೆಗಳ ಮೂಲಕ ಜನರಿಗೆ ಸೌಲಭ್ಯಗಳು ದೊರಕಬೇಕು ಹಾಗೂ ಸಮಸ್ಯೆಗಳು ಬಗೆಹರಿಯಬೇಕು ಎಂಬ ಪೂರ್ಣ ಮಾಹಿತಿಯನ್ನು ಸ್ಥಳದಲ್ಲೇ ತಿಳಿದು ಬಗೆಹರಿಸಲು ಮುಂದಾಗುತ್ತೇನೆ. ಸಭೆಯಿಂದ ಕ್ಷೇತ್ರದ ಜನರಿಗೆ ಸಾಕಷ್ಟು ಅನುಕೂಲ ಆಗಿವೆ. ಇದರಿಂದ ತೃಪ್ತಿಕರ ರಾಜಕಾರಣ ಮತ್ತು ಜನಸೇವೆ ಮಾಡಿದ ಅನುಭವವಾಗುತ್ತಿದೆ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಆರ್‌ಐ ಪ್ರಕಾಶ್, ಪಿಡಿಓ ಶ್ರೀಧರ್, ಗ್ರಾಪಂ ಸದಸ್ಯ ಕುಮಾರ್, ಮಹೇಶ್, ಹರದನಹಳ್ಳಿ ಸೋಮೇಶ್, ಹಲ್ಲರೆ ಮಹದೇವ್ ಉಪಸ್ಥಿತರಿದ್ದರು.

# ಸರ್ಕಾರ ಜಾತಿಗಣತಿ ವರದಿ ಅಂಗೀಕರಿಸಲಿ

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆಗ್ರಹ



ದಸಂಸ ಪದಾಧಿಕಾರಿಗಳ ಸಭೆಯಲ್ಲಿ ಆಲಗೂಡು ಶಿವಕುಮಾರ್ ಮಾತನಾಡಿದರು

ತಿ.ನರಸೀಪುರ, ಅ.14– ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಕುರಿತ ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಪಟ್ಟಭದ್ರರ ಮಾತಿಗೆ ಮಣಿಯದೆ, ಸರ್ಕಾರ ಕೂಡಲೇ ಅಂಗೀಕರಿಸಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆಗ್ರಹಿಸಿದರು.

ಪಟ್ಟಣದ ಅತಿಥಿ ಗೃಹದಲ್ಲಿ ನಡೆದ ದಸಂಸ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಅ.18 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಜಾತಿ ಜನಗಣತಿ ವರದಿಯನ್ನು ಚರ್ಚೆಗೆ ತೆಗೆದುಕೊಂಡು ಅಂಗೀಕಾರ ಮಾಡುವುದಾಗಿ ತಿಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ನಡೆ ಸ್ವಾಗತಾರ್ಹ. ಕೂಡಲೇ ಜಾರಿಗೊಳಿಸುವಂತೆ ಆಗ್ರಹಿಸಿ ದಸಂಸ ರಾಜ್ಯ ಸಮಿತಿ ರಾಜ್ಯಾದ್ಯಂತ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಗೆ ಕರೆ ನೀಡಿದ್ದು, ಅದರಂತೆ ಅ.16ರಂದು ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಹಿಂದುಳಿದ ವರ್ಗಗಳ ಪ್ರಗತಿ ಸಹಿಸದ ಕೆಲವು ಪ್ರಬಲ ಜಾತಿಗಳ ರಾಜಕೀಯ ನಾಯಕರು ಮತ್ತು ಸಂಘಟನೆಗಳ ಮುಖಂಡರು ಇದನ್ನು ವಿರೋಧಿಸುತ್ತಿರುವುದು ಅವರ ಜಾತಿಯ ಅಸಹನೆ ಬಿಂಬಿಸುತ್ತಿದೆ. ನಿಖರ ಕಾರಣ ನೀಡದೆ ವಿರೋಧ ವ್ಯಕ್ತ ಪಡಿಸುವುದು ಪೂರ್ವಾಗ್ರಹ ಪೀಡಿತವಾಗಲಿದೆ ಎಂದರು. ರಾಜ್ಯದ ಜನರ ತೆರಿಗೆಯ 150 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿ ತಯಾರಾಗಿರುವ ಈ ವರದಿ ಅವೈಜ್ಞಾನಿಕ, ಕಾಲ ಮುಗಿದಿದೆ, ಮತ್ತೆ ಸಮೀಕ್ಷೆ ಆಗಬೇಕು ಎನ್ನುವುದು ಅಸಂಬದ್ಧವಾದವಾಗಿದೆ. ಹಾಗಾಗಿ ಮುಖ್ಯಮಂತ್ರಿಗಳು ಇಂತಹ ಗೊಡ್ಡು ಬೆದರಿಕೆಗಳಿಗೆ ಮಣೆ ಹಾಕದೆ ತಾವೇ ರಚಿಸಿರುವ ಆಯೋಗದ ವರದಿ ಜಾರಿಗೆ ತರುವ ಸದಾವಕಾಶ ದೊರೆತಿದ್ದು, ಕೂಡಲೇ ಜಾರಿಗೆ ತಂದು, ಹಿಂದುಳಿದ ವರ್ಗಗಳ ಹಿತಾಸಕ್ತಿ ಕಾಪಾಡಬೇಕಾಗಿದೆ ಎಂದು ಮನವಿ ಮಾಡಿದರು.

ಸಭೆಯಲ್ಲಿ ದಸಂಸ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಕುಕ್ಕೂರು ರಾಜು, ಬನ್ನಹಳ್ಳಿ ಹುಂಡಿ ಉಮೇಶ್, ನಾಗರಾಜ್ ಮೂರ್ತಿ, ಆದಿಬೆಟ್ಟಹಳ್ಳಿ ಅರ್ಜುನ್, ಯಾಕನೂರು ಮಹೇಶ್, ಕರೋಹಟ್ಟಿ ಜಗದೀಶ್, ಕೈಯಂಬಳ್ಳಿ ಕೃಷ್ಣ, ಬಿಲಗೆರೆ ಹುಂಡಿ ಸಿದ್ದರಾಜು, ಶಿವಕುಮಾರ್, ಶ್ರೀನಿವಾಸ್, ಮಹೇಶ್, ವಾಟಾಳ್ ಕೃಷ್ಣ, ಶಿವಣ್ಣ, ತುರಗನೂರು ಲಕ್ಷ್ಮಣ್, ಕನ್ನಹಳ್ಳಿ, ಕನ್ನಹಳ್ಳಿ ಶಶಿಕುಮಾರ್ ಇತರರಿದ್ದರು.


# ಅ.28ಕ್ಕೆ ಚುನಾವಣೆ

ನಂಜನಗೂಡು, ಅ.14– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಹಾಗೂ ಯೋಜನಾ ಶಾಖೆಗಳ ನಿರ್ದೇಶಕರ ಚುನಾವಣೆ ಅ.28 ರಂದು ನಡೆಯಲಿದೆ ಎಂದು ಚುನಾವಣಾಧಿಕಾರಿ, ನಿವೃತ್ತ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.9ರಿಂದ 18ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ವಾಪಸ್ ಪಡೆಯಲು ಅ.21 ಕೊನೆ ದಿನ ಅ.28 ರಂದು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಚುನಾವಣೆ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು ಎಂದು ತಿಳಿಸಿದ್ದಾರೆ.

# ಮಲ್ಕುಂಡಿ ಡೈರಿಗೆ ಉಮೇಶ್ ಅಧ್ಯಕ್ಷ

ಮಲ್ಕುಂಡಿ ಡೈರಿ ಅಧ್ಯಕ್ಷರಾಗಿ ಉಮೇಶ್ ಅವಿರೋಧವಾಗಿ ಆಯ್ಕೆಯಾದರು.



ಮಲ್ಕುಂಡಿ, ಅ.14– ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಸಿ.ಉಮೇಶ್, ಉಪಾಧ್ಯಕ್ಷೆಯಾಗಿ ಗೌರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಸಿ.ಉಮೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸುಜಾತ ಘೋಷಿಸಿದರು.

ನೂತನ ಅಧ್ಯಕ್ಷ ಎಂ.ಸಿ.ಉಮೇಶ್ ಮಾತನಾಡಿ, ರೈತರು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಬೇಕು. ಆ ಮೂಲಕ ಸಂಘವು ಹೆಚ್ಚು ಲಾಭ ಗಳಿಸಲು ಸಹಕರಿಸಬೇಕು ಎಂದ ಅವರು, ಸಂಘದ ಸರ್ವ ಸದಸ್ಯರ ಸಹಕಾರ ಪಡೆದು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಈವೇಳೆ ನಿರ್ದೇಶಕರಾದ ಮಹದೇವಪ್ಪ, ಮಾದೇಗೌಡ, ಮಹದೇವಸ್ವಾಮಿ, ಸುವರ್ಣ, ತುಳಸಮ್ಮ, ಮಹದೇವಸ್ವಾಮಿ, ಹುರ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಮುಖಂಡರಾದ ಸಣ್ಣಮಾದಪ್ಪ, ಗುರುಮಲ್ಲಪ್ಪ, ಕೆಂಡಪ್ಪ, ನಂದೀಶ್, ಎಂ.ಜಿ.ಮಹದೇವಸ್ವಾಮಿ, ರಮೇಶ್, ಸಿಇಓ ಮುತ್ತುರಾಜ್ ಇನ್ನಿತರರಿದ್ದರು.

ಒಳ ಮೀಸಲಾತಿ ಜಾರಿಗೊಳಿಸದೆ

# ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡದಂತೆ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ರವೀಶ್ ಮಾತನಾಡಿದರು.

ಹೆಚ್.ಡಿ.ಕೋಟೆ, ಅ.14– ಒಳ ಮೀಸಲಾತಿ ಜಾರಿಗೊಳಿಸದೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬಾರದು ಎಂದು ಮಾತಂಗ ಜನಜಾಗೃತಿ ವೇದಿಕೆ ತಾಲೂಕು ಅಧ್ಯಕ್ಷ ರವೀಶ್ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದಾಶಿವ ಆಯೋಗ ಹಾಗೂ ಮಾಧುಸ್ವಾಮಿ ಆಯೋಗದ ವರದಿಗಳನ್ನು ಹಿಂದಿನ ಸರ್ಕಾರ ಅಂಗೀಕರಿಸಿದ್ದರೂ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸದೆ, ಮತ್ತೊಂದು ಆಯೋಗ ರಚಿಸಿ ವರದಿ ಮಾಡಿಸಲಾಗುತ್ತದೆ ಎಂದು ವರದಿ ಜಾರಿ ಮಾಡಲು ವಿಳಂಬ ಮಾಡುತ್ತಿದೆ ಎಂದು ದೂರಿದರು.

ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಆದೇಶಿಸಿದ್ದು, ತಕ್ಷಣವೇ ಅದನ್ನು ತಡೆ ಹಿಡಿಯಬೇಕು. ಒಳ ಮೀಸಲಾತಿ ಜಾರಿ ಆದ ನಂತರ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಿದರೆ ಮಾದಿಗ ಸಮುದಾಯಕ್ಕೆ ನ್ಯಾಯ ಸಿಗುತ್ತದೆ. ಇಲ್ಲವಾದರೆ ಸಮುದಾಯಕ್ಕೆ ಅನ್ಯಾಯವಾಗುತ್ತದೆ ಎಂದು ತಿಳಿಸಿದರು.

ಸದಾಶಿವ ಮತ್ತು ಮಾಧುಸ್ವಾಮಿ ಆಯೋಗದ ವರದಿಯನ್ನು ಜಾರಿಗೊಳಿಸಲು ಒತ್ತಾಯಿಸಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅ.16ರಂದು ಪ್ರತಿಭಟನೆ ಹಮ್ಮಿಕೊಂಡಿದ್ದು, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಸಮುದಾಯದ ಮುಖಂಡರು ಭಾಗವಹಿಸಿ ಪ್ರತಿಭಟನೆ ಯಶಸ್ವಿಗೊಳಿಸಲು ಮನವಿ ಮಾಡಿದರು.

ಗೋಷ್ಠಿಯಲ್ಲಿ ಮಾತಂಗ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಗಿರಿ ಪ್ರಸಾದ್, ಎಡತೊರೆ ಡಿ.ನಾಗರಾಜು, ಬಾಬು ಜಗಜೀವನರಾವ್ ವಿಚಾರ ವೇದಿಕೆ ಪ್ರಧಾನ ಕಾರ್ಯದರ್ಶಿ ಶಿವಯ್ಯ, ಸರಗೂರು ಶ್ರೀನಿವಾಸ್, ಖಜಾಂಚಿ ಶಿವಾಜಿ, ಸಂಚಾಲಕ ಶಿವರಾಜಯ್ಯ, ಸಂಘಟನಾ ಕಾರ್ಯದರ್ಶಿ ಕೃಷ್ಣಾಪುರ ಮಹೇಂದ್ರ, ಚೇತನ್, ತಿಮ್ಮರಾಜು ಸೇರಿದಂತೆ ಸಮುದಾಯದ ಮುಖಂಡರು ಹಾಜರಿದ್ದರು.

ಮೈಸೂರು ಮಿತ್ರ ಮಂಗಳವಾರ 15 ಅಕ್ಟೋಬರ್ 2024

ದಸರಾ ಫಲಪುಷ್ಪ ಪ್ರದರ್ಶನ ಸಮಾರೋಪ

# ಅತ್ಯುತ್ತಮ ಉದ್ಯಾನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರಿನ ಕುಪ್ಪಣ್ಣ ಉದ್ಯಾನದಲ್ಲಿ 'ದಸರಾ ಫಲಪುಷ್ಪ ಪ್ರದರ್ಶನ'ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಬಹುಮಾನ ವಿತರಣೆ ಮಾಡಿದರು.

## 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ; ಸ್ಪರ್ಧೆಗೂ ಉತ್ತಮ ಸ್ಪಂದನೆ

**ತೋಟಗಾರಿಕೆ ಇಲಾಖೆ ವತಿಯಿಂದ ಕುಪ್ಪಣ್ಣ ಉದ್ಯಾನದಲ್ಲಿ ಆಯೋಜಿಸಿದ್ದ 10 ದಿನಗಳ 'ದಸರಾ ಫಲಪುಷ್ಪ ಪ್ರದರ್ಶನ'ಕ್ಕೆ ಎಂದಿನಂತೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಈ ಬಾರಿ 5 ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿ, ಫಲ-ಪುಷ್ಪಗಳ ಸೊಬಗನ್ನು ಕಣ್ತುಂಬಿಕೊಂಡಿದ್ದಾರೆ. ವಿಜಯದಶಮಿ ಮರುದಿನ ಭಾನುವಾರ ಉಚಿತ ಪ್ರವೇಶ ಕಲ್ಪಿಸಲಾಗಿತ್ತು. ಹಾಗೆಯೇ ಪ್ರದರ್ಶನದ ಅಂಗವಾಗಿ ಮನೆ, ಅಪಾರ್ಟ್‌ಮೆಂಟ್, ಕೈಗಾರಿಕಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ಸುಮಾರು 20 ವಿಭಾಗಗಳಲ್ಲಿ ನಡೆದ ಅತ್ಯುತ್ತಮ ಉದ್ಯಾನ ಅಥವಾ ಕೈದೋಟ ನಿರ್ವಹಣೆ ಸ್ಪರ್ಧೆಯಲ್ಲಿ ನೂರಾರು ಸ್ಪರ್ಧಿಗಳು ಭಾಗವಹಿಸಿದ್ದರು. ಪ್ರತಿ ವಿಭಾಗದಲ್ಲೂ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನ ಮತ್ತು ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ವಿತರಿಸಿ, ಪ್ರೋತ್ಸಾಹಿಸಲಾಯಿತು.**

ಮೈಸೂರು, ಅ.14(ಎಸ್‌ಬಿಡಿ)– 'ದಸರಾ ಫಲಪುಷ್ಪ ಪ್ರದರ್ಶನ'ದ ಅಂಗವಾಗಿ ಹಮ್ಮಿಕೊಂಡಿದ್ದ ಅತ್ಯುತ್ತಮ ಉದ್ಯಾನ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸೋಮವಾರ ಬಹುಮಾನ ವಿತರಿಸಲಾಯಿತು.

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ನಗರದ ಕುಪ್ಪಣ್ಣ ಉದ್ಯಾನದಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಜೇತರಿಗೆ ಬಹುಮಾನ ವಿತರಿಸಿ, ಪ್ರೋತ್ಸಾಹಿಸಿದರು.

ಈ ವೇಳೆ ಮಾತನಾಡಿದ ಅವರು, ಸಂಗೀತ, ಸಾಹಿತ್ಯ, ಕಲೆ, ಕೃಷಿ, ಹೈನುಗಾರಿಕೆ, ಕ್ರೀಡೆ, ಮಹಿಳೆಯರ ಕೊಡುಗೆಗಳ ಅನಾವರಣ, ಜನರ ಜೀವನ ಕ್ರಮ ಹಾಗೂ ಮೌಲ್ಯಗಳು ಅಭಿವ್ಯಕ್ತಿಯಾಗಿದ್ದ ಈ ಬಾರಿಯ ದಸರಾ ಸಾಂಸ್ಕೃತಿಕ ಚಳುವಳಿಯಾಗಿ ಜರುಗಿತು ಎಂದು ಸಂತಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅದ್ಧೂರಿ ದಸರಾ ಆಚರಿಸುವಂತೆ ತಿಳಿಸಿದ್ದರು. ಅದರಂತೆ ಜನರಲ್ಲಿ ಸಹೋದರತೆ, ಸೌಹಾರ್ದತೆ, ಘನತೆಯ ಬದುಕಿನ ಮಹತ್ವ ಸಾರುವ ರೀತಿಯಲ್ಲಿ ಈ ಬಾರಿಯ ದಸರಾವನ್ನು ಆಚರಿಸಲಾಗಿದೆ. ಭೇದಭಾವ ಮೀರಿದ ಸಮಾಜ ನಿರ್ಮಾಣದ ಅನಿವಾರ್ಯತೆಯ ಅರಿವು ಮೂಡಿಸುವ ಪ್ರಯತ್ನ ನಡೆದಿದೆ ಎಂದರು.

ಈ ಬಾರಿಯ ದಸರಾ ವಿಭಿನ್ನವಾಗಿತ್ತು ಎಂದು ಜನ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹತ್ತು ದಿನಗಳೂ ಮೈಸೂರಿಗೆ ಜನಸಾಗರವೇ ಹರಿದು ಬಂದಿತ್ತು. ಎಲ್ಲಾ ಕಾರ್ಯಕ್ರಮಗಳನ್ನೂ ಕಣ್ತುಂಬಿಕೊಂಡು ಸಂತಸಪಟ್ಟರು. ಹಾಗಾಗಿ ಜನರ ದಸರಾವಾಗಿ ಪರಿಣಮಿಸಿತು. ದಸರಾ ಯಶಸ್ಸಿಗೆ ಮೈಸೂರಿನ ಜನತೆ ಕಾರಣೀಭೂತರು. ಯಶಸ್ವಿ ದಸರಾ ಆಚರಣೆ ಮೂಲಕ ರಾಜ್ಯ ಸರ್ಕಾರಕ್ಕೆ ಸಾಂಸ್ಕೃತಿಕ ಕಿರೀಟ ಇಟ್ಟಂತಾಗಿದೆ ಎಂದು ಅಭಿಪ್ರಾಯಿಸಿದರು.

ತೋಟಗಾರಿಕೆ ಇಲಾಖೆಯಿಂದ ತುಂಬಾ ಅಚ್ಚುಕಟ್ಟಾಗಿ ಫಲಪುಷ್ಪ ಪ್ರದರ್ಶನವನ್ನು ಆಯೋಜನೆ ಮಾಡಲಾಗಿತ್ತು. ವಿವಿಧ ಪುಷ್ಪಗಳು ಹಾಗೂ ಸಿರಿಧಾನ್ಯಗಳಿಂದ ರಚಿಸಿದ್ದ ವೈವಿಧ್ಯಮಯ ಕಲಾಕೃತಿಗಳು ಜನರ ಮೆಚ್ಚುಗೆ ಪಡೆದಿವೆ. 5 ಲಕ್ಷಕ್ಕಿಂತ ಹೆಚ್ಚು ಜನ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿರುವುದು ಸಂತೋಷದ ಸಂಗತಿ. ಗಾಜಿನ ಮನೆಯಲ್ಲಿ 'ಪ್ರಜಾಪ್ರಭುತ್ವ ನಡೆದು ಬಂದ ದಾರಿ' ಪರಿಕಲ್ಪನೆಯ ವಿನ್ಯಾಸ ಅದ್ಭುತವಾಗಿತ್ತು. ಬುದ್ಧರ ಕಾಲ, ಶರಣರ ಅನುಭವ ಮಂಟಪ, ಸ್ವಾತಂತ್ರ್ಯ ಚಳವಳಿ, ಸಂವಿಧಾನ, ಸಂಸತ್ ಭವನ ಒಳಗೊಂಡಂತೆ ಆರನೇ ಶತಮಾನದಿಂದ ಈವರೆಗಿನ ಪ್ರಜಾಪ್ರಭುತ್ವ ಪರಿಕಲ್ಪನೆಯನ್ನು ಕಣ್ಣಿಗೆ ಕಟ್ಟಿತು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ, ತೋಟಗಾರಿಕೆ ಉಪನಿರ್ದೇಶಕ ಮಂಜುನಾಥ್, ಹಿರಿಯ ಸಹಾಯಕ ನಿರ್ದೇಶಕಿ ಹಬೀಬಾ ನಿಶಾತ್ ಮತ್ತಿತರರು ಉಪಸ್ಥಿತರಿದ್ದರು.

ದಸರಾ ಫಲಪುಷ್ಪ ಪ್ರದರ್ಶನ ; ಅಲಂಕಾರಿಕ ತೋಟದ ಸ್ಪರ್ಧೆಯಲ್ಲಿ

# ಅರಮನೆ ಮಂಡಳಿಗೆ ಪ್ರಥಮ ಬಹುಮಾನ




ಕುಪ್ಪಣ್ಣ ಪಾರ್ಕ್‌ನಲ್ಲಿ ಅರಮನೆ ಮಂಡಳಿ ನಿರ್ಮಿಸಿದ್ದ ಟಾಂಗಾ ಗಾಡಿಯ ಹೂವಿನ ಕಲಾಕೃತಿ

ಮೈಸೂರು,ಅ.14(ಪಿಎಂ)– ದಸರಾ ಮಹೋತ್ಸವ ಪ್ರಯುಕ್ತ ಅ.3ರಿಂದ 12ರವರೆಗೆ ಕುಪ್ಪಣ್ಣ ಉದ್ಯಾನವನದಲ್ಲಿ ನಡೆದ ಫಲಪುಷ್ಪ ಪ್ರದರ್ಶನದ ಅಲಂಕಾರಿಕ ತೋಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅರಮನೆ ಮಂಡಳಿ ಪ್ರಥಮ ಬಹುಮಾನಕ್ಕೆ ಭಾಜನವಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಕುಪ್ಪಣ್ಣ ಉದ್ಯಾನವನದಲ್ಲಿ ಅರಮನೆ ಮಂಡಳಿಯಿಂದ ಮೈಸೂರು ಪಾರಂಪರಿಕ ಟಾಂಗಾ ಗಾಡಿ ಕಲಾಕೃತಿಯನ್ನು ಹೂವಿನಿಂದ ನಿರ್ಮಿಸಲಾಗಿತ್ತು. ಇದಕ್ಕಾಗಿ 1 ಲಕ್ಷ ವಿವಿಧ ಹೂಗಳನ್ನು ಬಳಸಲಾಗಿತ್ತು. ಗುಲಾಬಿ, ಕ್ರೈಸಾಂಥಿಮಮ್, ಪಿಂಗ್‌ಪಾಂಗ್, ಕಾರ್ನೆಷನ್, ಅಸ್ಟ್ರಮೇರಿಯಾ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂ ಡೈಸಿ, ಡ್ರೆಸಿನಾ, ಇತರೆ ಅಲಂಕಾರಿಕ ಹೂಗಳು ಮಾತ್ರವಲ್ಲದೆ, ಊಟಿ ಕಟ್ ಫ್ಲವರ್‌ಗಳನ್ನು ಇದಕ್ಕಾಗಿ ಬಳಸಲಾಗಿತ್ತು ಎಂದು ತಿಳಿಸಿದರು.

ಜೊತೆಗೆ ಕುಪ್ಪಣ್ಣ ಉದ್ಯಾನವದ ಅಲಂಕಾರಿಕ ಸಸ್ಯ ಹಾಗೂ ಪುಷ್ಪಗಳ ನಡುವೆ ಸಿರಿಧಾನ್ಯದಲ್ಲಿ ರಾಜಮಾತೆ ವಾಣಿ ವಿಲಾಸ ಸನ್ನಿಧಾನ (ಕೆಂಪನಂಜಮ್ಮಣ್ಣಿಯವರು) ಅವರ ಪ್ರತಿಮೆ ಮೂಡಿಸಲಾಗಿತ್ತು ಐದು ಸಾವಿರ ಅಲಂಕಾರಿಕ ಗಿಡಗಳನ್ನು ಹೊಂದಿದ್ದ ಕುಂಡಗಳನ್ನು ಪ್ರದರ್ಶನ ಮಾಡಿದ್ದವು. ಈ ಎಲ್ಲಾ ಪರಿಶ್ರಮದ ಫಲವಾಗಿ ಪ್ರಥಮ ಬಹುಮಾನ ಲಭಿಸಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.




ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಪ್ರಥಮ ಬಹುಮಾನವಾಗಿ ಬಂದ ಕಪ್‌ನೊಂದಿಗೆ ಅರಮನೆ ಮಂಡಳಿ ಕಾರ್ಯನಿರ್ವಹಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ಸಿಬ್ಬಂದಿಯನ್ನು ಚಿತ್ರದಲ್ಲಿ ಕಾಣಬಹುದು.

## ಹಿರಿಯ ಚಿತ್ರ ನಿರ್ದೇಶಕ ಚಿ. ದತ್ತರಾಜ್ ನಿಧನ



**ಬೆಂಗಳೂರು:** ಕಾಮನ ಬಿಲ್ಲು ಸೇರಿದಂತೆ ಹಲವಾರು ಹಿಟ್ ಚಿತ್ರಗಳನ್ನು ನೀಡಿದ್ದ ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಚಿ. ದತ್ತರಾಜ್ ನಿಧನರಾಗಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು.

ಖ್ಯಾತ ಸಾಹಿತಿ ದಿವಂಗತ ಚಿ. ಉದಯ ಶಂಕರ್ ಅವರ ಸಹೋದರರಾಗಿದ್ದ ಚಿ. ದತ್ತರಾಜ್ ಅವರು ರಾಜ್‌ಕುಮಾರ್ ಅವರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಅವರ ಅಭಿನಯದ ಕಾಮನಬಿಲ್ಲು, ಕೆರಳಿದ ಸಿಂಹ, ಅದೇ ಕಣ್ಣು, ಶ್ರುತಿ ಸೇರಿದಾಗ ಚಿತ್ರಗಳನ್ನು ನಿರ್ದೇಶಿಸಿದ್ದರು. ಶಿವರಾಜ್ ಕುಮಾರ್ ಅಭಿನಯದ ಮೃತ್ಯುಂಜಯ, ಆನಂದ ಜ್ಯೋತಿ ಚಿತ್ರಗಳನ್ನು ನಿರ್ದೇಶಿಸಿದ ದತ್ತರಾಜ್ ಅವರು, ಮಂಜುಳ ನಟಿಸಿದ್ದ ರುದ್ರಿ ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇಂದು ಮಧ್ಯಾಹ್ನ ಹರಿಶ್ಚಂದ್ರ ಘಾಟ್‌ನಲ್ಲಿ ದತ್ತರಾಜ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

### ಕವೀಶ್ ಗೌಡರ ಹುಟ್ಟುಹಬ್ಬ ಆಚರಣೆ



ಬಿಜೆಪಿ ಯುವ ನಾಯಕ ಕವೀಶ್‌ಗೌಡರ ಜನ್ಮದಿನದ ಸಂಭ್ರಮವನ್ನು ಕವೀಶ್ ಗೌಡ ಸ್ನೇಹ ಬಳಗದ ವತಿಯಿಂದ ಆಚರಿಸಲಾಯಿತು ಈ ವೇಳೆ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟಿನ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಹರ್ಷ ಮೋಹಿತ್ ಗೌಡ, ವಿವೇಕ್ ಸಿಂಹ, ರವಿ ಎ, ಮಂಜಣ್ಣ, ಡಾ.ಲೋಕೇಶ್, ಯೋಗ ನರಸಿಂಹಗೌಡ ಹಾಗೂ ಇತರರು ಹಾಜರಿದ್ದರು.

## ಹಣಕಾಸಿನ ಸ್ಥಿರತೆಗೆ ಎಐ ಸವಾಲು: ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್

**ನವದೆಹಲಿ:** ಜಾಗತಿಕ ಹಣಕಾಸು ಸೇವೆಗಳಲ್ಲಿ ಹೆಚ್ಚುತ್ತಿರುವ ಕೃತಕ ಬುದ್ಧಿಮತ್ತೆ ಮತ್ತು ಮಷೀನ್ ಲರ್ನಿಂಗ್ ಬಳಕೆಯು ಹಣಕಾಸಿನ ಸ್ಥಿರತೆಗೆ ಸವಾಲುಗಳನ್ನು ಸೃಷ್ಟಿಸಬಹುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.

ಕಡಿಮೆ ಸಂಖ್ಯೆಯ ತಂತ್ರಜ್ಞಾನ ಪೂರೈಕೆದಾರರು ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿದಾಗ ಕೃತಕ ಬುದ್ಧಿಮತ್ತೆಯ ಮೇಲಿನ ಹೆಚ್ಚಿನ ಅವಲಂಬನೆಯು ಅಪಾಯಕ್ಕೆ ಕಾರಣವಾಗಬಹುದು. ಬ್ಯಾಂಕ್‌ಗಳು ಅಪಾಯ ತಗ್ಗಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ ಎಂದು ಹೇಳಿದ್ದಾರೆ.

ವೆಚ್ಚ ತಗ್ಗಿಸಲು, ರಿಸ್ಕ್‌ಗಳ ನಿರ್ವಹಣೆ ಮಾಡಲು, ಬ್ಯಾಂಕಿಂಗ್ ಸೇವೆ, ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಹಣಕಾಸು ಸೇವೆಗಳ ಪೂರೈಕೆದಾರರು ಕೃತಕ ಬುದ್ಧಿಮತ್ತೆ (ಎಐ) ಬಳಸುತ್ತಿದ್ದಾರೆ. ಹೆಚ್ಚುತ್ತಿರುವ ಎಐ ಬಳಕೆಯಿಂದ ಇವು ಸೈಬರ್ ದಾಳಿ ಮತ್ತು ದತ್ತಾಂಶ ಸೋರಿಕೆಗೆ ಒಳಗಾಗುವ ಅಪಾಯ ಇದೆ ಎಂದು ಹೇಳಿದ್ದಾರೆ.

**ಸಮಯ, ವೆಚ್ಚ ತಗ್ಗಿಸುವ ಅಗತ್ಯ:** ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪ್ರಮುಖವಾದ ಸಾಗರೋತ್ತರ ಪಾವತಿ ವ್ಯವಸ್ಥೆಯ ಸಮಯ ಮತ್ತು ವೆಚ್ಚವನ್ನು ಕಡಿಮೆ ಮಾಡುವ ಅಗತ್ಯವಿದೆ ಎಂದು ದಾಸ್ ಹೇಳಿದ್ದಾರೆ.

ವಿದೇಶಗಳಲ್ಲಿ ದುಡಿಯುತ್ತಿರುವ ಭಾರತೀಯರು ತಾಯ್ನಾಡಿಗೆ ಕಳೆದ ವರ್ಷ ರವಾನಿಸಿದ ಹಣದ ಮೊತ್ತವು 111 ಬಿಲಿಯನ್ ಡಾಲರ್ (9.33 ಲಕ್ಷ ಕೋಟಿ) ಇತ್ತು ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ 2024ರ ವರದಿ ತಿಳಿಸಿದೆ.

2027ರ ವೇಳೆಗೆ ವಿವಿಧ ದೇಶಗಳ ನಡುವೆ ನಡೆಯುವ ಈ ಪಾವತಿಯ ಮೌಲ್ಯವು 250 ಟ್ರಿಲಿಯನ್ ಡಾಲರ್ (ಸುಮಾರು 21 ಸಾವಿರ ಲಕ್ಷ ಕೋಟಿ) ದಾಟಲಿದೆ ಎಂದು ಬ್ಯಾಂಕ್ ಆಫ್ ಇಂಗ್ಲೆಂಡ್ ಅಂದಾಜಿಸಿದೆ.

# ವರುಣ ನಾಲೆಗೆ ಭೂಮಿ ನೀಡಿದ ರೈತರಿಗೆ ಇನ್ನೂ ದೊರೆತಿಲ್ಲ ಪರಿಹಾರ

## ಕಬಿನಿ ಜಲಾಶಯ ಯೋಜನೆ ಭೂ ಸ್ವಾಧೀನಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು, ಅ.14(ಎಸ್‌ಪಿಎನ್)– ವರುಣ ನಾಲೆ ನಿರ್ಮಾಣಕ್ಕೆ ರೈತರ ಭೂಮಿ ವಶಪಡಿಸಿಕೊಂಡು, ಪರಿಹಾರ ನೀಡುವಲ್ಲಿ ವಿಳಂಬ ಧೋರಣೆ ತೋರುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಮೈಸೂರು ಮತ್ತು ನಂಜನಗೂಡು ತಾಲೂಕು ರೈತರು ರಾಮಕೃಷ್ಣನಗರ ಕಾಂಪ್ಲೆಕ್ಸ್ ಆವರಣದಲ್ಲಿನ ಕಬಿನಿ ಜಲಾಶಯ ಯೋಜನೆ ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು.



ಮೈಸೂರು ಕಬಿನಿ ಜಲಾಶಯ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿ ಬಳಿ ರೈತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಚಿಕ್ಕಕಾನ್ಯ, ಸಿಂಧೂವಳ್ಳಿ, ಬೇತಳ್ಳಿ ಗ್ರಾಮದ ರೈತರು ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿ ಪರಿಹಾರ ನೀಡುವಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ವಿರುದ್ಧ 'ಸೋಮಾರಿ ಅಧಿಕಾರಿಗಳಿಗೆ ಧಿಕ್ಕಾರ', 'ಜಾಣ ಕುರುಡು ಪ್ರದರ್ಶಿಸುತ್ತಿರುವ ಭ್ರಷ್ಟಾಚಾರಿ ರಾಜಕಾರಣಿಗಳಿಗೆ ಧಿಕ್ಕಾರ' ಎಂದು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ತಾಲೂಕು ಜಯಪುರ ಹೋಬಳಿ ಚಿಕ್ಕಕಾನ್ಯ ಗ್ರಾಮದ ಸರ್ವೆ ನಂ. 20/1,2,3,4 ಮತ್ತು 30/2, ಬೇತಳ್ಳಿ ಗ್ರಾಮದ ಸರ್ವೆ ನಂ.7/1. 72/11.88/3 ಹಾಗೂ ನಂಜನಗೂಡು ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿ ಬಿದರುಗೂಡು ಗ್ರಾಮದ ಸರ್ವೆ ನಂ. 38/3,4,5,6 ಹಾಗೂ 54, 55/1,2,3, 58, 65/1, 66/1 67/1, 71, 72/2, 90, 91/1, 91/2 ಗಳಲ್ಲಿನ ಜಮೀನುಗಳನ್ನು ಕಳೆದ ಹಲವು ವರ್ಷಗಳ ಹಿಂದೆ ವರುಣ ನಾಲೆ ನಿರ್ಮಿಸಲು 2012ರಲ್ಲಿ ಭೂ ಸ್ವಾಧೀನ ಮಾಡಿಕೊಂಡಿದ್ದರೂ ನಮಗೆ ಪರಿಹಾರ ಹಣ ನೀಡಿಲ್ಲ ಎಂದು ಆರೋಪಿಸಿದರು.

ಅಲ್ಲದೆ, 2022ರಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ಸ್ಥಳಪರಿಶೀಲನೆ ಮಾಡಿ ರೈತರೊಂದಿಗೆ ಮಾತುಕತೆ ನಡೆಸಿ, ನೇರ ಖರೀದಿ ಮಾಡುವುದಾಗಿ ಪತ್ರ ಮುಖೇನ ಭರವಸೆ ನೀಡಿದ್ದರು. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡು ಜಾಗದ ದಾಖಲಾತಿಯನ್ನು ಭೂ ಸ್ವಾಧೀನಾಧಿಕಾರಿಗಳಿಗೆ ನೀಡಿದ್ದಾರೆ. ಆದರೆ, ಭೂ ಸ್ವಾಧೀನಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡುವುದಾಗಿ ಮೊದಲು ಮಾಹಿತಿ ನೀಡಿ, 1.1.2024 ರಂದು ಬಂದು ಸ್ಥಳ ಪರಿಶೀಲನೆ ಮಾಡದೇ ಹಾಗೇ ಹಿಂತಿರುಗಿದ್ದಾರೆ. ನಂತರ 15.10.2024 ರಂದು ಸ್ಥಳ ಪರಿಶೀಲನೆ ಬರುವುದಾಗಿ ತಿಳಿಸಿ, ಇದೀಗ ಅಂದು ಕೂಡ ಬರುವುದಿಲ್ಲ ಎಂದು ತಿಳಿಸಿ, ದಿನಾಂಕ ಮುಂದೂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೀಗೆ ಅಧಿಕಾರಿಗಳು ಮಾತುಕತೆ ಸಂಬಂಧ ಪದೇಪದೆ ದಿನಾಂಕ ಮುಂದೂಡಿದರೆ ನಮಗೆ ತೊಂದರೆಯಾಗುತ್ತಿದೆ. ನಾವು ಕೃಷಿ ಚಟುವಟಿಕೆಗಳನ್ನು ಬಿಟ್ಟು ಪರಿಹಾರ ಪಡೆಯುವುದಾಗಿಯೇ ಎಲ್ಲಾ ಬದುಕು ಬಿಟ್ಟು ಕಾಯಲು ಸಾಧ್ಯವಿಲ್ಲ. ಪರಿಹಾರ ನೀಡುವಂತೆ ನ್ಯಾಯಾಲಯದ ಆದೇಶವಿದ್ದೂ ನಮಗೆ ಪರಿಹಾರ ನೀಡುತ್ತಿಲ್ಲ.

ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಈ ಸಂಬಂಧ ಮನವಿಕೊಟ್ಟರೂ ಪ್ರಯೋಜನವಾಗಿಲ್ಲ. ಈ ತಿಂಗಳ ಅಂತ್ಯದೊಳಗೆ ಸರ್ಕಾರ, ವಶಪಡಿಸಿಕೊಂಡಿರುವ ಜಮೀನುಗಳಿಗೆ ಪರಿಹಾರ ನೀಡದಿದ್ದಲ್ಲಿ, ನಮ್ಮನಮ್ಮ ಜಾಗದಲ್ಲಿ ವರುಣ ನಾಲೆ ಮಣ್ಣುತುಂಬಿ ಸಮತಟ್ಟು ಮಾಡಿ, ಆ ಜಾಗದಲ್ಲಿ ಮತ್ತೆ ಕೃಷಿ ಚಟುವಟಿಕೆ ಆರಂಭಿಸುತ್ತೇವೆ ಎಂದು ಅಭಿಪ್ರಾಯಪಟ್ಟರು.

**ಸಿಎಂಗೆ ಕೊಟ್ಟ ಮನವಿಗೂ ಬೆಲೆಯಿಲ್ಲ:** 27.11.2023 ರಂದು ರಾಜ್ಯ ಸರ್ಕಾರ ನೊಂದವರಿಗೆ ಸ್ಥಳದಲ್ಲೇ ಪರಿಹಾರ ನೀಡುತ್ತೇವೆ ಬನ್ನಿ ಎಂದು ಎಲ್ಲಾ ಮಾಧ್ಯಮಗಳ ಮೂಲಕ ರಾಜ್ಯ ಸಕಾರ ಮನವಿ ಮಾಡಿತ್ತು ಆದರಂತೆ ಜನತಾದರ್ಶನದಲ್ಲಿ ಭಾಗವಹಿಸಿ ಕುಂದುಕೊರತೆ (ಸಂಖ್ಯೆ:ಸಿಎಂಜೆ003477/2023) ವಿಭಾಗಕ್ಕೆ ಅರ್ಜಿ ನೀಡಲಾಗಿತ್ತು. ಆದರೆ, ಅರ್ಜಿಗೆ ರಾಜ್ಯ ಸರ್ಕಾರ ಆದ್ಯತೆ ಮೇರೆಗೆ ಪರಿಹಾರ ನೀಡುವಂತೆ ಅರ್ಜಿದಾರರಾದ ಅಂಕಮ್ಮ ಅವರಿಗೆ ಪತ್ರ ಮೂಲಕ ಹಿಂಬರಹ ಕೊಟ್ಟಿದ್ದ ಬಿಟ್ಟರೆ, ನಮ್ಮ ಸಮಸ್ಯೆಗೆ ಅಲ್ಲೂ ಪರಿಹಾರ ಸಿಗುತ್ತಿಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಚಿಕ್ಕಕಾನ್ಯದ ಕೆ.ರಾಜುಸ್ವಾಮಿ, ಎಸ್.ಚಂದ್ರಶೇಖರ ಸ್ವಾಮಿ, ಸಿಂಧೂವಳ್ಳಿ ಜೆ.ಮಹೇಶ್, ಬಸವಣ್ಣ, ನಿಂಗಣ್ಣ, ಎಂ.ಮಹದೇವಪ್ಪ ಕೆ.ನಾಗರಾಜು, ಶಿವಣ್ಣ, ಶಿವನಂಜಪ್ಪ, ಶಿವು, ಗೌಡಯ್ಯ, ರಾಜೇಂದ್ರ ಪ್ರಸಾದ್, ರಾಜಣ್ಣ, ರುದ್ರಪ್ಪ, ಮಹೇಶ್ ಸೇರಿದಂತೆ ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | **(ದೂ: 2521923)** |
| ವಿಶ್ವಂ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | **(ದೂ: 2422871)** |
| ವೆಟ್ಟೈಯನ್ (ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | **(ದೂ: 2497199)** |
| ದೇವರ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | **(ಮೊ:9900820093)** |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಭೈರಾದೇವಿ (ಕ) | 4 ಪ್ರದರ್ಶನಗಳು |
| **ಸಂಗಂ** | |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೃಷ್ಣಂ ಪ್ರಣಯ ಸಖಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ವಿಶ್ವಂ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ಭೀಮ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ. |
| ಸ್ಕ್ರೀನ್ 2 | ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ |
| ಸ್ಕ್ರೀನ್ 3 | ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ. |
| ಸ್ಕ್ರೀನ್ 4 | ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ. |

### ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519


| | |
|---|---|
| ಸ್ಕ್ರೀನ್ 1 | ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ. |
| ಸ್ಕ್ರೀನ್ 2 | ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ |
| ಸ್ಕ್ರೀನ್ 3 | ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ. |
| ಸ್ಕ್ರೀನ್ 4 | ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

### ಎ.ಎಸ್.ರವೀಂದ್ರ ಶ್ರೀಕಂಠಯ್ಯ ಹುಟ್ಟುಹಬ್ಬ



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರಿಗೆ ಭಾರಿ ಗಾತ್ರದ ಪುಷ್ಪಮಾಲೆಯನ್ನು ಅರ್ಪಿಸಿ ಸಿಹಿ ತಿನಿಸುವ ಮೂಲಕ ಶುಭಾಶಯ ಕೋರಲಾಯಿತು. ಜೆಡಿಎಸ್ ಮುಖಂಡ ನೆಲಮನೆ ದಯಣ್ಣ, ಜೆಡಿಎಸ್ ಕಾರ್ಯಾಧ್ಯಕ್ಷ ಬಿ.ಆರ್.ಕೊಪ್ಪಲು ತಿಲಕ್ ಕುಮಾರ್, ಮಾಜಿ ಗ್ರಾಪಂ ಅಧ್ಯಕ್ಷ ನಾರಾಯಣ್, ನವೀನ್ ಕುಮಾರ್, ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಶಂಕರೇಗೌಡ ಇತರರಿದ್ದರು.

## ಆರ್‌ಎಸ್‌ಎಸ್‌ಗೆ 100 ವರ್ಷ: ಮೈಸೂರಲ್ಲಿ ಸಂಭ್ರಮ



ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ ಹಿನ್ನೆಲೆ ವೀರ ಸಾವರ್ಕರ್ ಯುವ ಬಳಗದ ಪದಾಧಿಕಾರಿಗಳು ಡಾ.ಹೆಡಗೇವಾರ್ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿ ಸಂಭ್ರಮಪಟ್ಟರು.

ಮೈಸೂರು, ಅ.14(ಎಸ್‌ಪಿಎನ್)– ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ಥಾಪನೆಯಾಗಿ ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ವೀರ ಸಾವರ್ಕರ್ ಯುವ ಬಳಗದ ಪದಾಧಿಕಾರಿಗಳು ಕುವೆಂಪು ನಗರದ ಡಾ.ಹೆಡಗೇವಾರ್ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿ ಸಂಭ್ರಮಪಟ್ಟರು.

2024ರ ವಿಜಯದಶಮಿಗೆ ಆರ್‌ಎಸ್‌ಎಸ್ ಸ್ಥಾಪನೆಯಾಗಿ 99 ವರ್ಷ ಕಳೆದು ನೂರನೇ ವರ್ಷಕ್ಕೆ ಕಾಲಿಟ್ಟ ಸಂಭ್ರಮದಲ್ಲಿ ಸಂಘದ ಮೊದಲ ಸರಸಂಘಚಾಲಕ ಡಾ.ಕೇಶವ ಬಲರಾಮ್ ಹೆಡಗೇವಾರ್, ಮಾಧವ ಸದಾಶಿವ ಗೋಳವಲ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ವೀರಸಾವರ್ಕರ್ ಬಳಗದ ಅಧ್ಯಕ್ಷ ರಾಕೇಶ್ ಭಟ್, ಉಪಾಧ್ಯಕ್ಷ ಸಂದೇಶ್ ಪವಾರ್, ವಿಶ್ವ ಹಿಂದು ಪರಿಷತ್ ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್, ಪದಾಧಿಕಾರಿಗಳದ ಮನೋಜ್, ಟಿ.ಎಸ್.ಅರುಣ್, ಶ್ರೀನಿವಾಸ್‌ಪ್ರಸಾದ್, ಗೈಡ್ ಚಂದ್ರು, ಸ್ವಾಮಿ, ದರ್ಶನ್, ಯದುರಾಜ್, ಜಗದೀಶ್, ಆದಿಲಕ್ಷ್ಮೀ ವೆಂಕಟೇಶ್, ವಿಜೇಂದ್ರ, ನಟರಾಜ್ ಸೇರಿದಂತೆ ಇತರರಿದ್ದರು.

# ಅ.23ರವರೆಗೆ ದಸರಾ ದೀಪಾಲಂಕಾರ ವಿಸ್ತರಣೆ

## ವಾಹನ ಸಂಚಾರ ನಿರ್ಬಂಧವೂ ಮುಂದುವರಿಕೆ



ಮೈಸೂರು, ಅ.14(ಎಸ್‌ಬಿಡಿ)– ದಸರಾ ವಿದ್ಯುತ್ ದೀಪಾಲಂಕಾರವನ್ನು ಅ.23ರವರೆಗೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಅಂದಿನವರೆಗೂ ನಗರದಲ್ಲಿನ ವಾಹನ ಸಂಚಾರ ಹಾಗೂ ನಿಲುಗಡೆಗೆ ವಿಧಿಸಿದ್ದ ನಿರ್ಬಂಧಗಳು ಹಾಗೂ ಕೆಎಸ್‌ಆರ್‌ಟಿಸಿ ಬಸ್ ಸಂಚಾರದಲ್ಲಿನ ಮಾರ್ಪಾಡುಗಳು ಮುಂದುವರೆಯಲಿವೆ.

ದಸರಾ ನಂತರವೂ ವಿದ್ಯುತ್ ದೀಪಾಲಂಕಾರ ವೀಕ್ಷಿಸುವವರ ಸಂಖ್ಯೆ ಹೆಚ್ಚಾಗಿದ್ದು, ಸಂಚಾರ ಹಾಗೂ ವಾಹನ ದಟ್ಟಣೆ ನಿರ್ವಹಣೆ ದೃಷ್ಟಿಯಿಂದ ಸಂಜೆ 4ರಿಂದ ರಾತ್ರಿ 12ರವರೆಗೆ ಜಯಚಾಮರಾಜ ಒಡೆಯರ್ ವೃತ್ತ(ಹಾರ್ಡಿಂಜ್ ಸರ್ಕಲ್) ದಿಂದ ಚಾಮರಾಜ ಒಡೆಯರ್ ವೃತ್ತ–ಕೆ.ಆರ್.ವೃತ್ತ ಮಾರ್ಗವಾಗಿ ಅರಮನೆ ಸುತ್ತಲಿನ ರಸ್ತೆಗಳಲ್ಲಿ, ಕೆ.ಆರ್.ವೃತ್ತದಿಂದ ಆಯುರ್ವೇದ ಆಸ್ಪತ್ರೆ ವೃತ್ತ–ನೆಹರೂ ವೃತ್ತ ಮಾರ್ಗವಾಗಿ ಚಾಮರಾಜ ಒಡೆಯರ್ ವೃತ್ತಕ್ಕೆ ಏಕಮುಖ ಸಂಚಾರ ಸೇರಿದಂತೆ ದಸರಾ ವೇಳೆಯ ಎಲ್ಲಾ ನಿರ್ಬಂಧಗಳೂ ಇರಲಿವೆ.

ಮೈಸೂರು ಸಬರ್ಬನ್ ಬಸ್ ನಿಲ್ದಾಣದಿಂದ ಬೆಂಗಳೂರು, ಹಾಸನ, ಮಡಿಕೇರಿ, ಹೆಚ್.ಡಿ.ಕೋಟೆ, ನಂಜನಗೂಡು ಸೇರಿದಂತೆ ವಿವಿಧೆಡೆಗೆ ಸಂಚರಿಸುವ ಹಾಗೂ ಹೊರಗಿನಿಂದ ಆಗಮಿಸುವ ಬಸ್ಸುಗಳು ಹಾಗೂ ನಗರ ಸಾರಿಗೆ ಬಸ್‌ಗಳ ಸಂಚಾರ ಮಾರ್ಗದಲ್ಲಿನ ತಾತ್ಕಾಲಿಕ ಮಾರ್ಪಾಡುಗಳು ಮತ್ತು ತಾತ್ಕಾಲಿಕ ನಿಲ್ದಾಣಗಳ ಕಾರ್ಯಾಚರಣೆ ಅ.23ರವರೆಗೂ ಮುಂದುವರೆಯಲಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾದಬ್ರಹ್ಮ ಸಭಾಂಗಣದಲ್ಲಿ ಹಿಂದಿ ಚಲನಚಿತ್ರ ಗಾಯನ ಕಾರ್ಯಕ್ರಮ

# ಹಿಂದಿ ಖ್ಯಾತನಾಮರ ಹಾಡಿಗೆ ತಲೆದೂಗಿದ ಪ್ರೇಕ್ಷಕರು



ಬಾಲಿವುಡ್ ಮ್ಯೂಸಿಕಲ್ ಈವೆಂಟ್(ಸೀಸನ್–3) ಹಿಂದಿ ಚಲನಚಿತ್ರ ಗಾಯನ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಸನ್ಮಾನಿಸುತ್ತಿರುವುದು.

ಮೈಸೂರು, ಅ.14(ಎಸ್‌ಪಿಎನ್)– ಬಾಲಿವುಡ್ ಮ್ಯೂಸಿಕಲ್ ಈವೆಂಟ್ (ಸೀಸನ್–3) ಹಿಂದಿ ಚಲನಚಿತ್ರ ಗಾಯನ ಕಾರ್ಯಕ್ರಮದಲ್ಲಿ ಹಿಂದಿ ಚಲನಚಿತ್ರ ಖ್ಯಾತನಾಮ ಗಾಯಕರ ಹಾಡುಗಳ ಮೋಡಿಗೆ ಪ್ರೇಕ್ಷಕರು ತಲೆದೂಗಿದರು.

ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಜನಚೈತನ್ಯ ಫೌಂಡೇಷನ್ ವತಿಯಿಂದ ನಾಡಹಬ್ಬ ದಸರಾ ಮಹೋತ್ಸವ ಅಂಗವಾಗಿ ಏರ್ಪಡಿಸಿದ್ದ ಹಿಂದಿ ಚಲನಚಿತ್ರ ಗಾಯಕರಾದ ಮಹಮದ್ ರಫಿ, ಸೋನು ನಿಗಮ್, ಎ.ಆರ್.ರೆಹಮಾನ್, ಲತಾ ಮಂಗೇಶ್ವರ್ ಸೇರಿದಂತೆ ಇತರರು ಹಾಡಿರುವ ಹಾಡುಗಳ ಮೋಡಿಗೆ ಪ್ರೇಕ್ಷಕರು ತಲೆದೂಗಿದರು.

ಕಾರ್ಯಕ್ರಮದಲ್ಲಿ ಹಿಂದಿ ಹಾಡುಗಳಾದ ಹಾಯ್ ರಾಮ್ ಯಾ ಪ್ಯಾರ್ ಹುವಾ, ಏಕ್ ಪ್ಯಾರ್ ಕಾ ನಗ್ಮಾ ಹೈ, ಹರ್ ಕಿಸಿಕೋ ನಹೀ ಮಿಲ್ತಾ, ಸೋಗೆಯ ಸೋಗಯ, ಧಕ್ ಧಕ್‌ಕರ್ನೆ ಲಗಾ, ಕೋರ್ ಕಾಗಜ್, ಚಂದನ್ ಸಾ ಬದನ್, ಬೂಲ್‌ಗಯ ಸಬ್‌ಕುಚ್, ಮೇ ದುನಿಯಾ ಬೂಲಾದೂಂಗ, ಐಸೆ ದಿವಾನಗಿ, ಮಂಜಿಲೇ ಆಫ್ ನೀ ಜಗದೇ, ಗುಲಾಬಿ ಆಂಕೇ, ಹೇ ಜವಾನಿ ಹೇ ದಿವಾನಿ, ಕೋಯಿ ನಾ ಕೋಯಿ ಚಾಹಿಯೇ, ತೇಲಾ ಸಾತ್ ಹೈ ಕಿತ್ನಾ ಪ್ಯಾರ್, ತುಮ್ಸಾ ಕೋಯಿ ಪ್ಯಾರ, ಮೇರೆ ರಂಗ್ ಮೇ, ಆಖೇ ತೇರಿ ಬಾಹೋ ಮೇ, ಯೇ ಶ್ಯಾಮ್ ಮುಸ್ತಾನಿ, ಮುಜ್ ಸೇ ಜುದಾ ಹೋಕರ್, ಟಿಪ್ ಟಿಪ್ ಬಸ್ಮಾವಾನಿ, ಚಲ್ತೆ, ಚಲ್ತೇ, ದಿಲ್ ಹೊಕಿ ಮನತಾ ನಹೀ, ಚಿಂಗಾರಿ ಕೋಯಿ ಭಡ್ಕೆ, ಆಜಾ ಶ್ಯಾಮ್ ಹೋನೆ, ಸುರಮ್ಯ ಅಖಿಯೊಂಕೆ, ಅಖೆಲೆ ಹೈ ತ್ತೋ ಕ್ಯಾ ಘಮ್, ದಿವಾನ ಹುವಾ ಬಾದಲ್, ಚೋರಿ ಚೋರಿ ಜಚ್ ನಜರೇ, ಮೇರೆ ಸಲ್ನೊಂಕಿ ಆಯಿ, ಬಾಜಿಗರ್, ತೆರಬಿನ ಜಿಂದಗಿ, ರಿಮ್ ಜಿಮ್, ಜಾನೆ ಜಾ ದುಂಡತಾ, ಧೀರೆ ಧೀರೆ, ಜರಾ ಸ ಜೂಮ್ ಲೂಮೆ, ಏಕ್ ದೋ ತೀನ್, ಧಮ್ ರೇ ಧಮ್, ಯೇ ಮೇರ ದಿಲ್ ಪ್ಯಾರ್, ತುಹಿರೇ ತುಹಿರೇ, ಓ ಮಾರಿಯ ಓ ಮಾರಿಯ, ಯಾದ್ ಆ ರಹಾ ಹೈ, ಹಮ್ ಕೋ ಸರ್ಫ್ ತುಮೆ ಪ್ಯಾರ್ ಹೈ, ಅರೆ ದಿವಾನೋ, ಬಿನ್ ತೆರೆ ಸನಮ್, ರಾಹೋ ಮೇ ಉಸ್ಸೆ, ಪ್ರೇಮಿ ಆಶಿಕ್ ದಿವಾನ, ಚುರಾ ಕ ದಿಲ್ ಮೇರಾ ಸೇರಿದಂತೆ ಇತರೆ ಹಾಡುಗಳು ಸಂಗೀತ ಪ್ರಿಯರ ಮನಸೂರೆಗೊಂಡವು.

ಗಾಯಕರಾದ ಆರ್.ಲಕ್ಷ್ಮಣ್, ಜಾಯ್ ವೈಶಾಖ್, ಎಸ್.ಆರ್.ತಿರುಮಲೇಶ್, ಟಿ.ಬಬಿತ ಹರೀಶ್, ಎಸ್.ಆರ್.ವಿಜಯ್ ಆನಂದ್, ಅಮರ್, ಡಾ.ರೇಖಾ ಅರುಣ್, ಗುರುರಾಜ್, ನಾಗರಾಜ ಪಾಟೀಲ್, ಲಕ್ಷ್ಮಿ, ಎಸ್.ಆರ್.ರೂಪಕುಮಾರ್, ಅಜರುದ್ದೀನ್, ಎನ್.ಶ್ರೀನಿವಾಸಲು, ಶಶಿಕಾಂತ ಹಿಂದಿ ಹಾಡುಗಳನ್ನು ಹಾಡಿ ಬಾಲಿವುಡ್ ಮ್ಯೂಸಿಕಲ್ ಈವೆಂಟ್‌ಗೆ ಮೆರಗು ತಂದುಕೊಟ್ಟರು.

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಒಂದು ಕಾಲದಲ್ಲಿ ಗಲ್ಲಿ ಗಲ್ಲಿಗೆ ಲಗ್ಗೆ ಇಟ್ಟಿದ್ದ 'ಆರ್ಕೆಸ್ಟ್ರಾ' ಪರಂಪರೆ ಪ್ರಸ್ತುತ ಕಾಣೆಯಾಗುತ್ತಿದೆ. ಈ ಕಲೆ ಮುಂದಿನ ಪೀಳಿಗೆಗೂ ಉಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಸಂಗೀತ, ಸಾಹಿತ್ಯ ಒಂದೇ ಸಾಲಿನ ನಾಣ್ಯಗಳು. ಇದು ಒಂದನೊಂದು ಬಿಟ್ಟಿರುವುದಿಲ್ಲ. ಉತ್ತಮ ಕವಿತೆ ರಚನೆಯಾದರೆ, ಉತ್ತಮ ಸಂಗೀತ ಮೂಡುತ್ತದೆ. ಇದು ಸಂಗೀತಗಾರರಿಗೂ ಸಮಾಜದಲ್ಲಿ ಹೆಸರು ತಂದುಕೊಡುತ್ತದೆ. ಹಾಗಾಗಿ ಆರ್ಕೆಸ್ಟ್ರಾ ಕಲಾವಿದರು ಒಂದು ಕಾಲಕ್ಕೆ ಗಲ್ಲಿ ಗಲ್ಲಿಯ ಸ್ಟಾರ್‌ಗಳಾಗಿದ್ದರು. ಈಗ 'ಆರ್ಕೆಸ್ಟ್ರಾ' ಪರಂಪರೆ ಮಾಯವಾಗುತ್ತಿದೆ. ಇಂತಹ ಸಂದರ್ಭ ಗಾಯಕ ಆರ್.ಲಕ್ಷ್ಮಣ್ ನೇತೃತ್ವದ ತಂಡ ಈ ಪರಂಪರೆ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ ಎಂದರು.

ವೇದಿಕೆಯಲ್ಲಿ ಹಿರಿಯ ವೈದ್ಯೆ ಡಾ.ರೇಖಾ ಅರುಣ್, ನಿವೃತ್ತ ಡಿವೈಎಸ್ಪಿ ಟಿ.ಕುಮಾರ್, ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರ ಎನ್.ಶ್ರೀನಿವಾಸಲು ಉಪಸ್ಥಿತರಿದ್ದರು. ಈ ವೇಳೆ ಹಿರಿಯ ಪತ್ರಕರ್ತ ಬನ್ನೂರು ಕೆ.ರಾಜು ಅವರನ್ನು ಸನ್ಮಾನಿಸಲಾಯಿತು.

## ರವೀಂದ್ರ ಶ್ರೀಕಂಠಯ್ಯ ಅವರಿಗೆ ಅಭಿನಂದನೆ....



ಸೋಮವಾರ ಹುಟ್ಟುಹಬ್ಬ ಆಚರಿಸಿಕೊಂಡ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರಿಗೆ ಅಭಿಮಾನಿಗಳು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಈ ವೇಳೆ ಮುಖಂಡರಾದ ಟಿ.ಎಂ.ಹೊಸೂರು ನವೀನ್, ಕಿರಂಗೂರು ಅನಿಲ್, ನಗುವನಹಳ್ಳಿ ಬಾಬು, ಹಂಗರಹಳ್ಳಿ ಪುನೀತ್, ಪ್ರವೀಣ್ ಹಾಗೂ ರಾಕೇಶ್ ಉಪಸ್ಥಿತರಿದ್ದರು.







CORRECTIONS IN DATE OF BIRTH

I Smt V K Reena W/o Sub Maj V M Krishna kumar (Retd.,) Indian Army, Residing at vill: Ballyamandur, Post: Ballyamandur, TEH:Ponnampet, Dist: Kodagu, State: Karnataka -571216, that In my 10th Marks card Adhaar card & Pan card My DOB is 04 March 1983 but in Army official Documents its wrongy Entered as 04 MARCH 1982. hence I here by state & Oath that my DOB is 04 MARCH 1983 Sworn in before notary S pavithra, Mysuru on 08 oct 2024

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಅಕ್ತರ್ ಷರೀಫ್ ರವರ ಮಗ ಏಜಾಜ್ ಷರೀಫ್ ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

### ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರಕೋಡು ಗ್ರಾಮ ದಲ್ಲಿರುವ ಸರ್ವೆ ನಂ. 657/1 ರಲ್ಲಿರುವ ಒಟ್ಟು ವಿಸ್ತೀರ್ಣ 03 ಎಕರೆ 11½ ಗುಂಟೆ ಪೈಕಿ 02 ಎಕರೆ 09½ ಗುಂಟೆ ಇರುವ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ಸರ್ವೆ ನಂ. 521 ರಲ್ಲಿ ಖಾಸಗಿ ಜಮೀನು, ಪಶ್ಚಿಮಕ್ಕೆ: ರಸ್ತೆ ಮತ್ತು ವರುಣಾ ಗಡಿ, ಉತ್ತರಕ್ಕೆ: ಸರ್ವೆ ನಂ. 657/2 ರಲ್ಲಿ ಖಾಸಗಿ ಜಮೀನು ಮತ್ತು ದಕ್ಷಿಣಕ್ಕೆ: ಟಿ.ಎನ್. ಪುರ ರಸ್ತೆ.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– **ಶ್ರೀಲತಾ ದೀಕ್ಷಿತ್**, ವಕೀಲರು
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com



ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



## ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph.0821-2515598 Email: eevccdn2@gmail.com

**ಅಲ್ಪಾವಧಿ ಇ-ಟೆಂಡರ್** ಸಂಖ್ಯೆ: 05/2024-25 ದಿನಾಂಕ: 10.10.2024

**ಇ–ಪೋರ್ಟಲ್ ನಲ್ಲಿ ಮಾತ್ರ**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳಿಗಾಗಿ ಐಟಂವಾರು ದರದ ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗಳಿಟ್ಟ ಕನಿಷ್ಠ ಮೊತ್ತ ರೂ.0.94 ಲಕ್ಷದಿಂದ ರೂ.1.96 ಲಕ್ಷದವರೆಗಿನ 24 ಕಾಮಗಾರಿಗಳ (ನಾಲೆಗಳಲ್ಲಿ ಜಂಗಲ್ & ಹೂಳು ತೆಗೆಯುವ ಕಾಮಗಾರಿಗಳು) ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಪರಿಶಿಷ್ಟ ಜಾತಿಯವರಿಗೆ 05 ಹಾಗೂ ಪರಿಶಿಷ್ಟ ಪಂಗಡದವರಿಗೆ 02 ಕಾಮಗಾರಿಗಳನ್ನು ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳ ವಿವರ, ಟೆಂಡರ್ ಕ್ವರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: **16–10–2024 ಸಾಯಂಕಾಲ 05.30 ಗಂಟೆಗೆ** ಆನ್‌ಲೈನ್ ಮೂಲಕ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: **19–10–2024 ಸಾಯಂಕಾಲ 05.00** ಗಂಟೆಯವರೆಗೆ ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ: **21–10–2024 ಬೆಳಿಗ್ಗೆ 11.00 ಗಂಟೆ**, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

